ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ 2025

ಸಣ್ಣಕತೆಗಳ ಸಂಭ್ರಮ

ಬಿಡಿ ಪ್ರತಿ: ರೂ. 10/–

TEMPLE OF KNOWLEDGE

ಬೀchi ಸಾಹಿತ್ಯ

ಬೀChi Prakashana

1. ರೇಡಿಯೋ ನಾಟಕಗಳು
2. ಮಾತ್ರೆಗಳು
3. ತಿಂಮನ ತಲೆ
4. ದಾಸಕೂಟ
5. ಹುಚ್ಚು ಹುರುಳು
6. ಹನ್ನೊಂದನೆ ಅವತಾರ
7. ಸತೀಸೂಳೆ
8. ಸರಸ್ವತಿ ಸಂಹಾರ
9. ಖಾದೀಸೀರೆ
10. ಬೆಂಗಳೂರು ಬಸ್ಸು
11. ಹೆಣ್ಣು ಕಾಣದ ಗಂಡು
12. ಸತ್ತವನು ಎದ್ದು ಬಂದಾಗ
13. ಬಿನ್ನದ ಕಸ
14. ಕಾಣದ ಸುಂದರಿ
15. ಕಲ್ಲು ಹೇಳಿತು
16. ತಿಮ್ಮ ರಸಾಯನ
17. ದೇವನ ಹೆಂಡ
18. ಏರದ ಬಳೆ
19. ಮೇಡಮ್ಮನ ಗಂಡ
20. ಆಚೋ !
21. ಎಲ್ಲರುವೆ ತಂದೆ ಬಾರೋ
22. ಬಂಗಾರದ ಕತ್ತೆ
23. ಎಲ್ಲರೂ ಸಂಪನ್ನರೇ
24. ಚೀಟ್ ಸಿನೇಮಾ
25. ಬ್ರಹ್ಮಚಾರಿಯ ಮಗ
26. ಬೆಳ್ಳಿ ತಿಂಮ ನೂರೆಂಟು ಹೇಳಿದ
27. ಮೂರು ಹೆಣ್ಣು ಐದು ಜಡೆ
28. ಮುರಿದ ಬೊಂಬೆ
29. ಹುಳಿಯ ಬೆನ್ನ ಮೇಲಿಂದ
30. ಸುನಂದೂಗೆ ಏನಂತೆ ?
31. ಕಮಲಮ್ಮನ ಕುಂಕುಮ ಬಲ
32. 6-7 ಸ್ತ್ರೀ ಸೌಖ್ಯ
33. ಆರಿಷ್ಟು-ಈರಿಷ್ಟು
34. ಸೀತೂ ಮದುವೆ
35. ಲೇವಡಿ ಟೈಪಿಸ್ಟ್
36. ಆರಿದ ಜಿಹಾ
37. ಸಕ್ಕರೆ ಮೂಟೆ
38. ಬೆಳ್ಳಿ ಪತ್ರಗಳು
39. ಮಹಾಯುದ್ಧ
40. ಲಕ್ಷ್ಮೀ ಪೂಜೆ
41. ದೇವರು ಕೊಟ್ಟಿದ್ದು
42. ಅಮ್ಮಾವ್ರ ಕಾಲ್ಗುಣ
43. ಸಾಹುಕಾರ ಸುಬ್ಬಮ್ಮ
44. ಸುಬ್ಬಿ !
45. ಕತ್ತಲಲ್ಲಿ ಬಂದವಳು
46. ಹೆಂಡತಿ ನಕ್ಕಾಗ
47. ಬಿತ್ತಿದ್ದೇ ಬೇವು
48. ಕಾಮಂಣ
49. ಕಾಮಲೋಕ
50. ಮಾತನಾಡುವ ದೇವರುಗಳು
51. ಅಂದನಾ ತಿಂಮ
52. ಸಂಪನ್ನರಿದ್ದಾರೆ ಎಚ್ಚರಿಕೆ
53. ಗರತಿಯ ಗುಟ್ಟು
54. ಕಮಲೆಯ ಓಲೆಗಳು
55. ನಂಬರ್ ಐವತ್ತೈದು
56. ದೇವರಿಲ್ಲದ ಗುಡಿ
57. ಮನೆತನದ ಗೌರವ
58. ಉತ್ತರ ಭೂಪ
59. ಕನ್ನಡ ಎಮ್ಮೆ
60. ಅಮ್ಮನವರ ಇಚ್ಛಾ
61. ನರಪ್ರಾಣಿ
62. ನನ್ನ ಭಯಾಗ್ರಫಿ
63. ದೇವರಿಗೇ ಪ್ರೀತಿ
64. ಬೀchi ಬುಲ್ಲೆಣಿಸ್
65. ಬೀchi ತೋಚಿದ್ದು ಗೀಚಿದ್ದು
66. ಬೊಂಬಾಟ್ ಬೀchi
67. ವಾಗ್ಬಾಣಗಳು (ಗಂಗಾವತಿ ಪ್ರಾಣೇಶ್)
68. ನಗಿಸುವವನ ನೋವುಗಳು (ಗಂಗಾವತಿ ಪ್ರಾಣೇಶ್)
69. **Best of Best** ಬರಹಗಳು ಭಾಗ-1 (ಬಿ.ಎಸ್.ಕೆ)
70. **Best of Best** ಬರಹಗಳು ಭಾಗ-2 (ಬಿ.ಎಸ್.ಕೆ)
71. ಪೊಲೀಸ್ ಏನ್‌ಕೌಂಟರ್ (ಡಾ. ಡಿ.ವಿ. ಗುರುಪ್ರಸಾದ್)
72. ಪೊಲೀಸ್ ಜೀವನದಲ್ಲಿ ಹಾಸ್ಯ (ಡಾ. ಡಿ.ವಿ. ಗುರುಪ್ರಸಾದ್)
73. ವಿಶ್ವ ಪರ್ಯಟನೆ (ಡಾ. ಡಿ.ವಿ. ಗುರುಪ್ರಸಾದ್)
74. ರಾಜೀವ್ ಗಾಂಧಿ ಭೀಕರ ಹತ್ಯೆ
75. ಮರಣದಂಡನೆಗೀಡಾದ ಕುಖ್ಯಾತ ಕೈದಿಗಳು
76. ತ್ರಿಮುಖ
77. ರಕ್ಷ-ಖಾ-NALINI GOWDA
78. ಕವನ ಸಂಕಲನ-ARUNDATHI JOSHI
79. THE PANDEMIC PROSE -VINOD D GANGOLLI
80. AN ATOM OF KNOWLEDGE A RESOURCE OF CURIOUS MINDS -SUBRAY SHAMBHU AVADHANI

MEENA RAMAN BOOKS

81. ESSAYS & POEMS
82. EASY COOKING OF DELICIOUS RECIPES
83. BOOK OF POEMS
84. BIRDS AND OTHER POEMS
85. EASY COOKING OF DELICIOUS RECIPES PART-II
86. CHANDRAYAAN -3 MISSION AND OTHER POEMS (Space Craft)
87. ANECDOTES OF MY STUDENT LIFE
88. EXCERPTS FROM SRIMADH BHAGAVAD GEETA
89. EASY COOKING OF DELICIOUS RECIPES PART-III
90. RAIN AND OTHER POEMS
91. EASY COOKING OF DELICIOUS RECIPES PART-IV
92. SRIMADH BHAGAVAD GEETA

Ph : 080-29731414, Mob : 9845264304.
Website : www.beechi.in

ಕೆಡು ಬಡತನ ಇಳಿಮುಖ

ಗೃಹಬಳಕೆ ಕಂತು ಸಾಲ ಆಸ್ಫೋಟ



" ಆಧುನಿಕ ಬಡಬಗ್ಗರು !"

©Ashok Hemmige

ಸ್ಪರ್ಧೆಯಲ್ಲಿ ಮೊದಲ ಬಹುಮಾನ ನನ್ನ ಮಗನಿಗೇ !

(ಆಗಿನಿಂದಲೂ ಡೈನಾಸ್ಟಿ ಇದ್ದದ್ದೇ !)

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457

www.mallige.com

NABH ACCREDITED

Certificate No.: MC-2068

Established in 1978 we are a multi-speciality, tertiary care hospital.

CARING AND HEALING

126 BEDS
60+ LEADING SPECIALISTS
25+ SPECIALTIES

An institution of heritage in the heart of Bengaluru.

MALLIGE HOSPITAL
PERSONALISED COMPLETE HEALTHCARE

MALLIGE LABS

Mallige Medical Centre Pvt. Ltd.
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್

ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ಹತ್ತು ವರ್ಷದ ಚಂದಾ: ರೂ. 1000/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 43

ಸಂಚಿಕೆ – 03

ಡಿಸೆಂಬರ್–2025

ಈ ಸಂಚಿಕೆಯಲ್ಲಿ...

ಕಿಡಿ	ಪ್ರಕಾಶ್	2
ನಮ್ಮ ನಿಮ್ಮಲ್ಲಿ	ಶಿವಕುಮಾರ್	3
ಅವಿಸ್ಮರಣೀಯ ನಗೆಗಾರರು–5	ಶಿವಕುಮಾರ್	4
ಕುರಿಯರ್	ಆರತಿ ದೇಸಾಯಿ	9
ಅತಿಥಿ ದೇವೋಭವ	ಬೇಲೂರು ರಾಮಮೂರ್ತಿ	12
ರೀಲು ತಾತಾ	ಡಾ. ಶ್ಯಾಮಲಾ ರವಿಶಂಕರ್	15
ಮಾರ್ಮಿಕ ರೋದನ.....!	ವಿ.ವಿಜಯೇಂದ್ರ ರಾವ್	18
ಇಮಿರಿನಿತ್ತನ ಗಣೇಶ ಪ್ರಸಂಗವು	ಅಣಕು ರಾಮನಾಥ್	22
ತುಂತುರು	ದಂನಆ	25
ಕಮಲಮ್ಮನವರ ನಿಟ್ ಪಿಕ್ಕಿಂಗು	ವಾಣೀ ಸುರೇಶ್	26
ಸಂಧ್ಯ ಸಾಂಗ್ಲೀಕರ್	ಪಾಲಹಳ್ಳಿ ವಿಶ್ವನಾಥ್	31
ನಿಮ್ಮ ಜಗಳ ನಮ್ಮ ಜವಾಬ್ದಾರಿ!	ಜಯಶ್ರೀ ದೇಶಪಾಂಡೆ	36

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

For Online payment of Subscription: Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010

ಅಪರಂಜಿ ಕಿಡಿ

● ಪ್ರಕಾಶ್

ಕ್ರಿಕೆಟ್ ಆಟದಲ್ಲಿ ವಿಜೃಂಭಿಸಿ, ಜನಮಾನಸದ ಮನ್ನಣೆಗೆ ಪಾತ್ರರಾದ

ಎಲ್ಲ ತರುಣಿಯರಿಗೆ ಅಪರಂಜಿಯ ಅಭಿನಂದನೆಗಳು. !!

* * *

"ಕಾರಾಗೃಹದಲ್ಲಿ ಮದ್ಯ ಸೇವಿಸಿ, ಖೈದಿಗಳ ನೃತ್ಯ"

–ದಿನಪತ್ರಿಕೆ

ವಿಡಿಯೋ ಎ.ಐ. ಕೈವಾಡದ್ದಲ್ಲ ತಾನೆ?!

* * *

"ಜಾತಿ ಇರುವವರೆಗೆ ಮೀಸಲಾತಿ ಇರಲೇ ಬೇಕು"

–ಮಾನ್ಯ ಮುಖ್ಯಮಂತ್ರಿಗಳು

ಕನಕದಾಸರ ಆತ್ಮ ಎಷ್ಟು ನೊಂದಿತ್ತೋ !!

* * *

"ಮುರಿದುಬಿದ್ದ ಪಾಕ್ ಆಫ್ಘನ್ ಶಾಂತಿ ಮಾತುಕತೆ"

–ಸುದ್ದಿ

ಮಾತಿಗಿಂತ ಕತೆಯೇ ಜೋರು !!

* * *

ವಿಜ್ಞಾನದಿಂದ ಶಾಂತಿ ಸಾಧ್ಯವೇ?

–ಅಭಿಮತ

ಇದು ಯಕ್ಷಪ್ರಶ್ನೆಯಾಗಿ ಉಳಿಯದಿರಲಿ !!

* * *

ಲೆಕ್ಕಾಧಿಕಾರಿಯ ಪತ್ನಿಯ ಖಾತೆಗೆ 6.5 ಕೋಟಿ ವರ್ಗಾವಣೆ

– ಸುದ್ದಿ

ಆತನ ಲೆಕ್ಕ ಎಲ್ಲೋ ಪಾಪ, ತಪ್ಪಾಯಿತೇನೋ !!

* * *

●

ನಮ್ಮ ನಿಮ್ಮಲ್ಲಿ

ಶಿವಕುಮಾರ್

ಸಣ್ಣ ಕತೆಗಳನ್ನು ಆಹ್ವಾನಿಸಿ ನಾವು ಕೊಟ್ಟ ಕರೆಗೆ ಬಹು ಉತ್ಸಾಹದಿಂದ ಸ್ಪಂದಿಸಿ ಅನೇಕ ಲೇಖಕ ಲೇಖಕಿಯರು ತಮ್ಮ ಕತೆಗಳನ್ನು ಕಳಿಸಿದ್ದಾರೆ. ವಿಜಯೇಂದ್ರರಾಯರ ಮಾರ್ಮಿಕ ರೋದನದ ನಿಗೂಢ ವೃತ್ತಾಂತ, ಪಾಲಹಳ್ಳಿಯವರ ಎಂದಿನ ವುಡ್‌ಹೌಸ್ ನಗೆಗಾರಿಕೆ, ಜಯಶ್ರೀಯವರ ಚಮತ್ಕಾರದ ಸಮಸ್ಯಾ ಪರಿಹಾರ, ಬೇಲೂರರ ಅಪೂರ್ವ ಹೃದಯವಂತಿಕೆಯ ಆತಿಥ್ಯ ಇವೆಲ್ಲವೂ ನಿಮ್ಮ ಓದನ್ನು ಇದಿರು ನೋಡುತ್ತಿವೆ. ಆರತಿಯವರ ಕತೆಯಲ್ಲಿ ಹದಿಹರಯದ ಪ್ರೇಮಿಗಳಿದ್ದರೆ, ಶ್ಯಾಮಲಾರವರು ತಾತ ರೀಲು ಬಿಡುವುದನ್ನ ವಿನೋದಮಯವಾಗಿ ರೂಪಿಸಿದ್ದಾರೆ. ಆಸ್ಟ್ರೇಲಿಯಾದ ವಿನಾಯಕ ಪ್ರಸಂಗ ಮತ್ತು ಅಮೆರಿಕೆಯ ಇಡ್ಲಿ ಪೇಚಾಟ ಈ ಸಂಚಿಕೆಯ ಕತೆಗಳಿಗೆ ಅಂತರರಾಷ್ಟ್ರೀಯ ಸೊಗಡನ್ನು ಲೇಪಿಸಿವೆಯೆನ್ನಬಹುದು. ಪುಟಗಳ ಮಿತಿಯ ದೆಸೆಯಿಂದ ಗಣನಾಥರ ಮತ್ತು ಚಿತ್ರಾರಾಮಚಂದ್ರನ್ ಅವರ ಕತೆಗಳನ್ನ ಹಾಗೂ ತುರುವೇಕೆರೆ ಪ್ರಸಾದರ ಅವಳಿ ಬೊಂಬೆಗಳ ಕತೆಯನ್ನ ಮುಂದಿನ ತಿಂಗಳ ಸಂಚಿಕೆಯನ್ನು ಶ್ರೀಮಂತಗೊಳಿಸುವ ಉದ್ದೇಶದಿಂದ ಕಾದಿರಿಸಿದ್ದೇವೆ.

"**ಸಣ್ಣಕಥೆ**" ಎಂದರೇನು? ಎಂಬ ಪ್ರಶ್ನೆ ನನ್ನನ್ನು ಬಹು ದಿನಗಳಿಂದ ಕಾಡುತ್ತಿದೆ. ಕವನ, ಕಾದಂಬರಿ, ಪ್ರಬಂಧ, ನಾಟಕ, ಇವುಗಳ ರೂಪು ರೇಷೆಗಳನ್ನು ನಿರ್ದಿಷ್ಟವಾಗಿ ಗುರುತಿಸುವ ಹಾಗೆ, ಸಣ್ಣಕಥೆಗೂ ತನ್ನದೇ ಆದ ಹಲವು ಲಕ್ಷಣಗಳಿರುತ್ತವೆಯೇ? ಈ ಪ್ರಶ್ನೆಯನ್ನು ನಾನು ಅನೇಕ ಸಾಹಿತಿ ಮಿತ್ರರಿಗೆ ಹಾಕಿ, ಅವರುಗಳಿಂದ ವೈವಿಧ್ಯಮಯ ಉತ್ತರಗಳನ್ನು ಪಡೆದಿದ್ದೇನೆ. ಸಣ್ಣಕಥೆಗೆ ಒಂದು ಪ್ಲಾಟ್ ಇರಬೇಕು, ಯಾವುದಾದ ರೊಂದು ಪಾತ್ರವನ್ನು ಚೆನ್ನಾಗಿ ವಿವರಿಸಿ ಅದಕ್ಕೆ ಜೀವತುಂಬಬೇಕು ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. "**ಕ್ಯಾಟಗರಿ ಕಟ್ಕೊಂಡು ಏನ್ಮಾಡ್ತೀರಾರೀ, ಅಪರಂಜಿಯ ಲೇಖನಗಳು ಓದುಕ್ಕೆ ಸ್ವಾರಸ್ಯವಾಗಿದ್ದು, ತುಟಿಮೇಲೆ ನಗೆ ಅರಳೋಹಾಗೆ ಮಾಡಿದ್ರೆ ಸಾಕಲ್ವೇ** ?" ಅಂತ ಹಲವರು ಉದ್ಗರಿಸಿದರು. ಯಾರು ಏನಾದರೂ ಹೇಳಲಿ ಇದೊಂದು ಪ್ರಯೋಗವನ್ನು ಈ ಬಾರಿ ಮಾಡಿದ್ದೇವೆ. ನಿಮಗೆ ಇಷ್ಟವಾದ ಕಥೆಗಳ ಬಗ್ಗೆ ಖಂಡಿತ ನಮಗೆ ಬರೆದು ತಿಳಿಸಿ. ನಮ್ಮ ಜಿಮೇಲ್ ವಿಳಾಸ ಮೊದಲಪುಟದಲ್ಲಿದೆ.

ಪುನಃ ನಮ್ಮನಿಮ್ಮ ಭೇಟಿ ಹೊಸವರ್ಷದಲ್ಲಿ. ಅಲ್ಲಿಯವರೆಗೆ ಟೇಕ್ ಕೇರ್.

ಶ್ರದ್ಧಾಂಜಲಿ

ಅಪರಂಜಿ ಬಳಗದ ಹಿರಿಯ ಲೇಖಕಿ ಶ್ರೀಮತಿ ಆರತಿ ಘಟಿಕಾರ್ ಅವರು ನಮ್ಮನ್ನು ಅಗಲಿದ್ದಾರೆ. ಬಹಳ ವರ್ಷಗಳಿಂದಲೂ ಅಪರಂಜಿಗೆ ತಮ್ಮ ಲೇಖನಗಳನ್ನು ಬರೆಯುತ್ತಾ ಅಪರಂಜಿ ಬಳಗದವರಾಗಿದ್ದರು. ಅವರ ಅಕಾಲಿಕ ಅಗಲಿಕೆಗೆ ಅಪರಂಜಿ ತನ್ನೆಲ್ಲಾ ಓದುಗರು, ಬರಹಗಾರರ ಪರವಾಗಿ ಮನಮಿಡಿತದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

ಅವಿಸ್ಮರಣೀಯ ನಗೆಗಾರರು–5

ಅ.ರಾ. ಸೇತೂರಾಮರಾವ್ (ಅರಾಸೇ)

ಶಿವಕುಮಾರ್

ಅರಾಸೇ ಅವರ ಪರಿಚಯ ಮನೆ ಮಕ್ಕಳಾದ ನಮಗೆಲ್ಲಾ ನಮ್ಮ ಬಾಲ್ಯದಿಂದಲೇ ಎಂದು ಹೇಳಬಹುದು. ಪ್ರತಿ ತಿಂಗಳ ಮೊದಲ ವಾರ ಕೊರವಂಜಿ ಕೈಗೆ ಬಂದ ಕೂಡಲೇ ನಾನು ಓದುತ್ತಿದ್ದುದು ಅರಾಸೇ ಅವರ ಬರಹ. ಅವರ ಮಧ್ಯಂತರ ಕವಿ ವಿಚಾರ, ಅ.ಕ.ವಿ.ಪ್ರೇ.ಪ, (ಅಂದರೆ ಅಖಿಲ ಕರ್ನಾಟಕ ವಿಫಲ ಪ್ರೇಮಿಜನ ಪರಿಷತ್) ಅ.ರಾಸೇ ಒಸಗೆ (ಉಮರನ ಒಸಗೆ ಧಾಟಿಯಲ್ಲಿ) ಇವೆಲ್ಲಾ ನನ್ನನ್ನು ಅರಾಸೇ ಭಕ್ತನನ್ನಾಗಿ ಮಾಡಿತ್ತು. ಆದರೆ ಇವೆಲ್ಲಾ ಕೇವಲ ಅವರ ಬರಹಗಳ ಮೂಲಕ ಆದ ಪರಿಚಯವಷ್ಟೇ. ಅವರನ್ನು ನಾನು ಮೊದಲು ನೋಡಿದ್ದು 1967ರಲ್ಲಿ ಅವರು ನನ್ನ ಮದುವೆಗೆ ದಯಮಾಡಿಸಿದ್ದಾಗ. ಅದಾದದ್ದು ಹೀಗೆ. ನಮ್ಮ ತಂದೆ ಅವರಿಗೆ ಪತ್ರ ಬರೆದು ಮದುವೆಗೆ ಅವರನ್ನ ಆಹ್ವಾನಿಸಿದ್ದರು. ಆಮೇಲೆ ತಂದೆಯವರು ನನ್ನ ತಮ್ಮನನ್ನು ಕರೆದು, " ಕುಮಾರ್ ಮದುವೆಗೆ ಬರ್ತೀನಿ ಅಂತ ಅರಾಸೇ ಬರೆದಿದ್ದಾನೆ. ಅವತ್ತು ಸಂಜೆ ಆರು ಗಂಚೆ ಹೊತ್ತಿಗೆ ಮನೆ ಹಿಂದಿರೋ ಎಂಟನೇ ಮೇನ್‌ಗೆ ಚಿತ್ರದುರ್ಗ ಬಸ್ ಬರುತ್ತಂತೆ. ಅಲ್ಲಿಗೆ ಹೋಗಿ ಅವನನ್ನು ರಿಸೀವ್ ಮಾಡಿ ಮನೆಗೆ ಕರೆದುಕೊಂಡು ಬಾ. "ಅಂತ ಹೇಳಿದರು." ಅರಾಸೇ ಅವರನ್ನು ನಾನು ನೋಡಿಲ್ಲವಲ್ಲ. ಇವರೇ ಅರಾಸೇ ಅಂತ ಹೇಗೆ ಗುರುತಿಸೋದು?' ಅಂತ ಅವನು ಕೇಳಿದೆ. "ಗೊತ್ತಾಗತ್ತೆ ಹೋಗೋ. ಕೈಯ್ಯಲ್ಲಿ ಒಂದು ಬ್ಯಾಗ್ ಹಿಡ್ಕೊಂಡು ಎಬ್ಬಂಕನ ತರಹ ಯಾರು ಇಳೀತಾರೋ ಅವನೇ ಅ.ರಾ.ಸೇ" ಅಂತ ನಮ್ಮ ತಂದೆ ಅವರದ್ದೇ ಆದ ಧಾಟಿಯಲ್ಲಿ ಹೇಳಿದರು. ಮೊನ್ನೆ ನಾನು ನನ್ನ ತಮ್ಮನನ್ನು ಭೇಟಿಮಾಡಿದ್ದಾಗ ಈ ಲೇಖನ ಬರೆಯುವ ಬಗ್ಗೆ ಪ್ರಸ್ತಾಪಮಾಡಿದೆ. ಆಗ ಅವನೇ ಅಂದು ಆ ಬಸ್‌ಸ್ಟಾಂಡಿನಲ್ಲಾದ ವಿದ್ಯಮಾನಗಳ ಬಗ್ಗೆ ಬೆಳಕು ಚೆಲ್ಲಿದ. "ಅಪ್ಪ ಹೇಳಿದ್ರೂ ಅಂತ ಎಂಟನೇ ಮೇನ್‌ನಲ್ಲಿ ಕಾದು ನಿಂತೆ. ಆರು ಘಂಟೆಗೆ ಅಂದು ಬಸ್ ಬಂದು ನಿಂತಿತು ಅನಂತರ ಹೊರಟಿತೂ ಸಹಾ. ಯಾರೂ ಅದರಿಂದ ಇಳಿಯಲಿಲ್ಲ. ಆಗಿನ್ನೂ ಐದೂ ಮುಕ್ಕಾಲು. ಅಲ್ಲೇ ಇದ್ದ ಬೆಂಚಿನ ಮೇಲೆ ಕೂತೆ. ಹಾಗೇ ಸುತ್ತಮುತ್ತ ಕಣ್ಣಾಡಿಸುತ್ತಿದ್ದಾಗ ಹತ್ತಿರದಲ್ಲೇ ಯಾರೋ ಒಬ್ಬರು ಬ್ಯಾಗ್ ಹಿಡಿದು ನಿಂತಿದ್ದರು. ಬುಧ ಗ್ರಹ ನಿವಾಸಿಯೊಬ್ಬ ಅಚಾನಕ್ಕಾಗಿ ಬಸ್ ಸ್ಟ್ಯಾಂಡಿಗೆ ಬಂದಿಳಿದರೆ ಅವನ ಮುಖದಲ್ಲಿ ಕಾಣುವ ಆಶ್ಚರ್ಯ, ಗಾಬರಿ ಈ ಸಜ್ಜನರ ಮುಖದಲ್ಲಿ ಇತ್ತು. ಇವರೇ ಅರಾಸೇ ಆಗಿದ್ದರೆ? ಅಂತ ಒಂದು ಸಂಶಯ ಮನದಲ್ಲಿ ಮೊಳೆಯಿತು. ಕೇಳೇ ಬಿಡೋಣ ಅಂತ ಧೈರ್ಯಮಾಡಿ ಅವರ ಬಳಿ ಸಾಗಿ, "ನೀವು ಅರಾಸೇ ಅವರಾ?" ಅಂತ ಕೇಳಿದೆ. ಅವರು ನನ್ನನ್ನ ಆಳವಾಗಿ ನೋಡಿ "ಇರಬಹುದು" ಅಂತ ಉತ್ತರಿಸಿದರು. ಅರೆ, ಇದೆಂತಹ ಉತ್ತರ ! " ಹಾಗಂದ್ರೆ ಹೇಗೆ ? ನೀವು ಅರಾಸೇ ಆಗಿದ್ರೆ ನಿಮ್ಮನ್ನ ಕರೆದುಕೊಂಡು ಹೋಗೋಕ್ಕೆ ಬಂದಿದೀನಿ "ಅಂತ ನಾನು ಹೇಳಿದೆ. ಆ ಆಸಾಮಿ ನಕ್ಕು" ನಾನು ಯಾರು ಅಂತ ಅಂತ ನನಗೆ ಗೊತ್ತಿದ್ರೆ ನಾನು ಇಲ್ಲಿ ಯಾಕೆ ನಿಮ್ಮ ಹತ್ರ ಹೆಣಗ್ತಾ ಇದ್ದೆ. ಅದಿರ್ಲಿ ನೀವು ಓಂಪ್ರಕಾಶ್ ತಾನೆ "ಅಂತಂದ್ರು. ಆಮೇಲೆ ಅವರನ್ನ ಮನೆಗೆ ಕರೆತಂದೆ" ಅಂತ ನನ್ನ ತಮ್ಮ ಹೇಳಿದ.

ಕನ್ನಡ ಸಾಹಿತ್ಯದ ಹಾಸ್ಯ ಮತ್ತು ಅಧ್ಯಾತ್ಮ ಎರಡೂ ಪ್ರಕಾರಗಳಲ್ಲಿ ತುಂಬು

ಪ್ರತಿಭೆಯಿಂದ ಕೃಷಿಮಾಡಿ ತಮ್ಮ ಬರಹಗಳಿಂದ ಹಾಸ್ಯಪ್ರಜ್ಞೆ ಎಂಬ ಪದಕ್ಕೆ ಒಂದು ಮೂಲ ಮಾನದಂಡವನ್ನು, ಹಾಗೂ ಅಧ್ಯಾತ್ಮದ ತಿಳಿವಿಗೆ ಒಂದು ಹೊಸ ಸರಳತೆಯನ್ನು ಸೃಷ್ಟಿಸಿದ ಅರಾಸೇ (ಅ.ರಾ.ಸೇತೂರಾಮರಾವ್) 1931ರ ಜನವರಿ ಇಪ್ಪತ್ತಾರರಂದು ಚಿತ್ರದುರ್ಗದ ಬಳಿಯ ಭರಮಸಾಗರದಲ್ಲಿ ಹುಟ್ಟಿ ತಮ್ಮ ಜೀವಿತದ ಬಹುಭಾಗವನ್ನು ಅಲ್ಲಿ ಕಳೆದಿದ್ದರು. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದ ಅರಾಸೇ, ತಮ್ಮ ಲೇಖನ ವ್ಯವಸಾಯವನ್ನು ಪ್ರಾರಂಭಿಸಿದ್ದೇ ಕೊರವಂಜಿ ಪತ್ರಿಕೆಯ ಮೂಲಕ. 1954ರ ಮೇ ತಿಂಗಳ ಕೊರವಂಜಿಯಲ್ಲಿ ಅವರ "ಯದ್ಭವಿಷ್ಯ" ಎಂಬ ಮೊದಲ ಕವನ ಬೆಳಕು ಕಂಡಿತು. ಅಲ್ಲಿಂದ ಪ್ರಾರಂಭವಾದ ಇವರ ಕೊರವಂಜಿ ನಂಟು, 1967ರಲ್ಲಿ ಅಚ್ಚಾದ ಕೊರವಂಜಿಯ ಕೊನೆಯ ಸಂಚಿಕೆಯ ವರೆಗೂ ಅವ್ಯಾಹತವಾಗಿ ನಡೆದುಬಂತು.

ಅಪಾರವಾದ ಓದು, ತಿಳಿವು ಇವುಗಳ ಹಿನ್ನೆಲೆಯನ್ನು ಅರಾಸೇ ಅವರ ಹಾಸ್ಯದಲ್ಲಿ ಗುರುತಿಸಬಹುದಾಗಿತ್ತು. ಪೂಜ್ಯ ಡಿವಿಜಿ ಅವರು ಬರೆದಿದ್ದ "ಉಮರನ ಒಸಗೆ" ಧಾಟಿಯಲ್ಲಿ ಇವರು "ಅರಾಸೇಯ ಒಸಗೆ" ಯನ್ನು ಕೊರವಂಜಿಗೆ ಬರೆದಿದ್ದರು. ಅದರಲ್ಲಿ ತಮ್ಮ ಜೀವನ ದರ್ಶನವನ್ನು ಬಹು ಸರಳವಾಗಿ ಚಿತ್ರಿಸಿರುವುದನ್ನು ಇಲ್ಲಿ ನೋಡಿ.

ಬಾಲ್ಯದಲಿ ನಾನಂದು ಕಾಲೇಜಿನೊಳಗಿರಲು
ಕೇಳಿ ಪ್ರೊಫೆಸರುಗಳೆಲ್ಲರ ಬುರುಡೆಗಳನು
ಪೀಸೀಯೆಮ್ಮಿನಲಿ ಪಲ್ಟಿಯ ಹೊಡೆದು, ಹಿಂತಿರುಗಿ
ಬೆಂಗಳೂರಿಗೆ ಬಂದೆ ಮಂಗನಾಗಿ

ಮತ್ತೆ ಸೆಪ್ಟೆಂಬರಿಗೆ ಕೂತೆ ಅಲ್ಲಿಯೂ ಸೋತೆ
ಬರಿದಾಯ್ತು ಜೇಬು, ಬರಡಾಯ್ತು ಬುದ್ಧಿ
ಕತ್ತೆಯಾದೆನು ಬಳಿಕ ಹೊಳೆಯಿತೆನಗೂ ಸತ್ಯ
ಕಾಫಿ ಪುಡಿಯೊಲು ಬಂದೆ ಚರಟದೊಲು ಪೋಪೆ
ಉದ್ದಗಲ ಆಳದ ತ್ರಿಗಾತ್ರದೀ ವಿಶ್ವವಿದು
ಕಾಲದ ಚತುರ್ಥ ಗಾತ್ರದಲಿ ಸಂಚರಿಪ
4–ಆ ಚಲಚ್ಚಿತ್ರ, ಡೈರೆಕ್ಟ 'ರಿಲ್ಲಪ್ಪ'
ನಾನೆ ಹೀರೋ ! ಮುಗುದೆ ನೀನೆ ಹೀರೋಯಿನ್ !

ಅರಾಸೇ ಅವರ ಬರಹ ಕಾರಿಡಾರ್ ಕ್ರಿಕೆಟ್ ಸದಾ ನೆನಪಿನಲ್ಲಿ ಉಳಿಯುವಂತಹ ನಗೆ ಲೇಖನ. ಇದರಲ್ಲಿ " ಮಿತ್ರ" ನೊಬ್ಬ ತಾನು ಕಂಡ ವಿದ್ಯುಲ್ಲತಾಕ್ಷಿಯ ಮೇಲೆ ರಚಿಸಿರುವ ಕವನದ ಸಾಲುಗಳು ಇಂತಿವೆ.

ಓ ಲತಾಂಗಿಯೆ ಕೇಳು ನಾನು ಕವು ಒರಟ
ನಿನಗಾಗಿ ಹೊಲಿಸಿಹೆನು ಹಳದಿ ಬುಷ್ಷರಟ
ನೀನಿಲ್ಲದಿರೆ ಬಾಳು ಕೊಬರಿಯಿಲ್ಲದ ಕರಟ
ಹುಳಿಹಿಂಡಿ ಬಳಿಕುಳಿದ ಹುಣಸೆಹಣ್ಣಿನ ಚರಟ

ಅರಾಸೇ ತಮ್ಮ ಬರಹಗಳಿಗೆ ಆರಿಸದ ವಸ್ತುವಿಲ್ಲ. ಅವರ ವೈವಿಧ್ಯಮಯ ಲೇಖನಗಳು

ಚಿನ್ನದಂತೆ ಹಾಸ್ಯಲೇಪದಿಂದ ಹೊಳೆಯುತ್ತಿದ್ದವು. ಒಮ್ಮೆ ಖ್ಯಾತ ಕಾದಂಬರಿಕಾರ್ತಿ ಶ್ರೀಮತಿ ತ್ರಿವೇಣಿ ಅವರು ಕೊರವಂಜಿಗೆ ಪತ್ರವೊಂದನ್ನು ಬರೆದು "ಹಿಂದಿನ ಕೊರವಂಜಿ ಸಂಚಿಕೆಗಳಲ್ಲಿ ತುಂಬಾ ನಗು ಬರಿಸುವಂತಹ" ರಂಗಪ್ಪ ಮತ್ತು ರಾವಣಭಾತ್ "ತರಹದ ಲೇಖನಗಳಿರುತ್ತಿದ್ದವು. ಈಗಿನ ಕೊರವಂಜಿ ಸಂಚಿಕೆಗಳಲ್ಲಿ ಕೇವಲ ರಾಜಕೀಯ ವಿಡಂಬನೆಗಳಿವೆ ಇಂತಹ ಲೇಖನಗಳನ್ನು ಓದಿದರೆ ನಗು ಬರುವುದಿಲ್ಲ" ಅಂತ ಬರೆದಿದ್ದರು. ಅದರ ಮುಂದಿನ ಸಂಚಿಕೆಯಲ್ಲಿ ಅರಾಸೇ ಅವರ ಲೇಖನ "ಮಾಲಕ್ಷ್ಮಕ್ಕ ಶ್ಯಾವಿಗೆ ಮಾಡಿದ್ದು" ಎಂಬ ಲೇಖನ ಪ್ರಕಟವಾಯಿತು. ಲೇಖನದ ಪ್ರಾರಂಭದಲ್ಲಿಯೇ ಅರಾಸೇ ಹೀಗೆ ಬರೆಯುತ್ತಾರೆ.

"ರಾವಣಭಾತಿನ ರುಚಿಯನ್ನೇ ಬಯಸಿದ ತ್ರಿವೇಣಿಯವರಿಗೂ ಸಪ್ಪೆ ಶ್ಯಾವಿಗೆ ಬಯಸಿದ ಮಾಲಕ್ಷ್ಮಕ್ಕನಿಗೂ ಹತ್ತಿರದ ಹೋಲಿಕೆ ಇದೆ. ಮಾಲಕ್ಷ್ಮಕ್ಕನಿಗೂ (ತ್ರಿವೇಣಿಯವರಂತೆ) ರಾಡಕೀಯದಲ್ಲಿ ಆಸಕ್ತಿ ಇಲ್ಲ. ಅವರಂತೆಯೇ ಇವಳಿಗೂ ಕೊರವಂಜಿಯನ್ನು ಓದಿದರೆ ನಗು ಬರುವುದಿಲ್ಲ. ಆದರೆ ಮಾಲಕ್ಷ್ಮಕ್ಕ ಮನೋವಿಶ್ಲೇಷಣಾತ್ಮಕ ಕಾದಂಬರಿಗಳನ್ನು ಬರೆಯುವುದಿಲ್ಲವಲ್ಲ ? ಎಂದರೆ ತ್ರಿವೇಣಿಯವರಿಗೆ ಮಾಲಕ್ಷ್ಮಕ್ಕನ ಹಾಗೆ ಶ್ಯಾವಿಗೆ ಮಾಡುವುದಕ್ಕೆ ಬರುವುದಿಲ್ಲವಲ್ಲ....."

ಇಂತಹ ಕಚಗುಳಿಯಿಡುವ ಚಿಂತನಾ ತರಂಗಗಳು ಅರಾಸೇಯವರ ಲೇಖಣಿಯಿಂದ ಸದಾ ಮೂಡಿಬರುತ್ತಿದ್ದವು.

ಅರಾಸೇ ಬರಹಗಳೆಂದರೆ ನಮ್ಮ ತಂದೆ ರಾಶಿಯವರಿಗೆ ತುಂಬಾ ಅಚ್ಚುಮೆಚ್ಚು. ಅರಾಸೇ ಅವರ "ಸುಳಿನಗು" ಎಂಬ ನಗೆಬರಹಗಳ ಸಂಕಲನಕ್ಕೆ ರಾಶಿ ಅವರು ತಮ್ಮ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ.

"ಪಾಶ್ಚಾತ್ಯ ಭಾಷೆಗಳಲ್ಲಿ–ಅಥವಾ ತಮಿಳು ತೆಲುಗು ಭಾಷೆಗಳಲ್ಲಾದರೂ ನಿನ್ನಂತಹ ನಗು ಮನೋಧರ್ಮದ ಪ್ರಚಂಡನಿಗೆ–ಶ್ರೀಯೂ, ಯಶಸ್ಸೂ, ಶ್ರೇಯಸ್ಸೂ ದೊರೆಯುತ್ತಿತ್ತು. ಇದನ್ನು ನೆನೆಸಿಕೊಂಡು ನಗು. ನಕ್ಕು ಹಾಡು. ಕನ್ನಡವೆನೆ ಎನ್ನದೆ ಕುಣಿದಾಡುವುದು. ಅದಕ್ಕೇ ಕನ್ನಡದಲ್ಲಿ ಕೊರಗುತ್ತಾ ಹಾಸ್ಯದ ಲೇಖನಗಳನ್ನು ಬರಿ. ಸುಂದರವಾಗುತ್ತವೆ ಅವು."

ಅರಾಸೇ ಅವರ ಆಸಕ್ತಿ ಹಾಸ್ಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅಧ್ಯಾತ್ಮ ವ್ಯಾಸಂಗದತ್ತ ಅವರು ತಮ್ಮ ಒಲವನ್ನು ಮೊದಲಿನಿಂದ ಬೆಳೆಸಿಕೊಂಡು ಬಂದಿದ್ದರು. ತನ್ನಡ ಭಗವದ್ಗೀತೆ, ಮಹಲಿಂಗರಂಗ ಕವಿಯ ಅನುಭವಾಮೃತಕ್ಕೆ ತಾತ್ಪರ್ಯ, ಶ್ರೀ ಶಂಕರಲಿಂಗ ಭಗವಾನ್ ಸರಸ್ವತಿ ಪರಮಹಂಸರ ಜೀವನ ಚರಿತ್ರೆಯಾದ ಶ್ರೀಗುರು ಕಥಾಮೃತ, ತುಂಬಿಗೆರೆಯ ಶ್ರೀ ಬ್ರಹ್ಮಾನಂದರ ವೃತ್ತಾಂತ, ಸುಂದರಕಾಂಡ ಈ ಹಲವು ಪುಸ್ತಕಗಳು ಅರಾಸೇಯವರ ಪ್ರತಿಭೆ ಹಾಗೂ ಆಳವಾದ ಅಧ್ಯಾತ್ಮ ಜ್ಞಾನವನ್ನು ಬಿಂಬಿಸುತ್ತವೆ. ಕುಮಾರವ್ಯಾಸನು ರಚಿಸಿರುವ ಕರ್ನಾಟ ಭಾರತ ಕಥಾಮಂಜರಿಯ ಎಲ್ಲ ಶ್ಲೋಕಗಳಿಗೆ ವಿವರವಾದ ತಾತ್ಪರ್ಯವನ್ನು ಬರೆದು ಪ್ರಕಟಿಸಿರುವ "ತಾತ್ಪರ್ಯ ಸಹಿತ ಕುಮಾರವ್ಯಾಸ ಭಾರತ" ಗ್ರಂಥವು ಅರಾಸೇಯವರು ರಚಿಸಿರುವ ಮೇರುಕೃತಿ ಎಂದು ಹೇಳಬಹುದು. 1300 ಪುಟಗಳನ್ನು ಮೀರಿದ ಈ ಪುಸ್ತಕ ರಚನಾ ಕಾರ್ಯದಲ್ಲಿ ಅನೇಕ ವರ್ಷಗಳ ಕಾಲ ಅತ್ಯಂತ ಶ್ರದ್ಧೆಯಿಂದ ಅರಾಸೇ ತಮ್ಮನ್ನು ತೊಡಗಿಸಿಕೊಂಡದ್ದನ್ನು ನಾನೇ ನೋಡಿದ್ದೇನೆ. ಅರಾಸೇ ಸಂಶೋಧನೆ ನಡೆಸಿ ಬರೆದಿರುವ "ಪರಮಾರ್ಥ ಪದಕೋಶ" ಅಧ್ಯಾತ್ಮ ವ್ಯಾಸಂಗವನ್ನು ಕೈಗೊಂಡಿರುವ ಎಲ್ಲ ಮುಮುಕ್ಷುಗಳಿಗೆ ಒಂದು ದಾರಿದೀವಿಗೆ.

ಇಪ್ಪತ್ತೈದು ವರ್ಷಗಳ ಕಾಲ ನಗೆ ರಸಿಕರನ್ನು ರಂಜಿಸಿ ಕೊರವಂಜಿ ಕಾಡಿಗೆ ತೆರಳಿದ ಬಳಿಕ ಹಲವು ಕಾಲ ಜನರ ಓದಿಗೆ ಹಾಸ್ಯಸಾಹಿತ್ಯವಿಲ್ಲದಿರುವ ಕೊರತೆ ಕಾಣಿಸಿತು. ಈ ಕೊರತೆಯನ್ನು ನೂಗಲು ಅರಾಸೇ ಮುಂದೆ ಬಂದರು. 1983ರಲ್ಲಿ ಒಮ್ಮೆ ಅರಾಸೇ, ತಮ್ಮ ಗೆಳೆಯ ಶ್ರೀ ಶೇಷಗಿರಿ ರಾಯರೊಂದಿಗೆ ಕೊರವಂಜಿಯನ್ನು ಪುನಃ ಪ್ರಾರಂಭಿಸಲು ಒಪ್ಪಿಗೆ ಪಡೆಯುವ ಉದ್ದೇಶದಿಂದ ನಮ್ಮ ಮನೆಗೆ ಬಂದಿದ್ದರು. ರಾಶಿಯವರು, "ಕಾಡಿಗೆ ಹೋಗಿರುವ ಕೊರವಂಜಿ ಕಾಡಿನಲ್ಲೇ ನಲಿದಾಡುತ್ತಿರಲಿ. ಅವಳನ್ನು ಅಪರಂಜಿಯಾಗಿಸಿ ನಾಡಿನಲ್ಲಿ ನಲಿದಾಡಿಸಿ. ಅಪರಂಜಿಯು ಚಿರಕಾಲ ನಗುತ್ತಾ ನಗಿಸುತ್ತ ಬಾಳಲಿ." ಎಂದು ಹೇಳಿ ಅವರನ್ನು ಆಶೀರ್ವದಿಸಿ ಬೀಳ್ಕೊಟ್ಟರು.

1983ನೇ ಇಸವಿ ಅಕ್ಟೋಬರ್ ತಿಂಗಳು ಅಪರಂಜಿಯ ಮೊದಲ ಸಂಚಿಕೆ ಬಿಡುಗಡೆಯಾಯಿತು. ಅಪರಂಜಿಯ ಬಿಡುಗಡೆಯ ಸಮಾರಂಭದ ದಿನ, ಶಿವಮೊಗ್ಗ ಸುಬ್ಬಣ್ಣ, ಮತ್ತು ನಾನು ಇಬ್ಬರೂ ಬೆಂಗಳೂರಿನಿಂದ ಹೊರಟು ಸಮಾರಂಭದ ಪ್ರಾರಂಭದ ಹೊತ್ತಿಗೆ ಚಿತ್ರದುರ್ಗ ಸೇರಿದೆವು.

ಸ್ವಾಗತ ಭಾಷಣ ಮಾಡಿದ ಅರಾಸೇ, ತಮ್ಮ ಮಾತಿನ ಮಧ್ಯೆ, "ಅಪರಂಜಿ ಪ್ರಾರಂಭಕ್ಕೆ ಈ ಭಾನುವಾರ ಸಂಜೆ ನಾಲ್ಕೂವರೆಯೇ ಆಗಬೇಕಿತ್ತೇ ? ಹೇಳಿಕೇಳಿ ರಾಹುಕಾಲದ ಪ್ರಾರಂಭ ಅಂತ ಹಲವರು ನನ್ನನ್ನ ಟೀಕಿಸಿದರು. ನಾನು ಅವರಿಗೆ ಹೇಳುವುದಿಷ್ಟೇ. ನಮ್ಮ ಗುರುಗಳು ಇದು ಅಮೃತ ಘಳಿಗೆ. ಈಗ ಪ್ರಾರಂಭವಾದ ಯಾವುದೇ ಚಟುವಟಿಕೆ ನಿರಂತರವಾಗಿ ನಡೆಯುತ್ತದೆ ಅಂತ ಹೇಳಿದರು. ಅಪರಂಜಿಗೆ ಭವ್ಯವಾದ ಭವಿಷ್ಯ ಸಿಗಲಿ ಎಂಬ ಉದ್ದೇಶದಿಂದ ರಾಹುಕಾಲವಾದರೂ ಈಗಲೇ ಪತ್ರಿಕೆಯನ್ನು ಬಿಡುಗಡೆ ಮಾಡಲು ನಿಶ್ಚಯಿಸಿದ್ದೇವೆ" ಎಂಬ ಅರ್ಥಬರುವ ಮಾತುಗಳನ್ನು ಹೇಳಿದ್ದರು.

ಅಪರಂಜಿಯ ಪ್ರಾರಂಭದ ದಿನಗಳಲ್ಲಿ ನನಗೆ ಅರಾಸೇ ಮತ್ತು ಶೇಷಗಿರಿ ಇವರುಗಳಿಂದ ದೊರೆತ ಪ್ರೋತ್ಸಾಹ ಸಹಾಯಗಳನ್ನು ಎಂದಿಗೂ ಮರೆಯುವಂತಿಲ್ಲ. ಎರಡು ತಿಂಗಳಿಗೊಮ್ಮೆಯಾದರೂ ನಾನು ಅರಾಸೇಯವರನ್ನು ನೋಡಲು ಭರಮಸಾಗರಕ್ಕೆ ಹೋಗಿ ಬರುತ್ತಿದ್ದೆ. ನನ್ನ ಜೊತೆಗೆ ಅಪರಂಜಿ ಬಳಗದ ಯಾರಾದರೂ ಇದ್ದೇ ಇರುತ್ತಿದ್ದರು. ಒಂದು ಭಾನುವಾರ ನಾನು ಬರುತ್ತೇನೆಂದು ಅರಾಸೇಗೆ ಪತ್ರ ಬರೆದು ತಿಳಿಸಿದ್ದೆ ಅವರಿಗೆ ಫೋನ್ ಇರಲಿಲ್ಲ. ನನ್ನ ಜೊತೆ ತರುಣ ಎಂ.ಎಸ್ ಶ್ರೀರಾಮ್ ಇದ್ದರು. ನನ್ನ ಕಾರಿನಲ್ಲಿ ಬೆಳಗ್ಗೆ ಎಂಟಕ್ಕೆ ಮನೆ ಬಿಟ್ಟೆವು. ಭರಮಸಾಗರಕ್ಕೆ ಮೂರು ಗಂಟೆ ಪಯಣ. ಚಿತ್ರದುರ್ಗದಲ್ಲಿ ಶೇಷಗಿರಿಯನ್ನು ಪಿಕ್‌ಅಪ್ ಮಾಡಿ ಭರಮಸಾಗರ ಸೇರಿದಾಗ ಹನ್ನೊಂದಾಗಿತ್ತು. ಅರಾಸೇ ಅವರ ಮನೆಯಲ್ಲಿ ಅವರ ಪತ್ನಿ ಸರಸ್ವತಿ ಇದ್ದರು. ಆಕೆ ನಮ್ಮಿಬ್ಬರನ್ನು ಆದರದಿಂದ ಸ್ವಾಗತಿಸಿ ಕಾಫಿ ಕೊಟ್ಟರು. ಅರಾಸೇಯವರ ಸುಳಿವೇ ಕಾಣಲಿಲ್ಲ. ನಾನು ಕೇಳಿದೆ. ಅವರು ಬೆಳಗ್ಗೆ ತಾನೇ ಕೊಮಾರನ ಹಳ್ಳಿಗೆ ಹೊರಟರು ಇಂದು ಭಗವಾನರ ಜಯಂತಿ ಅಲ್ಲವೇ ಅಂತ ಉತ್ತರ ಬಂತು. ಕೊಮಾರನ ಹಳ್ಳಿ ಇರುವುದು ದಾವಣಗೆರೆ ಹತ್ತಿರ. ನಾನು ಶೇಷಗಿರಿ ಮುಖ ನೋಡಿದೆ. ಒಂದು ವಾರದ ಹಿಂದೆಯೇ ನಿಮ್ಮ ಕಾಗದಗಳು ನಮ್ಮಿಬ್ಬರಿಗೂ ಬಂದಿದ್ದವು. ಬಹುಶಃ ನೀವು ಬರುವ ಕಾರ್ಯಕ್ರಮ ಅವರಿಗೆ ಮರೆತುಹೋಗಿರಬೇಕು. ಅಂತ ಶೇಷಗಿರಿ ಹೇಳಿದರು. ಕೊಮಾರನ ಹಳ್ಳಿ ಇರುವುದು ದಾವಣಗೆರೆ ಬಳಿ. ಎರಡು ಗಂಟೆ ಪಯಣ. "ಏನು ಮಾಡೋಣ?" ಅಂತ ಶ್ರೀರಾಮ್‌ನನ್ನು ಕೇಳಿದೆ. "ಅಲ್ಲಿಗೇ ಹೋಗೋಣ" ಅಂತ ಹೇಳಿದ. ಸರಿ, ಚಿತ್ರದುರ್ಗದಲ್ಲಿ ಪೆಟ್ರೋಲ್ ತುಂಬಿಸಿ ಕೊಮಾರನಹಳ್ಳಿಗೆ ಹೊರಟೆವು. ಶಂಕರಲಿಂಗ ಭಗವಾನ್ ಆಶ್ರಮ ಸೇರಿದಾಗ

ಸರಿಯಾಗಿ ಒಂದು ಘಂಟೆ. ನಾವು ಆಶ್ರಮದೊಳಗೆ ನಡೆದಾಗ ಮಂಗಳಾರತಿ ಶುರುವಾಯಿತು. ಮಂಗಳಾರತಿಯಾದ ಮೇಲೆ ಎಲ್ಲರೂ ಪ್ರಸಾದಕ್ಕಾಗಿ ಕುಳಿತಾಗ " ಕೊಮಾರನ ಹಳ್ಳಿಗೇ ನೇರವಾಗಿ ಬಂದುಬಿಡಿ ಅಂತ ಕಾಗದ ಬರೆದಿದ್ದೆನಲ್ಲಾ " ಅಂತ ಅರಾಸೇ ಹೇಳಿದರು. " ಪೋಸ್ಟ್ ಮಾಡಿದ್ದಿರಾ ?" ಅಂತ ಶೇಷಗಿರಿ ಲೇವಡಿ ಮಾಡಿದರು. ಕೊಮಾರನಹಳ್ಳಿಯಿಂದ ಭರಮಸಾಗರಕ್ಕೆ ಹಿಂತಿರುಗುವಾಗ ಕರ್ಣನ ಬಗ್ಗೆ ಕುಮಾರವ್ಯಾಸನಿಗಿದ್ದ ಅಭಿಮಾನವನ್ನು ಕುರಿತು ಅರಾಸೇ ಕೊಟ್ಟ ವ್ಯಾಖ್ಯಾನವನ್ನು ಎಂದಿಗೂ ಮರೆಯುವಂತಿಲ್ಲ. ಅರಾಸೇ ಯವರನ್ನು ಭರಮಸಾಗರದಲ್ಲಿ, ಶೇಷಗಿರಿಯವರನ್ನು ಚಿತ್ರದುರ್ಗದಲ್ಲಿ ಬಿಟ್ಟು, ಶ್ರೀರಾಮ್ ಮತ್ತು ನಾನು ಬೆಂಗಳೂರಿನ ಕಡೆ ಹೊರಟೆವು. ದಾರಿಯುದ್ದಕ್ಕೂ ಶ್ರೀರಾಮ್‌ಗೆ ಕರ್ಣನ ಗುಂಗೇ ಆವರಿಸಿತ್ತು.

ಸಾಹಿತ್ಯ ಕ್ಷೇತ್ರದಲ್ಲಿ ಉತ್ತುಂಗಕ್ಕೇರಿ, ಕೊರವಂಜಿ ಅಪರಂಜಿ ಪರಂಪರೆಗೆ ಭದ್ರ ಬುನಾದಿ ದಯಪಾಲಿಸಿದ ನಮ್ಮೆಲ್ಲರ ನೆಚ್ಚಿನ ಅರಾಸೇ 2015ರಲ್ಲಿ ನಮ್ಮನ್ನಗಲಿದರು. ಅವರ ಆಶೀರ್ವಾದಗಳು ಅಪರಂಜಿಗೆ ಸದಾಕಾಲ ಇರಲಿ.

■

ದಾಂಪತ್ಯದ ಸಿಹಿ ಕಹಿ

ಒಂದು

ಮದುವೆಯ ನಂತರದ ಜೀವನ ಬಹಳ ಕಷ್ಟಕರವಾದ್ದರಿಂದ ಗಂಡ ಹೆಂಡತಿ ಇಬ್ಬರೂ ಸಂಸಾರ ಸಮಾಲೋಚನ ಪರಿಣಿತರ ಬಳಿ ಹೋದರು. ಅಲ್ಲಿ ಹೋಗಿ ಕೂತೊಡನೇ ಗಂಡ ಹೆಂಡತಿಯ ಬಗೆಗೆ ದೂರಿನ ಒಂದು ದೊಡ್ಡ ಪಟ್ಟಿಯನ್ನೇ ಪರಿಣಿತರ ಮುಂದೆ ಇಟ್ಟ. ಅದನ್ನು ನೋಡಿದ ಅವರು ಓ ನಿಮ್ಮ ಹೆಂಡತಿಯ ಬಗ್ಗೆ ನೀವು ನೀಡುತ್ತಿರುವ ಬಹಳ ದೊಡ್ಡ ದೂರಿನ ಪಟ್ಟಿ ಅಂದು ಹೆಂಡತಿಯ ಕಡೆ ತಿರುಗಿ ಮೇಡಂ ನಿಮ್ಮ ದೂರಿನ ಪಟ್ಟಿ ಎಲ್ಲಿ ಎಂದು ಕೇಳಿದರು. ಅದಕ್ಕೆ ಹೆಂಡತಿ ನನ್ನಲ್ಲಿ ದೂರಿನ ಪಟ್ಟಿ ಇಲ್ಲ ಒಂದೇ ಸಾಲಿನ ದೂರು ಇದೆ ಅಂತ ಹೇಳಿದಳು. ಏನದು ಅಂತ ಕೇಳಿದ್ದಕ್ಕೆ ನನ್ನ ಗಂಡ ಬಹಳ ಸುಳ್ಳು ಹೇಳುತ್ತಾರೆ ಅಂದಳು.

ಎರಡು

ಹೆಂಡತಿ ಗಂಡನಿಗೆ ತನ್ನ ಒಂದು ಡ್ರೆಸ್ ತೋರಿಸಿ ರೀ ಇದು ನಾನು ಯಾವಾಗ ತಗೊಂಡಿದ್ದು ಗೊತ್ತಾ ಅಂತ ಕೇಳಿದಾಗ ಗಂಡ ದೀಪಾವಳಿಗೆ ಅಂದ. ಇಲ್ಲ ಸಂಕ್ರಾಂತಿಗೆ ಅಂದಳು ಹೆಂಡತಿ. ಇನ್ನೊಂದು ಡ್ರೆಸ್ಸು ತೋರಿಸಿ ಹೋಗ್ಲಿ ಇದು ಯಾವಾಗ ತಗೊಂಡಿದ್ದು ಹೇಳಿ ಅಂದಾಗ ಗಂಡ ಇದು ಗಣೇಶನ ಹಬ್ಬಕ್ಕೆ ಅಂದ. ಸುಳ್ಳು ಇದು ನನ್ನ ಹುಟ್ಟಿದ ಹಬ್ಬಕ್ಕೆ ತಗೊಂಡಿದ್ದು. ನಿಮಗೆ ಒಂದು ಚೂರೂ ನೆನಪಿರಲ್ಲ ಅಂದಳು. ಅದಕ್ಕೆ ಗಂಡ ನನಗೆ ಯಾವ ಡ್ರೆಸ್ಸು ಯಾವ ಸಂದರ್ಭಕ್ಕೆ ಅಂತ ಖಂಡಿತಾ ಗೊತ್ತಿರೋಲ್ಲ ಆದರೆ ಡ್ರೆಸ್ಸುಗಳಿಗೆ ಎಷ್ಟು ದುಡ್ಡು ಕೊಟ್ಟಿದ್ದೀನಿ ಅನ್ನೋದು ನೆನಪಿರುತ್ತೆ ಅಂದ.

ಕುರಿಯರ್

ಆರತಿ ದೇಸಾಯಿ

ಮಾಗಿಯ ಬೆಳಗಿನ ಬಿಸಿಲು. ಪಾರ್ಕಿನ ಬೆಂಚೊಂದರ ಮೇಲೆ ಕುಳಿತಿದ್ದ ಆ ಯುವತಿ ಹತ್ತಿರದ ಸರೋವರದಲ್ಲಿ ತೇಲಿ ಸಾಗುತ್ತಿದ್ದ ಬಾತುಕೋಳಿಗಳ ಗುಂಪನ್ನೇ ದಿಟ್ಟಿಸಿ ನೋಡುತ್ತಿದ್ದಳು. ಯೌವನದ ಸಂಭ್ರಮ ತುಂಬಿದ್ದ ಆಕೆಯ ಮುಖದಲ್ಲಿ ಎಲ್ಲೋ ಒಂದು ಕಡೆ ಸ್ವಲ್ಪ ಆತಂಕದ ಛಾಯೆ ಇದ್ದಂತೆ ಕಂಡರೂ, ಅದು ತೀರ ಈಚಿನದ್ದಿರಬಹುದಾಗಿದ್ದರಿಂದಲೋ ಏನೋ ಅವಳ ಸಹಜ ಜೀವನೋತ್ಸಾಹವನ್ನು ಕಂದಿಸಲು ಅದು ಶಕ್ತವಾಗಿರಲಿಲ್ಲ. ಆ ಬೆಂಚಿನ ಮುಂದೆ ಹಾದು ಹೋಗಿದ್ದ ಕಾಲುದಾರಿಯಲ್ಲಿ, ಒಬ್ಬ ತರುಣ ನಡೆದು ಬರುತ್ತಿದ್ದ. ಅವನ ಹಿಂದೆ ಒಬ್ಬ ಚಿಲ್ಟಾರಿ ಒಂದು ಸೂಟ್‌ಕೇಸ್ ಹೊತ್ತು ಅವನನ್ನು ಅನುಸರಿಸುತ್ತ ನಡೆದಿದ್ದ. ಬೆಂಚಿನ ಮೇಲೆ ಕುಳಿತಿದ್ದ ಯುವತಿ ಅವನ ಕಣ್ಣಿಗೆ ಬಿದ್ದ ತಕ್ಷಣ ಆ ತರುಣನ ಮುಖ ಒಂದು ಕ್ಷಣ ಕೆಂಪೇರಿ, ನಂತರ ಮೊದಲಿನಂತಾಯಿತು. ಯುವತಿ ಆತನನ್ನು ಗಮನಿಸಿದಂತೆ ಕಾಣಲಿಲ್ಲ. ಆತ ಮುಂದುವರೆದು ಹತ್ತಿರದಲ್ಲೇ ಇದ್ದ ಇನ್ನೊಂದು ಬೆಂಚಿನ ಮೇಲೆ ಕುಳಿತ. ಆ ಚಿಲ್ಟಾರಿ ಸೂಟ್‌ಕೇಸನ್ನು ನೆಲದ ಮೇಲಿಟ್ಟು, ತುಂಟ ದೃಷ್ಟಿಯಿಂದ ತರುಣನನ್ನೇ ನೋಡುತ್ತ, ಅಲ್ಲೇ ನಿಂತ. ತರುಣ ಒಂದು ಕರವಸ್ತ್ರವನ್ನ ಜೇಬಿನಿಂದ ಹೊರತೆಗೆದು ಮುಖ ಒರೆಸಿಕೊಂಡ. ತುಂಬ ಚೆನ್ನಾಗಿದ್ದ ಕರವಸ್ತ್ರವದು. ಒರೆಸಿಕೊಂಡ ಮುಖವೂ ಸಹಾ ಚೆನ್ನಾಗಿಯೇ ಇತ್ತು. ಆ ಮುಖದ ಒಡೆಯನೂ ಯಾವ ಕಳಪೆಯೂ ಇಲ್ಲದ ಸುಂದರಾಂಗ ಅನ್ನಿ.

ತರುಣ ತನ್ನ ಜೇಬಿನಿಂದ ಒಂದು ನಾಣ್ಯ ತೆಗೆದು ಆ ಹುಡುಗನಿಗೆ ಕೊಡುತ್ತಾ, "ನೋಡು ಮರಿ. ಆ ಬೆಂಚಿನಲ್ಲಿ ಕೂತಿರೋ ಆ್ಯಂಟೀ ಹತ್ರ ಹೋಗಿ, ನಾನು ಇವತ್ತೇ ಬೇರೆ ಊರಿಗೆ ಹೊರಟಿದ್ದೇನೆ ಅಂತ ಹೇಳು. ನಾನು ಅವಳನ್ನ ಮಾತಾಡಿಸಬಾರದು, ಪತ್ರ ಬರೆಯಬಾರದು ಅಂತ ಅವಳು ಬಹಳ ಕಟ್ಟುನಿಟ್ಟಾಗಿ ಹೇಳಿರೋದ್ರಿಂದ ನಾನು ಈ ರೀತಿ ನಿನ್ನ ಮೂಲಕ ಸಂದೇಶ ರವಾನೆ ಮಾಡಿ, ಅವಳ ನ್ಯಾಯಪ್ರಜ್ಞೆಗೆ ಒಂದು ಕೊನೇ ಅಹವಾಲು ಸಲ್ಲಿಸಬೇಕಾಯ್ತು ಅಂತಲೂ ಹೇಳು. ಅನ್ಯಾಯವಾಗಿ ಒಬ್ಬರ ಮೇಲೆ ತಪ್ಪು ಹೊರಿಸಿ ಅವನನ್ನ ಅಪಾದಿತನಂತೆ ಕಾಣುವುದು, ಅವನಿಗೆ ನಿಜ ಪರಿಸ್ಥಿತಿಯನ್ನ ವಿವರಿಸಲೂ ಅವಕಾಶವನ್ನು ಕೊಡದಿರುವುದು, ಇವೆಲ್ಲಾ ನನಗೆ ತಿಳಿದಿರೋ ಮಟ್ಟಿಗೆ ಅವಳ ಸ್ವಭಾವಕ್ಕೆ ತೀರ ವಿರುದ್ಧ ಅಂತ ಹೇಳು. ಈ ರೀತಿ ನಿನ್ನ ಮೂಲಕ ಸಂದೇಶ ರವಾನೆ ಮಾಡಿದ್ದೂ ಸಹ ತಪ್ಪು ಅಂತ ನನಗೆ ತಿಳಿದಿದೆ. ಆದರೆ ಬೇರೆ ಮಾರ್ಗವಿಲ್ದೇ ಹೀಗೆ ಮಾಡಬೇಕಾಯಿತು ಅಂತ ತಿಳಿಸು. ಹೋಗು ಮರಿ, ಇದೆಲ್ಲಾ ಮಾತನ್ನ ಹೇಳಿ ಅವಳ ಉತ್ತರ ತಗೊಂಡು ಬಾ"

ಹುಡುಗ ಕುಣಿಯುತ್ತ ಜಿಗಿಯುತ್ತ ಆಕೆಯನ್ನು ಸಮೀಪಿಸಿದ. ಅವಳೊಂದಿಗೆ ಮಾತನಾಡಲು ಅವನಿಗೇನೂ ಸಂಕೋಚವಿದ್ದಂತೆ ತೋರಲಿಲ್ಲ. ಕೆದರುಗೂದಲಿನ ನಗುಮುಖದ ಚಿಲ್ಟಾರಿ ಅವಳ ಮುಂದೆ ಬಂದು ನಿಂತದ್ದನ್ನ ನೋಡಿ, ಯುವತಿ ಸ್ವಲ್ಪ ಚಕಿತಳಾದಂತೆ ಕಂಡದ್ದನ್ನು ಅವಳ ಪ್ರಶ್ನಾರ್ಥಕ ಮುಖಭಾವದಿಂದ ಗುರುತಿಸಬಹುದಾಗಿತ್ತು.

"ಅಕ್ಕಾ, ನೋಡ್ರಿ, ಅಲ್ಲಿ ಕುಂತಾವ್ನಲ್ಲಾ ಆ ಆಸಾಮಿ, ಅವಯ್ಯ ನಿಮಗೆ ಒಂದು ಪದ ಏಳಿ, ಕುಣಿತ ಮಾಡಿ ಕುಸಿ ಮಾಡು ಅಂತ ನನ್ನ ಕಳಿಸವ್ನೆ. ಅವ್ನು ನಿಮ್ಗೆ ಪರಿಚಯ ಇಲ್ದೆ ಇರೋ ಪೋಕ್ರಿ ಆದ್ರೆ, ಏಳ್ಬಿಡ್ರಿ. ಈ ಕ್ಷಣಾನೇ ಓಡ್ಹೋಗಿ ಪೋಲೀಸಪ್ಪನ್ನ

ಕರ್ಕಂಡು ಬಂದ್ಬಿಡ್ತೀನಿ. ಅಂಗಲ್ದೆ ಗೊತ್ತಿರೋನಾಗಿದ್ರೆ, ನನ್ನ ಪದ ಕೇಳೋಕ್ಕೆ ಇಸ್ಟ ಇದ್ರೆ ಏಳಿ. ಏಸೋ ಪದಗೋಳು ನಂಗೆ ಬಾಯ್ಪಾಟ."

ಯುವತಿ ಅವನತ್ತ ತಿರುಗಿದಳು. ಅವಳ ತುಟಿಯಂಚಿನಲ್ಲಿ ಮೆಲುನಗೆ ಮೂಡಿತ್ತು. "ಓಹೋ ಪದ ಏಳಿ ಕುಣಿತ ಬೇರೆ ಮಾಡ್ತೀಯೇನೋ ಮರಿ. ನಿನ್ನ ಕಳಿಸಿರೋ ಆ ಮಹನೀಯರು ನನಗೆ ಸ್ವಲ್ಪ ಪರಿಚಯವಿರೋರೆ. ಹಾಗಾಗಿ ಪೋಲೀಸಿನೋರ ಅಗತ್ಯ ಏನೂ ಇಲ್ಲ. ಅದೇನು ಪದ ಹೇಳ್ತೀಯೋ ಶುರುಮಾಡು. ಜೋರಾಗಿ ಹೇಳ್ಬೇಡ. ಜನ ಗುಂಪು ಸೇರ್ಯಾರು"

"ಅದಕ್ಕುಂಚೆ ಒಂದ್ಮಾತಕ್ಕಾ. ನಿಮ್ ಫ್ರೆಂಡು ಬೇರೆ ಊರಿಗೆ ಒಂಟವ್ರೆ. ನೀವು ಅವ್ರಿಗೆ ಕಾಗಜ ಬರ್ಯೋದು, ಗೇಟಿನ ಆಚೆ ನಿಂತು ಕಿಸಕ್ಕಂತ ನೆಗ್ತಾ ಮಾತಾಡೋದು, ಇವನ್ನೆಲ್ಲಾ ಬಂದ್ ಮಾಡ್ಬಿಟ್ಟಿದೀರಂತೆ. ಯಂತಾದೇ ತಪ್ಪು ಮಾಡ್ದೇ ಇದ್ರೂನೇವೆ ಅವರ್ನ ದೂರ ಮಾಡಿವ್ರಂತೆ."

ಚೂಟಿ ಹುಡುಗನ ಅರಳು ಹುರಿದಂಥ ಮಾತುಗಳು ಯುವತಿಯ ಮುಖದಲ್ಲಿ ಗೆಲುವಿನ ಛಾಯೆ ಮೂಡಿಸಿದಂತೆ ಕಂಡಿತು. ತಾನು ಖಡಾ ಖಂಡಿತವಾಗಿ ಮಾತುಕತೆ ನಿರ್ಬಂಧಿಸಿದ್ದರೂ ಸಂಭಾಷಣೆಗೆ ಈ ವಿನೂತನ ವಿಧಾನವನ್ನು ಸೃಷ್ಟಿಸಿದ್ದನ್ನು ಕಂಡು ಅವಳಿಗೆ ಕೋಪವೇನೂ ಬಂದಂತೆ ಕಾಣಿಸಲಿಲ್ಲ. ದೂರದಲ್ಲಿ ಬಾತುಕೋಳಿಗಳು ತಮ್ಮ ಗೂಡಿನಿಂದ ಹೊರಬಂದು ಅಲ್ಲಿದ್ದ ಮರಳಿನ ದಿಬ್ಬದ ಮೇಲೆ ಕುಳಿತು ಬಿಸಿಲು ಕಾಯಿಸುತ್ತಿದ್ದವು. ಯುವತಿ ತನ್ನ ದೃಷ್ಟಿಯನ್ನು ಅವುಗಳ ಮೇಲೆ ನೆಟ್ಟು ತನ್ನ ಮಾತನ್ನು ಪ್ರಾರಂಭಿಸಿದಳು.

"ನನ್ನ ಧ್ಯೇಯ, ನಿಲುವು ಇವನ್ನೆಲ್ಲಾ ಅವರಿಗೆ ಪುನಃ ವಿವರಿಸೋದು ಅನಗತ್ಯ ಅಂತ ಅವರಿಗೆ ಹೇಳು. ಅದೆಲ್ಲಾ ಅವರಿಗೆ ಚೆನ್ನಾಗಿ ಗೊತ್ತೇ ಇದೆ. ಅವರು ನನಗೆ ಮಾಡಿರೋ ಅನ್ಯಾಯ ಅವರಿಗೆ ಚೆನ್ನಾಗೇ ಗೊತ್ತಿರಬೇಕು. ಯಾರದ್ದೋ ಮಾತು ಕೇಳಿ ನಾನು ಅವರ ಮೇಲೆ ಅಪವಾದ ಹೊರಿಸಿಲ್ಲ. ನಾನೇ ಕಣ್ಣಾರೆ ನೋಡಿದಮೇಲೆ ನಾನು ಹೇಗೆ ಸಹಿಸಿಕೊಂಡಿರೋದು ಸಾಧ್ಯ? ಪರಿಸ್ಥಿತಿ ಹೀಗಿದ್ದೂ ಅವರು ಪುನಃ ನಾನೇನು ತಪ್ಪು ಮಾಡ್ದೆ ಅಂತ ಕೇಳ್ತಿರೋದರಿಂದ ಅದನ್ನೂ ಹೇಳಿಬಿಡ್ತೇನೆ. ಅವತ್ತು ನಮ್ಮ ಅಮ್ಮನ ಹುಟ್ಟಿದ ಹಬ್ಬ ಅಂತ ಅವರನ್ನೂ ಕರೆದಿದ್ದೆ. ಇವರಿನ್ನೂ ಬಂದಿರಲಿಲ್ಲ. ನಾನು ಮನೆ ಒಳಗಡೆ ಕೆಲಸದ ಗಡಿಬಿಡಿಯಲ್ಲಿದ್ದೆ. ಆಗ ಅಮ್ಮ ನನ್ನ ಕರೆದು "ತೋಟದಿಂದ ಒಂದೆರಡು ಹೂವು ಕಿತ್ಕೊಂಡು ಬಾರೆ" ಅಂತ ಕೇಳಿದರು ತೋಟದ ಮೂಲೇಲಿ ಗುಲಾಬಿ ವನ ಇದೆ. ಒಂದೆರಡು ಗುಲಾಬಿ ಕೀಳೋಣ ಅಂತ ಅಲ್ಲಿಗೆ ಹೋದೆ. ಪೊದೆಗಳ ಆಚೆ ಸಂಪಿಗೆ ಮರದ ಕೆಳಗೆ ಇವರು ನಿಂತಿದ್ದರು. ಜೊತೆಯಲ್ಲಿ ಪಕ್ಕದ ಮನೆ ಸಂಜೀವರಾಯರ ಮಗಳು ಮಾಲತಿ. ಅವರಿಬ್ಬರೂ

ಒಟ್ಟಿಗೆ ಇದ್ದ ಭಂಗಿನೋಡಿದರೆ ಸಂದೇಹಕ್ಕೆ ಅವಕಾಶವೇ ಇರಲಿಲ್ಲ. ಒಂದು ಕ್ಷಣದಲ್ಲಿ ನನ್ನ ಎಲ್ಲ ಕನಸುಗಳೂ ಭಗ್ನವಾದವು. ಮನೆಯೊಳಗೆ ಓಡಿ ಬಂದುಬಿಟ್ಟೆ.

ನಾನು ಕಣ್ಣಾರೆ ನೋಡಿದ್ದಕ್ಕೆ ಬೇರೇನೂ ಪುರಾವೆ ಅಗತ್ಯ ಇರಲಿಲ್ಲ. ಹೋಗು. ಇದನ್ನೆಲ್ಲಾ ಅವರಿಗೆ ಪದ ಹೇಳಿ ಕುಣಿತ ಮಾಡಿ ತಿಳಿಸು"

ಹುಡುಗ ಸರಕ್ಕನೆ ತಿರುಗಿ ಇನ್ನೊಂದು ಬೆಂಚಿನತ್ತ ಓಡಿ, ತರುಣನ ಮುಂದೆ ನಿಂತ. ಚಿಲ್ಟಾರಿಯ ಸಂದೇಶಕ್ಕಾಗಿ ಕಾಯುತ್ತಿದ್ದ ತರುಣ ಅವ ಬಂದಕೂಡಲೇ ಅವನತ್ತ ಕಾತರದಿಂದ ನೋಡಿದ.

"ಅಕ್ಕಾವ್ರಿಗೆ ನಿಮ್ಮ ಕಳ್ಳಾಟ ಎಲ್ಲಾ ಗೊತ್ತೈತಂತೆ. ಅದಕ್ಕೆ ಅವ್ರ ಮುಂದೆ ಮಳ್ಳೀ ಅಂಗೆ ಬಂದು ನಿಂತ್ರೆ ಅವ್ರಿಗೆ ಬಾರೀ ಕ್ವಾಪ. ರೋಜಾ ಊವು ಖೀಳಾನ ಅಂತ ತ್ವಾಟಕ್ಕೆ ಬಂದ್ರೆ ಅಲ್ಲೇ ಸಂಪಿಗೆ ಮರದ್ತಾವ ನೀವು ಇನ್ಯಾವ್ದೋ ಮನೆಹಾಳಿಜೊತೆ ಚಕ್ಕಂದ ಮಾಡ್ತಿದ್ರಂತೆ. "ನಮ್ಮಿಬ್ಬರ ನಡುವೆ ಇನ್ನೇನೂ ರುಣ ಇಲ್ಲ. ಟ್ರೈನ್ ಇಡಿಯುಕ್ಕೆ ಹೇಳು ಒತ್ತಾಗ್ತೈತೆ "ಅಂತೇಳಿದ್ರು ಅಕ್ಕಾವ್ರು". ಎಂದ ಚಿಲ್ಟಾರಿ.

ತರುಣನ ಮುಖದಲ್ಲಿ ಏನೋ ಒಂದು ಹೊಸ ಹೊಳಹು ಕಾಣಿಸಿತು..ಅವನು ತನ್ನ ಒಳಜೇಬಿನಿಂದ ಹಲವು ಪತ್ರಗಳನ್ನು ತೆಗೆದು ಆ ಕಂತೆಯಿಂದ ಒಂದು ಮಡಿಚಿದ ಪತ್ರವನ್ನು ಆರಿಸಿ ತೆಗೆದು ಹುಡುಗನ ಕೈಯ್ಯಲ್ಲಿಟ್ಟ. ಜೊತೆಗೆ ಇನ್ನೊಂದು ನಾಣ್ಯ ಸಹಾ.

"ಹೋಗು. ಈ ಕಾಗದನ ಅವರ ಕೈಗೆ ಕೊಟ್ಟು ಓದಲಿಕ್ಕೆ ಹೇಳು. ಅದನ್ನ ಓದಿದರೆ ನಾನು ನಿರಪರಾಧಿ ಅಂತ ಅವರಿಗೆ ತಿಳಿಯುತ್ತೆ. ಅವರಿಂದ ಉತ್ತರ ಕೇಳಿ ತಿಳಿದುಕೊಂಡು, ಇಲ್ಲಿಗೆ ಬಂದು ನನಗೆ ತಿಳಿಸು" ಎಂದ ಆ ತರುಣ. ನಮ್ಮ ಮೇಘದೂತ ಮತ್ತೆ ಓಡಿದ. ಯುವತಿಯ ಬಳಿ ನಿಂತು.

"ಅಕ್ಕಾ, ಈ ಕಾಗಜ ಓದಿ. ಅವರು ಇಮಾಲಯಾ ಅಂಗೆ ಸುದ್ಧ ಅಂತ ನಿಮಗೇ ತಿಳೀತೈತೆ" ಎನ್ನುತ್ತಾ, ಆ ಮಡಿಚಿದ್ದ ಪತ್ರವನ್ನು ಆಕೆಗೆ ನೀಡಿದ.

ಮುಖವನ್ನೆಲ್ಲಾ ಒಂದು ಪ್ರಶ್ನಾರ್ಥಕ ಚಿನ್ಹೆಯಾಗಿಸಿಕೊಂಡ ಆ ಯುವತಿ ಪತ್ರದ ಮಡಿಕೆಗಳನ್ನು ಬಿಚ್ಚಿ ಓದಲು ಪ್ರಾರಂಭಿಸಿದಳು

"ಪ್ರಿಯ ಡಾಕ್ಟರ್ ಕಿರಣ್, ಅಂದು ಸಂಜೆ ನನ್ನ ಮಗಳು ಮಾಲತಿಗೆ ಎಪಿಲೆಪ್ಟಿಕ್ ಅಟಾಕ್ ಒದಗಿಬಂದಾಗ ನೀವು ಹತ್ತಿರದಲ್ಲಿದ್ದದ್ದು ಭಗವಂತನ ಕರುಣೆಯೆಂದೇ ಭಾವಿಸುವೆ. ಅಲ್ಲಿದ್ದ ಕಲ್ಲಿನ ಮೇಲೆ ಬಿದ್ದಿದ್ದರೆ ಆಕೆ ನಮಗೆ ಉಳಿಯುತ್ತಿರಲಿಲ್ಲ. ನಿಮ್ಮ ತುರ್ತಿನ ಶುಶ್ರೂಷೆಯಂದ ಆಕೆ ಅಪಾಯದಿಂದ ಪಾರಾದಳು. ಆಕೆಯ ಮುಂದಿನ ಆರೈಕೆಯನ್ನೂ ನಿಮ್ಮಿಂದಲೇ ನಿರೀಕ್ಷಿಸಬಹುದೆಂದು ಭಾವಿಸುವೆ.

ಎಲ್ಲ ಶುಭ ಹಾರೈಕೆಗಳೊಂದಿಗೆ "ಸಂಜೀವರಾವ್"

ಪತ್ರ ಓದಿ ಯುವತಿ ಮೆಲ್ಲನೆ ತಲೆಯೆತ್ತಿ, ಸಂತಸದಿಂದ ಆರ್ದ್ರವಾದ ಕಣ್ಣುಗಳಿಂದ ಚಿಲ್ಟಾರಿಯನ್ನು ನೋಡಿದಳು .

"ಉತ್ರಾ ಕೇಳ್ಕೊಂಡ್ಬಾ ಅಂತ ಏಳವ್ರೆ" ಅಂದ ಹುಡುಗ.

ಉಕ್ಕಿ ಬರುತ್ತಿದ ನಗುವನ್ನು ತಡೆಯುತ್ತಾ "ಪ್ರೇಯಸಿ ಕಾಯ್ತಾ ಇದಾಳೆ ಅಂತ್ಹೇಳು ಹೋಗು" ಎಂದಳು ಆ ಯುವತಿ.

"ಪ್ರೇಯಸಿ? ಅಂಗಂದ್ರೇನಕ್ಕಾ? ಇರೋಯಿನ್ ಅಂತ್ಲಾ?"

"ಹ್ಞೂಇ, ಹಾಗೇ ಹೇಳು ತಲೆಹರಟೆ, ಓಡು ಇಲ್ಲಿಂದ"

(ಓ ಹೆನ್ರಿ ಕ್ಷಮೆ ಬೇಡಿ) ■

ಅತಿಥಿ ದೇವೋಭವ

ಬೇಲೂರು ರಾಮಮೂರ್ತಿ

ಸಾಮಾನ್ಯವಾಗಿ ನಮ್ಮಲ್ಲಿ ವಯಸ್ಸಾಗುತ್ತಾ ಬಂದ ಹಾಗೆ ವ್ಯಕ್ತಿ ಮಾಗಿ ಅವನ ನಡವಳಿಕೆಗಳೂ ಸುಧಾರಣೆಗೊಳ್ಳುತ್ತವೆ ಎನ್ನುವ ಮಾತಿದೆ. ಇದು ಇತ್ತೀಚೆಗೆ ಸೋಮುಗೂ ಅನ್ವಯವಾಗುತ್ತಿದೆ. ಅವನನ್ನು ಎಷ್ಟೋ ಜನ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಯಾರಾದರೂ ಸೋಮು ವಿಚಾರ ಮಾತಾಡಿದರೆ ಓ ಸೋಮುನಾ, ಬಿಡಿ ಅಂತ ಅಂದುಬಿಡುತ್ತಾರೆ. ಸೋಮು ಯಾವ ಕೆಲಸವನ್ನೂ ಸರಿಯಾಗಿ ಮಾಡುವುದಿಲ್ಲ, ಸಮಯಕ್ಕೆ ಸರಿಯಾಗಿ ಏನನ್ನೂ ಹೇಳುವುದಿಲ್ಲ ಅನ್ನುವಂತಹ ಮಾತುಗಳೆಲ್ಲಾ ಸೋಮು ವಿಚಾರದಲ್ಲಿ ಅಲ್ಲಲ್ಲಿ ಕೇಳಿಬರುತ್ತಿರುತ್ತವೆ. ಆದರೆ ಸೋಮು ನಾನು ಯಾರಿಗೂ ದ್ರೋಹ ಮಾಡಿಲ್ಲ, ವಂಚನೆ ಮಾಡಿಲ್ಲ, ಯಾರನ್ನೂ ಸುಮ್ಮಸುಮ್ಮನೆ ದೂಷಿಸಿಲ್ಲ ಎನ್ನುವ ಸಮಾಧಾನದಿಂದ ಜೀವನ ಮಾಡುತ್ತಿದ್ದಾನೆ. ಇತ್ತೀಚೆಗೆ ಅವನಿಂದ ನಡೆದ ಒಂದು ಘಟನೆ ಎಲ್ಲರೂ ಅವನನ್ನು ಹೊಗಳುವಂತೆ ಮಾಡಿದೆ.

ನಡೆದಿದ್ದು ಇಷ್ಟೆ. ಒಂದು ದಿನ ಅವನು ಆಫೀಸಿಗೆ ಹೋಗುವಾಗ ದಾರಿಯಲ್ಲಿ ಹಿರಿಯ ದಂಪತಿಗಳು ಯಾರನ್ನೋ ಹುಡುಕುವಂತಿತ್ತು. ಸೋಮು ಕುತೂಹಲದಿಂದ ಅವರ ಕಡೆ ನೋಡಿದ. ದಾರಿಯಲ್ಲಿ ಹೋಗುತ್ತಿದ್ದವರನ್ನು ಏನೋ ಕೇಳಬೇಕೆಂದುಕೊಳ್ಳೋರು, ಅಷ್ಟರಲ್ಲಿ ಏನೋ ಹಿಂಜರಿಕೆ. ಇದನ್ನು ಕಂಡ ಸೋಮು ಪಾಪ ಹಿರಿಯರಿಗೆ ಏನೋ ಸಹಾಯ ಬೇಕಾಗಿರಬಹುದು ಅಂತ ಅವರ ಹತ್ತಿರ ಹೋಗಿ ಯಾರನ್ನು ಹುಡುಕುತ್ತಿದ್ದೀರ, ನಿಮಗೆ ಏನು ಬೇಕಾಗಿತ್ತು ಅಂತ ಕೇಳಿದ. ಹಿರಿಯ ಯಜಮಾನರು ಇಲ್ಲಿ ನನ್ನ ಸ್ನೇಹಿತರು ಪರಶುರಾಮ್ ಅವರ ಮನೆ ಹುಡುಕುತ್ತಿದ್ದೀನಿ. ಅವರು ಇರುವುದು ಬಾಲಾಜಿ ಬಡಾವಣೆಯಲ್ಲಿ ಅಂದರು. ಸೋಮು ನಿಮ್ಮ ಹತ್ರ ಅವರ ವಿಳಾಸ ಇದೆಯಾ ಅಂತ ಕೇಳಿದ. ಹಿರಿಯರು ಚೀಟಿ ತೆಗೆದು ತೋರಿಸಿದರು. ಸೋಮು ವಿಳಾಸವನ್ನು ಎರಡೆರಡು ಬಾರಿ ನೋಡಿಕೊಂಡು ಹಿರಿಯರನ್ನು ನೀವು ಈ ವಿಳಾಸಕ್ಕೆ ಹೋಗಬೇಕೇ ಅಂತ ಕೇಳಿದ. ಹೌದು ಅಂದರು. ಸೋಮು ಇದು ಈ ಊರಿನ ವಿಳಾಸವಲ್ಲ, ತುಮಕೂರಿನದು. ಇದರಲ್ಲಿ ಬರೆದಿರೋ ಹೆಸರು ಪರಶುರಾಮ್ ನಿಮ್ಮ ಸಂಬಂಧಿಯಾ, ಸ್ನೇಹಿತರಾ ಅಂತ ಕೇಳಿದ. ಹೌದು ಪರಶುರಾಮ್ ನನಗೆ ದೂರದ ಸಂಬಂಧ. ಅವರ ಮನೆಗೆ ಹೇಗೆ ಹೋಗಬೇಕು ಅಂತ ತಿಳಿಸಿದರೆ ನಾವು ಹೋಗುತ್ತೇವೆ ಅಂದರು. ಸೋಮು ಅವರಿಗೆ ಅಯ್ಯೋ ಸ್ವಾಮಿ ಇದು ತುಮಕೂರಲ್ಲ, ನೀವು ಅಪ್ಪಿತಪ್ಪಿ ಈ ಊರಿನಲ್ಲಿ ಇಳಿದುಬಿಟ್ಟಿದ್ದೀರ, ಇದು ತುಮಕೂರಿನ ವಿಳಾಸ, ನಿಮ್ಮ ಸಂಬಂಧಿ ಪರಶುರಾಮ್ ಈ ಊರಲ್ಲಿದ್ದಾರೋ ಇಲ್ಲಾ ತುಮಕೂರಿನಲ್ಲಿದ್ದಾರೋ ಅಂತ ಇನ್ನೊಮ್ಮೆ ಕೇಳಿದ. ಹಿರಿಯರು ಪರಶುರಾಮ್ ತುಮಕೂರಿನಲ್ಲಿ ಇರುವುದು ಅಂದರು. ಪಾಪ ಹಿರಿಯ ದಂಪತಿಗಳ ಅವಸ್ಥೆ ಕಂಡು ಸೋಮು ತುಂಬಾ ನೊಂದುಕೊಂಡ. ಹಿರಿಯ ದಂಪತಿಗಳು ತುಮಕೂರು ಬಸ್ಸು ಹತ್ತಿದ್ದೇನೋ ಸರಿ. ಆದರೆ ಈ ಊರಿನಲ್ಲಿ ಬಸ್ಸು ಕಾಫಿಗೆ ಅಂತ ನಿಲ್ಲಿಸಿದಾಗ ಇದೇ ತುಮಕೂರು ಅಂದುಕೊಂಡು ಇಳಿದುಬಿಟ್ಟಿದ್ದಾರೆ. ವಿಳಾಸ ಕೇಳೋಣ ಅಂತ ಸ್ವಲ್ಪ ದೂರ ನಡೆದಿದ್ದಾರೆ. ಅಷ್ಟರಲ್ಲಿ ತುಮಕೂರು ಬಸ್ಸು ಹೊರಟುಹೋಗಿದೆ. ಇಷ್ಟು ನಡೆದಿರುವ ಸಂಗತಿ ಎಂದು ಸೋಮುಗೆ ಅರ್ಥವಾಯಿತು. ಎದುರಿಗೆ ಕಂಡ ಹೋಟೆಲಿಗೆ ದಂಪತಿಗಳನ್ನು ಕರೆದುಕೊಂಡು ಹೋಗಿ ಏನಾದರೂ ತಿಂಡಿ ತಗೋತೀರ ಅಂತ ಕೇಳಿದಾಗ ಆಕೆ ನಾನು ಮಸಾಲೆ ದೋಸೆ ತಿಂದು ತುಂಬಾ ದಿನವಾಯಿತು ಅಂದರು.

ಸೋಮು ಅವರಿಬ್ಬರಿಗೂ ಮಸಾಲೆ ದೋಸೆ ಆರ್ಡರ್ ಮಾಡಿ ಅವರ ವಿವರಗಳನ್ನು

ಕೇಳಿದ. ನೀವು ಯಾವ ಊರಿನವರು, ತುಮಕೂರಿಗೆ ಹೋಗೋರು ಇಲ್ಲಿ ಯಾಕೆ ಇಳಿದಿರಿ ಅಂತ ಕೇಳಿದ. ಅದಕ್ಕೆ ಆಕೆ ನಮ್ಮದು ಜಾಲಮಂಗಲ ಅಂತ. ಅಲ್ಲಿಂದ ತುಮಕೂರಿಗೆ ನೇರ ಬಸ್ಸಿದೆ. ನಾವು ಬಸ್ ಹತ್ತಿ ಕೂತು ಟಿಕೆಟ್ ತಗೊಂಡೆವು. ಕಂಡಕ್ಟರ್ ಇಲ್ಲಿ ಇಳಿಸಿ ಹೊರಟುಹೋದ ಅಂದರು. ಏನೋ ವ್ಯತ್ಯಾಸವಾಗಿದೆ ಅಂದುಕೊಂಡು ಸೋಮು ಚೀಟಿಯಲ್ಲಿದ್ದ ಫೋನ್ ನಂಬರಿಗೆ ಕರೆ ಮಾಡಿ ಪರಶುರಾಮ್ ಜೊತೆ ಮಾತಾಡಿ ಇರುವ ಸಂಗತಿಯನ್ನು ತಿಳಿಸಿದ. ಅದಕ್ಕೆ ಪರಶುರಾಮ್ ಅವರು ಅಯ್ಯೋ ಅವರು ನನ್ನ ಕಸಿನ್ ಚಂದ್ರಣ್ಣ, ರುದ್ರಮ್ಮ ದಂಪತಿಗಳು. ಅಲ್ಯಾಕೆ ಬಂದಿದಾರೆ ನೀವು ಯಾರು ಅಂತ ಎಲ್ಲ ವಿಚಾರಿಸಿಕೊಂಡು ಚಂದ್ರಣ್ಣನ ಜೊತೆಯೂ ಮಾತಾಡಿದರು. ನಂತರ ದಯಮಾಡಿ ಅವರನ್ನು ನನ್ನ ಮನೆಗೆ ಕರೆದುಕೊಂಡು ಬಂದು ಬಿಟ್ಟರೆ ಸಂತೋಷ. ಚಂದ್ರಣ್ಣನಿಗೆ ಈಚೆಗೆ ಸ್ವಲ್ಪ ಮರೆವು ಬರ್ತಿದೆ. ಅಲ್ಲಿಂದ ಇನ್ನೆಲ್ಲೋ ಹೋಗಿಬಿಟ್ಟರೆ ಏನು ಮಾಡೋದು. ಎಲ್ಲ ಕಡೆಯೂ ನಿಮ್ಮಂತಹವರು ಇರಬೇಕಲ್ಲ ಅಂದರು. ದೋಸೆ ತಿಂದು ಕಾಫಿ ಕುಡಿದಾದ ಮೇಲೆ ಸೋಮು ಆ ದಂಪತಿಗಳನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಸೋಮಿಗೆ ಪರಿಚಯ ಮಾಡಿಕೊಟ್ಟು ಸೋಮಿ ಅಡುಗೆ ಮಾಡು, ಅವರಿಬ್ಬರೂ ಊಟ ಮಾಡಿ ಸ್ವಲ್ಪ ವಿಶ್ರಾಂತಿ ಪಡೆದು ಆಮೇಲೆ ತುಮಕೂರಿಗೆ ಹೋಗಲಿ ಅಂದ. ಸೋಮಿ ಮೊದಲು ಅವರಿಬ್ಬರಿಗೂ ನಮಸ್ಕಾರ ಮಾಡಿ ಕೂತಿರಿ, ಅಡುಗೆ ಮಾಡಿಬಿಡ್ತೀನಿ ಅಂದಳು. ಸೋಮು ಆಫೀಸಿಗೆ ಫೋನ್ ಮಾಡಿ ಏನೋ ಸಬೂಬು ಹೇಳಿ ರಜ ಪಡೆದ. ಹಿರಿಯ ದಂಪತಿಗಳು ಹಾಗೇ ನಿದ್ದೆಗೆ ಜಾರಿದ್ದರು. ಅವರಿಗೆ ಆತಂಕ ಇದ್ದಂತಿರಲಿಲ್ಲ.

ಸೋಮು ಅಡುಗೆ ಮನೆಗೆ ಹೋಗಿ ಸೋಮಿಗೆ ಸಹಾಯ ಮಾಡುತ್ತಾ ನಡೆದಿದ್ದೆಲ್ಲವನ್ನೂ ವಿವರಿಸಿದ. ಸೋಮಿಗೂ ಅಯ್ಯೋ ಅನಿಸಿತು. ರೀ ನಮ್ಮ ಸೋದರಮಾವನ ಸಂಬಂಧಿ ಒಬ್ಬರಿಗೂ ಹೀಗೇ ಸ್ವಲ್ಪ ಮರೆವು ಇತ್ತು. ಅವರು ಒಂದು ದಿನ ಹೊರಗೆ ಹೋದವರು ಮತ್ತೆ ಹಿಂದಿರುಗಿ ಬರಲೇ ಇಲ್ಲ ಕಣ್ರೀ. ನನಗಂತೂ ಮರೆವು ಇರೋರನ್ನು ಕಂಡರೆ ನಿಜಕ್ಕೂ ಕಣ್ಣೀರು ಬರುತ್ತೆ ಅಂದಳು. ಸೋಮು ನೋಡು ಅವರಿಬ್ಬರೂ ಊಟ ಮಾಡಿದ ಮೇಲೆ ನಾವು ಒಂದು ಟ್ರಿಪ್ ಹೋಗೋಣ್ವಾ ಅಂತ ಕೇಳಿದ. ಸೋಮಿ ಅಚ್ಚರಿಯಿಂದ ಈಗ್ಯಾವ ಟ್ರಿಪ್ ರೀ ಅಂತ ಕೇಳಿದಳು. ಏನಿಲ್ಲ ಹೀಗೆ ಹೋಗೋದು, ಹಾಗೆ ಬಂದುಬಿಡೋದು, ತುಮಕೂರಿಗೆ ಹೋಗಿ ಈ ದಂಪತಿಗಳನ್ನು ಅವರ ಸಂಬಂಧಿಗಳ ಮನೆಗೆ ಬಿಟ್ಟು ಬರೋದು. ಅವರಿಬ್ಬರನ್ನೇ ಕಳಿಸಿದರೆ ಅವರು ಹುಷಾರಾಗಿ ಹೋಗ್ತಾರೆ ಅನ್ನೋ ನಂಬಿಕೆ ಇಲ್ಲ. ನಾವು ಯಾವಾಗಲೂ ಹಿರಿಯರ ಬಗೆಗೆ ಅನುಕಂಪ, ಪ್ರೀತಿ, ಸಹಾಯ ಮಾಡೋ ಪ್ರವೃತ್ತಿ ಎಲ್ಲ ಬೆಳೆಸಿಕೊಂಡಿರಬೇಕು, ಏಕಂದ್ರೆ ನಮಗೂ ವಯಸ್ಸಾಗುತ್ತಲ್ವಾ ಅಂದ. ಸೋಮಿ ಖುಷಿಯಿಂದ ಈ ವಿಚಾರದಲ್ಲಿ ನೀವು ಹೇಗೆ ಹೇಳ್ತೀರೋ ಹಾಗೆ ಅಂದಳು.

ಹಿರಿಯ ದಂಪತಿಗಳು ಊಟ ಮಾಡುತ್ತಾ, ಅವರಿಗೆ ಇಬ್ಬರು ಮಕ್ಕಳು, ಒಬ್ಬಳು

ಅಮೆರಿಕಾದಲ್ಲಿ ಗಂಡನ ಜೊತೆ ಇದ್ದಾಳೆ, ಇನ್ನೊಬ್ಬ ಮಗ ದೆಹಲಿಯಲ್ಲಿದ್ದಾನೆ. ಇಬ್ಬರೂ ದಿನಾ ಫೋನ್ ಮಾಡುತ್ತಿರುತ್ತಾರೆ. ಮಗ ಆರಾರು ತಿಂಗಳಿಗೆ ಬಂದು ಹೋಗುತ್ತಿರುತ್ತಾನೆ ಅಂತೆಲ್ಲ ಹೇಳಿದರು. ಆಗಲೇ ಮಗನ ಫೋನ್ ಬಂದು ಚಂದ್ರಣ್ಣ ಮಗನ ಜೊತೆ ಮಾತಾಡಿ ನಂತರ ಸೋಮುಗೆ ಫೋನ್ ಕೊಟ್ಟು ನನ್ನ ಮಗ ನಿಮ್ಮ ಜೊತೆ ಮಾತಾಡಬೇಕಂತೆ ಅಂದರು. ಸೋಮು ಜೊತೆ ಮಾತಾಡಿದ ಚಂದ್ರಣ್ಣನ ಮಗ ಸೋಮುನ ಹೊಗಳಿದ್ದೂ ಹೊಗಳಿದ್ದೇ. ಸೋಮು ನೀವೇನೂ ಯೋಚನೆ ಮಾಡಬೇಡಿ ಸರ್ ಅವರು ನನಗೂ ತಂದೆ ತಾಯಿ ಸಮಾನ, ನಾನು ಜೋಪಾನವಾಗಿ ಅವರನ್ನು ಪರಶುರಾಮ್ ಅವರ ಮನೆಗೆ ಬಿಟ್ಟು ಬರ್ತೀನಿ ಅಂದ. ಅಷ್ಟೊತ್ತಿಗೆ ಪರಶುರಾಮ್ ಸೋಮು ನಂಬರಿಗೆ ಫೋನ್ ಮಾಡಿ ಚಂದ್ರಣ್ಣನ ಬಗೆಗೆ ವಿಚಾರಿಸಿಕೊಂಡರು. ನೀವೇನೂ ಯೋಚನೆ ಮಾಡಬೇಡಿ ಸರ್, ನಾನೇ ಅವರನ್ನು ನಿಮ್ಮ ಮನೆಗೆ ಕರೆದುಕೊಂಡು ಬರ್ತೀನಿ ಅಂದ.

ಊಟವಾದ ಮೇಲೆ ಹಿರಿಯ ದಂಪತಿಗಳು ವಿಶ್ರಾಂತಿ ತೆಗೆದುಕೊಂಡರು. ರುದ್ರಮ್ಮ ಸೋಮಿಯನ್ನು ಯಾವ ಊರು, ಏನು, ಎತ್ತ ಅಂತ ಎಲ್ಲ ವಿಚಾರಿಸಿಕೊಂಡು ನೀವು ದಂಪತಿಗಳು ನಮ್ಮ ಮನೆಗೆ ಬರಬೇಕು ಅಂತ ಆಹ್ವಾನಿಸಿದರು. ಹೊರಡುವ ಮುನ್ನ ಕಾಫಿ ಆಯಿತು. ಚಂದ್ರಣ್ಣ ನಮಗೆ ತುಮಕೂರಿಗೆ ಹೋಗುವ ಬಸ್ ಹತ್ತಿಸಿಬಿಡಿ ನಾವು ಹೋಗಿಬರ್ತೀವಿ ಅಂದರು. ಆಗ ಸೋಮು ನನಗೂ ತುಮಕೂರಿನಲ್ಲಿ ಸ್ವಲ್ಪ ಕೆಲಸ ಇದೆ. ನಾನು ನಾಳೆ ಹೋಗುವ ಕಾರ್ಯಕ್ರಮ ಇತ್ತು. ಆದರೆ ಇವತ್ತೇ ನಿಮ್ಮ ಜೊತೆ ಬರ್ತೀನಿ ಅಂದ.

ಕಾರು ಬುಕ್ ಮಾಡಿಕೊಂಡು ದಂಪತಿಗಳನ್ನು ಕೂರಿಸಿಕೊಂಡು ತುಮಕೂರಿಗೆ ಹೋಗಿ ಪರಶುರಾಮ್ ಅವರ ಮನೆಗೆ ತಲುಪಿಸಿದ. ಪರಶುರಾಮ್ ಇವರೆಲ್ಲಾ ಬರುವುದನ್ನೇ ಕಾಯುತ್ತಿದ್ದರು. ಸೋಮುನ ನೋಡಿ ನೀವು ತುಂಬಾ ಗ್ರೇಟ್ ಸರ್, ಈಗಿನ ಕಾಲದಲ್ಲಿ ಹೀಗೆ ಸಹಾಯ ಮಾಡೋರು ಯಾರಿದ್ದಾರೆ. ಅದರಲ್ಲೂ ವೃದ್ಧರು ಅಂದರೆ ಯಾರಿಗೂ ಬೇಡವಾಗಿರುವ ದಿನಗಳಲ್ಲಿ ನಿಮ್ಮಂಥವರು ಬಹಳ ಅಪರೂಪ ಅಂದರು. ಸೋಮು ಅವರಿಗೆ ನಮಸ್ಕರಿಸಿ ಇದು ಸಾಮಾನ್ಯವಾಗಿ ಎಲ್ಲರೂ ಮಾಡುವಂಥ ಕೆಲಸ, ಮತ್ತು ಮಾಡಬೇಕಾದ ಕೆಲಸ ಆದರೆ ಈ ದಿನಗಳಲ್ಲಿ ಬಹಳ ಅಪರೂಪ ಅಂದ.

ಚಂದ್ರಣ್ಣ ಮತ್ತು ರುದ್ರಮ್ಮ ಇವರುಗಳಿಂದ ಬೀಳ್ಕೊಂಡು ಸೋಮು ಸೋಮಿ ಅಲ್ಲಿಂದ ಹೊರಟರು. ಸೋಮಿ ರೀ ಇವತ್ತು ನನಗೆ ಹೃದಯ ತುಂಬಿಬಂದಿದೆ ಕಣ್ರಿ ಅಂದಳು. ಸೋಮು ನನಗೂ ಅಂದ. ಚಂದ್ರಣ್ಣ ದಂಪತಿಗಳ, ಅವರ ಮಗನ, ಪರಶುರಾಮ್ ಅವರ ಮೊಬೈಲ್ ಸಂಖ್ಯೆಗಳನ್ನು ತೆಗೆದುಕೊಂಡಿಡು ಆಗಾಗ ಅವರ ಸಂಪರ್ಕದಲ್ಲಿರೋಣ ಅಂದುಕೊಂಡ.

ರೀ ತುಮಕೂರಿಗೆ ಬಂದು ಒಂದು ಕೆಲಸ ಮಾಡದೇ ಹೋದರೆ ಏನು ಪ್ರಯೋಜನ ಅಂದಳು. ಸೋಮು ಅಚ್ಚರಿಯಿಂದ ಏನು ಕೆಲಸವೇ ಅಂತ ಕೇಳಿದ. ಅದಕ್ಕೆ ಸೋಮು ಹೊರಗೆ ಕೈ ತೋರಿದಳು. ಅಲ್ಲಿ ಸುಮತಿ ತಟ್ಟೆ ಇಡ್ಲಿ ಹೋಟೆಲ್ ಅಂತ ಬೋರ್ಡ್ ಇತ್ತು. ಸೋಮು ಕಿರುನಗೆಯಿಂದ ಸುಮತಿ ತಟ್ಟೆ ಇಡ್ಲಿ ಆಮೇಲೆ ಹೋಗೋಣ ಅಂದು ನಕ್ಕ ಸೋಮು ಡ್ರೈವರಿಗೆ ಕಾರು ನಿಲ್ಲಿಸಲು ಹೇಳಿದ. ಹೋಟೆಲಿಗೆ ಹೋಗುವಾಗ ಸೋಮು ದಿನಾ ಮನೇಲಿ ನಾನು ಆಫೀಸಿಗೆ ಹೊರಡುವಾಗ ತಿಂಡಿಗೆ ನೀನು ತಟ್ಟೆ ಇಡ್ಲಿ ತಟ್ಟೆ ಇಡ್ಲಿ ಅಂತ ಕಾಯ್ತನೇ ಇರ್ತೀನಿ. ಆದರೆ ಇಲ್ಲಿ ತಟ್ಟೆನೂ ಇಟ್ಟು ಅದರ ಮೇಲೆ ಇಡ್ಲಿನೂ ಇಟ್ಟು ನಮ್ಮನ್ನು ಕರೀತಿದಾರೆ ಅಂದು ನಕ್ಕ ಸೋಮು. ಸೋಮಿ ನಕ್ಕು ಸುಮ್ನೆ ನಡೀರಿ ಅಂದಳು. ತಟ್ಟೆ ಇಡ್ಲಿ ಬಾರಿಸುವ ಸಂಭ್ರಮದಲ್ಲಿ ಸೋಮು ಸೋಮಿ ಇಬ್ಬರೂ ಹೋಟೆಲಿಗೆ ಎಂಟ್ರಿ ಕೊಟ್ಟರು. ■

ರೀಲು ತಾತಾ

ಡಾ. ಶ್ಯಾಮಲಾ ರವಿಶಂಕರ್

ರಾಯರು ಆರಾಮ ಕುರ್ಚೀಲಿ ಕುಳಿತು ಕಣ್ಣು ಮುಚ್ಚಿ ಯಾವುದೋ ಆಲೋಚನೆಯಲ್ಲಿ ಮುಳುಗಿದ್ದಂತಿತ್ತು. ಅದು ಮೊಮ್ಮಕ್ಕಳಿಗೆ ಕಥೆ ಹೇಳುವ ಸಮಯ. ಮೊಮ್ಮಕ್ಕಳು ಊಟ ಮುಗಿಸುವವರೆಗೆ ಕಾದು ಅವರನ್ನು ಬೀದಿಗೆ ಬಿಸಿಲಿನಲ್ಲಿ ಓಡುವುದನ್ನು ತಪ್ಪಿಸುವ ದೈನಂದಿನ ಕಾರ್ಯಕ್ರಮ. ಹಾಗೆ ಕಾಯ್ತಾ ರಾಯರಿಗೆ ಮಂಪರು ಬರ್ತಾ ಇದ್ದಹಾಂಗೆ ಭೂಮಿಯನ್ನೇ ನಡುಗಿಸುವಂಥಾ ಆರ್ಭಟ ಮೊಮ್ಮೊಕ್ಕಳ ಆಗಮನ, ರಾಯರ ಮಂಪರಿಗೆ ನಿರ್ಗಮನ.

"ತಾತಾ, ಇವತ್ತಿನ ಕಥೆ ಶುರು ಮಾಡಿ", ಅಂದ ಗುಂಡ.

'ತಾತ ನಿದ್ದೆಮಾಡ್ತಿದ್ರೆ ಮಾಡಲಿ ಬಿಡೋ, ಕಥೆಗೆ ಕೊಕ್, ಆಟಕ್ಕೆ ಪಿಕ್, ಬೀದಿಗೆ ಸ್ಟಿಕ್ "ಪಾಪುವಿನ ಸಮಯೋಚಿತ ಸಲಹೆ !"

"ಎದ್ದೇ ಇದ್ದಿನ್ರೋ, ಬೀದಿ– ಬೀದಿ ನಾಯಿ ಎಲ್ಲ ಬಿಟ್ಟು ಒಂದು ಹತ್ತು ನಿಮಿಷ ಕಿತಾಪತಿ ಮಾಡದೆ ಕೂತ್ಕೊಳಿ ; ಇಗೋ, ಕಥೆ ಶುರು ಮಾಡತೀನಿ, ಅಟೆನ್ಷನ್" ತಾತನ ಅಧಿಕಾರ ವಾಣಿ.

ಇದು ದಿನಾ ನಡೆಯೋ ಪ್ರಲಾಪ, ಪ್ರಾರಂಭವಾಯಿತು ತಾತನ ಕಥಾ ಪ್ರವಚನ.

ನಮ್ಮೂರಲ್ಲಿ ಒಬ್ಬ ಸಾಹುಕಾರ ಇದ್ದ.

'ಅದು ಬಡವರ ಊರಾ, ತಾತಾ ?, ಪಾಪ ಊರಿಗೊಬ್ಬನೇ ಸಾಹುಕಾರಾನ ? ಗುಂಡ ಉವಾಚ.

"ಆಗೋ ಮತ್ತೆ ಕ್ಯಾತೆ !.. ಒಂದುನಿಮಿಷ ಬಾಯಿಗೆ ರೆಸ್ಟ್ ಕೊಡೋ. ಮತ್ತೆ ಕಥೆ ಕೇಳಿಸ್ಕೊಬೇಕು. ಆಮೇಲೆ ಪ್ರಶ್ನೆ ಕೇಳ್ತೀನಿ, ಜ್ಞಾಪಕ ಇರಲಿ. ಅವನು ಒಂದು ಆಟೋನ ಕೊಂಡು ಅದನ್ನ ಆಗಾಗ ಡ್ರೈವಿಂಗ್ ಹಾಗೂ ಸವಾರಿಗೂ ಕೊಟ್ಟು ಸಣ್ಣ ಕಮಿಷನ್ ಪಡೀತಿದ್ದ. ಒಟ್ಟಿನಲ್ಲಿ ಕೂತ ಕಡೆ ಆರಾಮವಾಗಿ ಎಕ್ಸ್ಟ್ರಾ ಹಣ ಸಂಪಾದಿಸ್ತಿದ್ದ. ಎಲ್ಲರಿಗೂ ಇರೋಹಾಗೆ ಅವನಿಗೂ ಒಬ್ಬ ತರಲೆ ಭಾವ ಮೈದ ಇದ್ದ. ವ್ಯತ್ಯಾಸ ಏನಪ್ಪಾ ಅಂದ್ರೆ, ಈ ಹುಡುಗ ಬುದ್ಧಿವಂತ, ದೊಡ್ಡೂರಿನಲ್ಲಿ ದೊಡ್ಡ ಓದು ಓದುತ್ತಿದ್ದ. ಆಗಾಗ ಬಂದು ಅಕ್ಕನ ಮನೇಲಿ ವಕ್ಕರಿಸಿ ಭಾವನ ತಲೆ ತಿಂತಾ ಇದ್ದ. ಹಾಗಿದ್ರೂ ಇಬ್ಬರ ಮಧ್ಯೆ ಪ್ರೀತಿ ವಿಶ್ವಾಸಗಳಿಗೇನೂ ಕೊರತೆ ಇರಲಿಲ್ಲ.

'ರಜೆ ನೆಪದಲ್ಲಿ ಬಂದು ಉಂಡಾಡಿ ಕಾಲಕಳೆಯೋ ಬದಲು ಅಷ್ಟಿಷ್ಟು ಸಂಪಾದಿಸ್ಕೊ ಆಟೋ ಓಡಿಸಿ, "ಅಂದ ಭಾವನಿಗೆ ಮೈದುನ, ನಾರಪ್ಪ, ಶಾರ್ಟ್ ಫಾರಂ ಆಫ್ ನಾರಾಯಣ, ಓಕೆ, ಆದ್ರೆ ನಿಮಗೆ ಕಮಿಷನ್ ಕೊಡೋಲ್ಲ". ಸ್ವಲ್ಪ ಹೊತ್ತಾದ್ರೂ ಇವನ ಕಾಟ ತಪ್ಪತ್ತೆ ಅಂತ ಭಾವನೂ ಒಪ್ಪಿಕೊಂಡ. ಒಂದು ಷರತ್ತು ಏನಂದ್ರೆ ನಾರಪ್ಪ ಅವನ ಕ್ಲಿಯೆಂಟ್ಸ್ ಬಗ್ಗೆಅನುಭವಗಳನ್ನ ಏನಾದ್ರೂ ಭಾವನಿಗೆ ಹೇಳಬೇಕು.

"ಗುಂಡ ಮೂಗುತೂರಿಸ್ದ, ಯಾರಾದ್ರೂ ಲವರ್ಸು ಮಾತಾಡ್ತಿದ್ರೆ..."

ತಾತ ನಿನ್ನ ಬುದ್ಧಿಗೆ ಈಗಲೇ ಇಷ್ಟು ತೋಚಿದ್ರೆ ಮುಂದೆ ಗತಿ ಏನೋ, ಪೋಲಿ ಮುಂಡೇದೆ. ಆ ಟೈಂಗೆ ಇವನು ಹೆಡ್ ಫೋನ್ಸ್ ಹಾಕ್ಕೊಂಡು ಹಾಡುಗಳು ಕೇಳ್ತಾ

ಅವರಿಗೆ ಪ್ರೈವಸಿ ಒದಗಿಸ್ತಾ ಇದ್ದ, ಮುಂದೆ ಹೇಳಲಾ ಬೇಡ್ವಾ ? ಬೆದರಿಕೆ ಹಾಕಿ ವಂಶೋದ್ಧಾರಕರ ಅನುಮತಿ ಪಡೆದು ಕಥೆ ಮುಂದು ವರೆಸಿದ್ರು ರಾಯರು.

ಇಬ್ಬರು ಲೇಡೀಸ್, ಒಬ್ಬರೋ ನರ್ಸಮ್ಮ, ಇನ್ನೊಬ್ಬರು ಲೆಕ್ಚರಿಣಿ, ಹತ್ತಿದರು. ಸ್ವಲ್ಪ ಹೊತ್ತು ಕಳೆಯೋಷ್ಟರಲ್ಲಿ ಫ್ರೆಂಡ್ಸ್ ಹಾಗೆ ಮಾತಾಡ್ತಿದ್ರು. ನರ್ಸಮ್ಮ "ಹಾಗಾ.... ಒಹೋ, ಸರಿ ನನ್ನ ಮಗನೂ ನಿಮ್ಮ ಕಾಲೇಜಿನಲ್ಲೇ ಓದುತ್ತಿದ್ದಾನೆ ಇದ್ದಾನೆ ತುಂಬ ಬುದ್ಧಿವಂತ ಹೆಸರೂ..."



"ಸಣ್ಣಕ್ಕೆ ಡಾರ್ಕಾಗಿರತಾನೆ, ಕಡೆ ಬೆಂಚಿನಲ್ಲೇ ಕೂತ್ಕೋತಾನೆ, ಅವನ ಸ್ವರಾನೇ ನಾನು ಕೇಳಿದ್ದಿಲ್ಲ ಹೆತ್ತಕರುಳಿಗೆ ಖುಷಿಯೋ ಖುಷಿ!, ಟ್ಯೂಷನ್ನಿಲ್ಲದೇನೇ ಎರಡು ವರ್ಷ ಬಿ.ಎಸ್ಸಿ ಲಿ ಫಸ್ಟ್ ಕ್ಲಾಸ್ ತೊಗೊಂಡಿದ್ದಾನೆ."

"ಬಿ ಎಸ್ಸಿಗೆ ಯಾರೂ ಟ್ಯೂಷನ್ ತೊಗೊ ಬೇಕಾಗೇ ಇಲ್ಲ. ಸುಮ್ನೆ ಪರೀಕ್ಷೆಗೆ ಹೋಗಿ ಕೂತು ಏನೋ ಒಂದಷ್ಟು ಬರೆದು, (ಅಂದ್ರೆ ಶ್ರೀ ರಾಮ ಜಯ ರಾಮ ಅಲ್ಲದೆ), ಬಂದ್ರೆ ಪಾಸ್ ಅಲ್ಲ ಫಸ್ಟ್ ಕ್ಲಾಸೂ ಬರತಾರೆ" ನರ್ಸಮ್ಮನಿಗೆ ಇದು ಸರಿಹೋಗಲಿಲ್ಲ ಸ್ವಲ್ಪ ಹೊತ್ತು ಮೌನ. ಆಟೋ ಜೋರಾಗಿ ಹೋಗತಿದ್ದು ಲೆಕ್ಚರಿಣಿ, "ನಿಧಾನ, ನನಗೆ ಕತ್ತು ನೋವಿದೆ, ಹೀಗೆ ಹೋದ್ರೆ ನಾನು ಮತ್ತು ನನ್ನ ತಲೆ ಎರಡು ಸಪರೇಟ್ ಆಗಿ ಹೋಗತೀವಿ" ಅಂದಳು

ತತ್ಕ್ಷಣ ನರ್ಸಮ್ಮ, "ಏನಂದ್ರಿ, ಕತ್ತು ನೋವಾ ? ಪಾಪ, ತುಂಬ ಕಷ್ಟ ಪಡ್ತಿದ್ದೀರಾ? ನಾನು ಒಂದು ಮಾತು ಹೇಳ್ತೀನಿ, ನೀವು ನೋಡಿರಬಹುದು, ಫುಟ್ ಬಾಲ್ ಮೈದಾನದಲ್ಲಿ ಪ್ರವಚನ ನಡೀತಿದೆ, ಅಲ್ಲಿಗೆ ಸಾಯಂಕಾಲ ಬನ್ನಿ. ಅಲ್ಲಿನ ಪ್ರಾರ್ಥನೆ ಕಲಿತು, ಮಾಡಿ. ಮೂರನೇ ದಿವಾಸನೆ ನಿಮ್ಮೆಲ್ಲ ನೋವುಗಳೂ ಮಾಯಾ ಆಗ್ಬಿಡತ್ತೆ ಖಂಡಿತ. ನಾನು ನಿಮಗಾಗಿ ಕಾಯಿತಾ ಇರ್ತೀನಿ ಇಂಥ ಕಡೆ" ಅಂತ ಪಟಪಟ ವದರಿ ಒಂದಷ್ಟು ಪಾಂಫ್ಲೆಟ್ಸ್ ಅವರ ಬ್ಯಾಗಿನಲ್ಲಿತೂರಿಸಿದ್ಲು.

ಲೆಕ್ಚರಿಣಿಗೆ ಸಖ್ತಾ ಕೋಪ ಬಂದು ಬಿಡಿತು, "ನೋಡಿಮ್ಮಾ, ನಮ್ಮ ಮೂವತ್ತ ಮೂರು ಕೋಟಿ ದೇವರುಗಳು ಯಾರೂ ಗುಣ ಪಡಿಸದೆ ಇದ್ದಾಗ, ನಾನಿನ್ನೂ ಬದುಕಿದ್ದು, ಹಾಗೂ ಈ ನೋವು ನನ್ನ ಸಹಜೀವಿಯಾಗೇ ಇದ್ದಲ್ಲಿ ಆಗ ನೋಡೋಣ!"

ನರ್ಸಮ್ಮನಿಗೆ ಇದು ಸುತಾರಾಂ ಸಹಿಸಲಾಗಲಿಲ್ಲ. "ನಿಲ್ಲಿಸಪ್ಪ , ಆಟೋನ, ನನಗೆ ಸ್ವಲ್ಪ ಕೆಲಸ ಇದೆ ಇಲ್ಲಿ," ಅಂದು ಇಳಿದು ದುರ್ದಾನ ತೊಗಂಡವರ ಹಾಗೆ ಅವಳ ಷೇರು ಕೊಡೋದಿರಲಿ, ತಿರುಗಿಯೂ ನೋಡದೆ ಹೊರಟು ಹೋದಳು!

ಇನ್ನೊಂದು ಸಲ ಇಬ್ಬರು ಸ್ನೇಹಿತರು ನಗನಗ್ತಾ ಮಾತಾಡ್ಕೊಂಡು ಬರ್ತಿದ್ರು, ಒಬ್ಬನ ಮನೆ ತಿರುವಿನಲ್ಲೇ ಇಳಿಕೊಂಡು ಪರ್ಸ್ ತೆಗೆದಾಗ ಮೀಟರ್ ಪ್ರಕಾರ 24

ರೂಪಾಯಿ ಆಗಿತ್ತು. ಒಳಗಿದ್ದವನು ನಾನು ಇಳಿಯೋಹೊತ್ತಿಗೆ 40ರೂಪಾಯಿ ಆಗಿರತ್ತೆ, ನೀನು 20 ಕೊಡು ಸಾಕು ಅನ್ನೋದೇ!ಇಳಿದವನು ಇನ್ನೂ ಜಾಣ, ನನ್ನ ಶೇರ್ನ ನಾನು ಡ್ರೈವರ್ಕೈಗೆ ಕೊಡತೀನಿ, ನೀನು ಮಿಕ್ಕಿದ್ದನ್ನ ನೋಡ್ಕೋ ತನ್ನ ಫ್ರೆಂಡ್ನ ಸ್ಮಾರ್ಟ್ನೆಸ್ ತಿಳಿದಿದ್ದು ತಾನು ಇಳಿದ ಮೇಲೆ !

ಇನ್ನೊಂದು ಸಲಿ ಒಬ್ಬ ಆಂಟಿ ಚೆನ್ನಾಗಿ ಮಾತಾಡಿಸ್ತಾ ನಗಿಸ್ತಾ ಬರ್ತಿದ್ರು ನಾನೂ ಖುಷಿಯಾಗಿ ಡ್ರೈವ್ ಮಾಡ್ತಿದ್ದೆ. ಅವರು ಇಳಿದು ಹಣ ಕೊಡೋವಾಗ ನಾನು ಅವರ ಬ್ಯಾಗ್ ಚೆನ್ನಾಗಿದೆ ಅಂದಿದ್ದಕ್ಕೆ ಅವರು ಅದನ್ನ ನನಗೆ ಕೊಡೋಕೆ ಬಂದು ಬಿಟ್ರು. ನಾನು ಅವಾಕ್ಕಾಗಿ ಬೇಡ ಅಂದೆ, ಯಾಕೆ ಬೇಡ ಅಂತ ಕೇಳಿದ್ರು. ನಾನು ಬೇಡ ಆಂಟಿ, ನಮ್ಮ ಮನೆ ಹೆಂಗಸರು ಇದನ್ನ ಹಿಡಿಕೊಂಡು ಅಡ್ಡಾಡಿದರೆ, ಎಲ್ಲರೂ ಯಾರೂ ಆಟೋಲಿ ಬಿಟ್ಟು ಹೋಗಿರಬೇಕು, ಇಲ್ಲದಿದ್ರೆ ಇವರಿಗೆ ಎಲ್ಲಿಂದ ಬರತ್ತೆ ಈ ಥರ ಐಟಂಗಳು ಅಂತ ಆಡ್ಕೋತಾರೆ ಅಂದೆ.

ಹೀಗೆ ನಾರಪ್ಪ ಅವನ ಭಾವನಿಗೆ ವರದಿ ಒಪ್ಪಿಸ್ತಾ ಇದ್ದ. ಭಾವ ಇವನನ್ನ ಬಂಡಲ್ ಬಿಡಬೇಡ ಸ್ವಲ್ಪ ಸೀರಿಯಸ್ಸಾಗಿರೋದನ್ನ ಕಲಿತ್ಕೋ ಅಂತ ಉಪದೇಶ ಇತ್ತರು.

"ಈಗ ಪ್ರಶ್ನೆ ಸಮಯ, ನಮ್ಮಲ್ಲೇ ಇದಾರೆ ಆ ನಾರಯ್ಯಾ, ಅವರು ಯಾರೂಂತ ಗೆಸ್ಸ್ ಮಾಡಿ" ಅಂದ್ರು ತಾತ.

'ನಮಗೇನು ಗೊತ್ತು? ನೀವೇ ಹೇಳ್ಬಿಡಿ'. ಜಂಟಿ ಸ್ವರಗಳ ಹೇಳಿಕೆ..

ನಾನೇ .. ನಾನೇ .. ಅಂದರು ತಾತ !

ಅಷ್ಟೂ ಹೊತ್ತು ಎಲ್ಲಿದ್ರೋ ಅಜ್ಜಿ, ಆಗ, ಅಲ್ಲಿ ಪ್ರತ್ಯಕ್ಷ ವಾದರು ! ಏನೂ. .. ಇವರಾ..ಇವರಂತೆ ಇವರು.! ದಿನಕ್ಕೊಂದು ಸುಳ್ಳುಹೇಳೋ ಅಭ್ಯಾಸ ಇವರಿಗೆ, ಅದನ್ನ ನೀವುಗಳು ಭಕ್ತಿಯಿಂದ ಕೇಳಿಸ್ಕೊತೀರ. ಸೈಕಲ್ ಓಡಿಸೋದಿರಲಿ, ಚಿಕ್ಕಂದಿನಲ್ಲಿ ಟ್ರೈಸಿಕಲ್ ಕೂಡ ಓಡಿಸಲಿಲ್ವಂತೆ ಇವರು, ಇವರಮ್ಮನೇ ನಂಗೆ ಹೇಳೊವ್ರು ಇವರ ಪ್ರತಾಪಗಳನ್ನ. ನಡೀರಿ ಇನ್ನಯಾವದಾದ್ರು ತರಲೆ ಹಿಡ್ಕೊಂಡು ಟೈಂಪಾಸ್ ಮಾಡಿ ಅಂದಾಗ ಜಂಟಿ ಸ್ವರಗಳು "ರೀಲು ತಾತಾ... ರೀಲು ತಾತಾ...." ಅಂತ ಕೂಗಿ ಕೊಂಡು ಹೊರಗೆ ಓಡಿದರು. ಇತ್ತ ತಾತನ ಗೊರಕೆಗೂ ಜಂಟಿಗಳು ಓಡೋದಕ್ಕೂ ತಾಳ ಮೇಳ ಕೂಡಿದಂತಿತ್ತು.

■

ಅಂದು ಅಕ್ಕನಿಗೆ ತುಂಬಾ ದಿನಗಳ ನಂತರ ಫೋನ್ ಮಾಡಿ ತಂಗಿ ಮಾತಾಡಿದ್ಲು.. ಅಯ್ಯೋ ತುಂಬಾ ಬಿಝಿ ಇದ್ದೆ ಕಣೇ, ಮನೇಲಿ ನೆಂಟರು, ಬೇರೆ. ಕೆಲಸ ಮಾಡಿ ಮಾಡೀ ಸುಸ್ತಾಗಿದೀನಿ, ಅದ್ಯಾರೋ ಜೋತಿಷಿ ಹೇಳಿದ ಹಾಗೆ ನನ್ನ ಕಡೆಗಾಲದವರೆಗೂ ಕೆಲಸ ಮಾಡ್ತೀನಂತೆ. ಹಾಗೇ ಒಂದಿನ ಸುಸ್ತಾಗಿ ಹಾರ್ಟ್ ಅಟ್ಯಾಕ್ ಆಗಿ ಹೋಗಿಬಿಡ್ತೀನೇನೋ ಅಂದ್ಲು..

ಅಕ್ಕ ಅಂದ್ಲು, ಛೆ.. ಛೆ ..ಛೆ.. ಅದೇನು ಮಾತೂಂತ ಆಡ್ತೀಯೆ ?? ಹಾರ್ಟ್ ಅಟಾಕ್ ಹಾಗೆ ಹೀಗೆ ಅಂತ..ಈ ಹಾರ್ಟ್ ಅಟಾಕು ತುಂಬಾ ಪೇನ್ಫುಲ್ ಅಂತೆ ಅದಕ್ಕೇ ಹಾಯಾಗಿ ನಿದ್ದೇಲಿ ಹೋಗ್ಬಿಟ್ರೆ ಚಂದ ಅಂತ ಹೇಳಬಹುದಲ್ಲೇ ಅಂದಾಗ ಇಬ್ರೂ ಮನಸಾರೆ ನಕ್ಕರು.

–ಸುಮನಾ

ಮಾರ್ಮಿಕ ರೋದನ.....!

ವಿ.ವಿಜಯೇಂದ್ರ ರಾವ್

ನಾರಾಯಣರಾಯರು ಕರಾವಳಿಯ ಒಂದು ಹಳ್ಳಿಯಲ್ಲಿ ತಮ್ಮ ಪತ್ನಿಯೊಂದಿಗೆ ವಾಸವಾಗಿದ್ದರು. ಅವರ ಒಬ್ಬಳೇ ಮಗಳಾದ ಸುಮ ತನ್ನ ಚೊಚ್ಚಿಲ ಹೆರಿಗೆಗೆಂದು ತವರಿಗೆ ಬಂದಿದ್ದಳು. ರಾಯರ ಮನೆಯ ಮುಂದೆ ಹತ್ತು ಹದಿನೈದು ತೆಂಗಿನಮರಗಳಿತ್ತು. ಅವರು ಅದರ ಆರೈಕೆ ಜತನದಿಂದ ಮಾಡುತ್ತಿದ್ದರು.ಹೀಗೆ ಅವರ ಜೀವನ ಸಾಗುತ್ತಿದ್ದಾಗ.....

ಒಂದು ದಿನ ಸಂಜೆ ಏಳು ಘಂಟೆಯ ಸಮಯದಲ್ಲಿ ಅವರ ಮನೆ ಎದುರಿಗಿದ್ದ ತೆಂಗಿನಮರದ ಮೇಲಿಂದ ಒಂದು ಪುಟ್ಟ ಮಗುವು ಅಳುವ ಶಬ್ದ ಕೇಳಿ ಬಂತು. ರಾಯರು ಮತ್ತು ಅವರ ಮಡದಿ ಗಾಬರಿಯಿಂದ ಆಚೆ ಬಂದು, ಯಾವ ಮಗು ಈ ಹೊತ್ತಿನಲ್ಲಿ ಎಂದು ಹೊರಬರುವ ಹೊತ್ತಿಗೆ ಅಳುವು ನಿಲ್ಲುತ್ತಿತ್ತು. ಮತ್ತೆ ಸ್ವಲ್ಪ ಸಮಯದ ನಂತರ ಮತ್ತೆ ಮಗುವಿನ ಅಳುವ ಸದ್ದು, ಈ ಸರ್ತಿ ತಕ್ಷಣ ಆಚೆ ಬಂದು, ಗಮನುಸಿದಾಗ, ಅದು ಎದುರಿನ ತೆಂಗಿನಮರದ ಮೇಲಿನಿಂದ ಅಂತ ಗೊತ್ತಾಯಿತು. ರಾಯರ ಪತ್ನಿ ಶಾರದಮ್ಮನವರಿಗೆ ಒಂದೇ ಆತಂಕ, ಗಾಬರಿ. ಅವರು – ರೀ ಇದೇನ್ರೀ, ಅಪಶಕುನ, ಮನೆಯಲ್ಲಿ ಬೇರೆ ತುಂಬಿದ ಬಸುರಿ ಇದ್ದಾಳೆ. ಮಗು ಅಳೋದು ನಮ್ಮ ಮನೆಯ ಎದುರಿಗೆ, ಅದು ಹೇಗೆ ಮರದ ಮೇಲೆ ಸೇರಿಕೊಂಡು ಬೀಳದೆ ಅಳುತ್ತಾಯಿದೆ ? ಇದು ಯಾಕೋ ನನಗೆ ಸರಿ ಕಾಣುತ್ತಿಲ್ಲ. ಇದು ಯಾವ ಭೂತದ, ಪಿಶಾಚಿಯ ಚೇಷ್ಟೇಯೋ ಏನೋ. ನಾಳೆ ಮೊದಲು ನಮ್ಮ ಆಚಾರ್ ನನ್ನು ಸಂಪರ್ಕಿಸಿ ಅವರ ಸಲಹೆ ಕೇಳೋಣವೆಂದು ಆಗ್ರಹಿಸಿದರು ಶಾರದಮ್ಮ.

ಮಾರನೆಯ ದಿನ ಸಂಕರ್ಷಣಾಚಾರ್ ಬಂದಾಗಲೂ ಮರದ ಮೇಲಿಂದ ಮಗುವಿನ ಅಳುವಿನ ಶಬ್ದ ಕೇಳಿ, ಅವರು ಗಾಬರಿಯಾದರೂ, ತೋರಿಸಿಕೊಳ್ಳದೆ, ಇದು ಬಹುಶಃ ಪಿತೃಗಳ ಅಸಮಾಧಾನದ ಪರಿಣಾಮವೂ ಸಹ ಇರಬಹುದು. ಯಾವುದಕ್ಕೂ ನಾವು ನಾಳೆ ಬೆಳಿಗ್ಗೆ ಮರದ ಕೆಳಗೆ ಒಂದೆರಡು ಹೋಮ, ಹವನ ಮಾಡೋಣ.ಅದರ ದೆಸೆಯಿಂದಾಗಿ ಅದಕ್ಕೆ ಪರಿಹಾರ ಸಿಗಬಹುದು ನೋಡೋಣ ಎಂದು ಹೇಳಿ, ನಾಳೆಯ ಹೋಮಕ್ಕೆ ಎಲ್ಲಾ ತಯಾರಿ ಮಾಡಿ ಎಂದು ದೊಡ್ಡ ಪಟ್ಟಿಯನ್ನು ನೀಡಿದರು.

ರಾಯರು ಆಚಾರ್ ಹೇಳಿದ್ದನ್ನೆಲ್ಲಾ ತಂದು, ಅವರ ಬರುವಿಕೆಗೆ ಕಾಯ್ತಾ ಇದ್ದರು.ಇದರ ನಡುವೆ ಆಗಾಗ್ಗೆ ಮಗುವಿನ ಅಳುವಿನ ಶಬ್ದ ಬರೋದು, ತಕ್ಷಣ ನಿಲ್ಲೋದು ಆಗ್ತಾನೆ ಇತ್ತು. ಸಂಕರ್ಷಣಾಚಾರ್ ಬಂದು ಶಾಸ್ತ್ರೋಕ್ತವಾಗಿ ಹೋಮ, ಹವನ ಮಾಡಿ, ಕೈ ತುಂಬಾ ದಕ್ಷಿಣೆ ಪಡೆದು ಆಶೀರ್ವದಿಸಿ, ಒಳ್ಳೆಯದಾಗಲಿ ಎಂದು ಹೇಳಿ ಹೊರಟರು. ಅದರ ಪರಿಣಾಮವೋ ಏನೋ ಮಗುವಿನ ಅಳು ನಿಂತಿತು ಅಂತ ರಾಯರ ಕುಟುಂಬವು ಸಂತೋಷದಿಂದ ಮೂರ್ನಾಕು ಘಂಟೆಗಳ ಕಾಲ ನೆಮ್ಮದಿಯಿಂದ ಇದ್ದರು. ಆದರೆ, ಆ ನೆಮ್ಮದಿಗೆ ಭಂಗ ಸಂಜೆ ಆರರ ಹೊತ್ತಿಗೆ ಆಗೇಹೋಯಿತು.ಮತ್ತೆ.. ಅದೇ ಮಗುವಿನ ಅಳುವ ಶಬ್ದ. ಶಾರದಮ್ಮಂಗೆ ಹುಚ್ಚೇ ಹಿಡಿದ್ಹಂಗೆ ಆಯಿತು. ಇದೇನ್ರೀ ಇದು ಗ್ರಹಚಾರ, ಹೋಯ್ತೇನೋ ಪಿಶಾಚಿ ಅಂದರೆ, ಮತ್ತೆ ವಕ್ಕರಿಸಿದೆ ಎಂದು ಪರಿತಪಿಸುತ್ತಿದ್ದಾಗ, ಪಕ್ಕದ ಮನೆಯ ನಂಬೂದಿರಿ ಬಂದು – ನನ್ನ ಹೆಂಡತಿ ಹೇಳಿದಳು, ಆ ಮಗುವಿನ ಅಳುವ ನಿರಂತರ ಶಬ್ದದ ಬಗ್ಗೆ. ನಂಗೇನೋ ಇದು ಯಾವುದೋ ಮಾಟ, ಮಂತ್ರದ ಹಾಗೆ ಕಾಣಿಲಿಕ್ಕೆ ಹತ್ತಿದೆ. ನಂಗೆ ಗೊತ್ತಿರುವ ಒಬ್ಬ ಮಂತ್ರವಾದಿ ಒಬ್ಬ

ಇದ್ದಾನೆ, ಅವನು ಯಾವುದೇ ಭೂತವಿದ್ದರೂ ಸುಲಭವಾಗಿ ಉಚ್ಚಾಟಿಸುತ್ತಾನೆ.ಆದರೆ, ಅವನು ಸ್ವಲ್ಪ ಕಾಸ್ಟ್ಲಿ ಎಂದು ರಾಗ ಎಳೆದಾಗ, ರಾಯರು – ದುಡ್ಡಿನ ಚಿಂತೆ ಬಿಡಿ, ಒಟ್ಟಿನಲ್ಲಿ ಪರಿಹಾರ ಸಿಕ್ಕರೆ ಸಾಕು ಎಂದಾಗ, ನಂಬೂದಿರಿಯು – ಸರಿ ಹಾಗಾದರೆ ನಾಳೆ ಬೆಳಿಗ್ಗೆಯೇ ಅವನನ್ನು ಕರೆಸಿ ಅದರ ಉಚ್ಚಾಟನೆ ಮಾಡಿಬಿಡೋಣವೆಂದು ಆಶ್ವಾಸನೆ ನೀಡಿದರು.

ಮಾರನೆಯ ದಿನ, ಮಂತ್ರವಾದಿ ಬಂದು ಅಬ್ಬರದಿಂದ ಕೂಗಿ, ಕಿರುಚಿ ಮಾಡುತ್ತಿದ್ದರಿಂದ ಸುತ್ತಮುತ್ತಲಿನ ಜನಗಳು ಬಂದು ಸೇರಿ, ಕುತೂಹಲದಿಂದ ಮುಂದೆ ಏನಾಗತ್ತೋ ಎಂದು ಕಾತುರದಿಂದ ಕಾಯುತ್ತಿದ್ದಾಗ.....

ಕರಿಬಸಪ್ಪ ಬಂದವನೇ...ಇವರು ಮಾಡುತ್ತಿದ್ದ ಪೂಜೆ, ಮಂತ್ರ ಯಾವುದನ್ನು ಲೆಕ್ಕಿಸದೆ, ಎಲ್ಲಾ ಜನರು ಎಷ್ಟು ಬೇಡವೆಂದರೂ ಸಹ, ಅವನ ಪಾಡಿಗೆ ಅದೇ ತೆಂಗಿನಮರವನ್ನು ಸರಸರ ಏರುತ್ತಿದ್ದಂತೆ...ಮತ್ತೆ ಆ ಮಗುವಿನ ಶಬ್ದ ಕೇಳಿದ್ದರಿಂದ, ಅವನು ಸಂತೋಷಗೊಂಡು ಸಂತಸದಿಂದ ಪೂರ್ತಿ ಮೇಲೇರಿ ಆ ಮಗುವನ್ನು ಎತ್ತಿ ತರುತ್ತಾನೇನೋ ಎಂದು ಕಾಯುತ್ತಿದ್ದ ಜನರ ಮುಂದೆ, ಅವನು ನಿಧಾನವಾಗಿ ಇಳಿದು ಕೈಯಲ್ಲಿದ್ದ ಮೊಬೈಲ್ ಫೋನನ್ನು ಮುದ್ದಿಸುತ್ತಾ ಇದ್ದಾಗ ಆ ಅಳುವಿನ ಶಬ್ದ ನಿಲ್ಲುತ್ತೆ. ಯಾರಿಗೂ ತಲೆ ಬುಡ ಅರ್ಥವಾಗದೆ ಇದ್ದಾಗ, ಕರಿಬಸಪ್ಪ ರಾಯರ ಹತ್ತಿರ ಬಂದು – ಸ್ವಾಮಿ, ನಾನು ಮೊನ್ನೆ ನಿಮ್ಮ ಮನೆಗೆ ತೆಂಗಿನಕಾಯಿ ಕೀಳಲು ಬಂದಾಗ, ಈ ಮೊಬೈಲ್ ಫೋನನ್ನು ಅಲ್ಲೇ ಮೇಲೆ ಮರೆತು ಬಂದಿದ್ದೀನಿ ಅನ್ಸುತ್ತೆ. ಆ ಮೊಬೈಲ್ ಆನ್‌ನಲ್ಲೇ ಇದ್ದದ್ದರಿಂದ, ಅದಕ್ಕೆ ರಿಂಗ್ ಬಂದಾಗಲೆಲ್ಲ ಮಗುವಿನ ಅಳುವ ಶಬ್ದ ಬರುತ್ತಿತ್ತು. ನಂಗೆ ನನ್ನ ಮೊಮ್ಮಗುವಿನ ಅಳುವ ರೀತಿ ಇಷ್ಟ ಆಗಿದ್ದರಿಂದ, ಅದನ್ನೇ ರೆಕಾರ್ಡ್ ಮಾಡಿ, ನನ್ನ ಮಗಳು ಅದನ್ನು ರಿಂಗ್ ಟೋನಾಗಿ ಇಟ್ಟುಕೊಟ್ಟಿದ್ದಳು. ನಾನು ಮೊನ್ನೆಯೇ ಬೇರೆ ಊರಿಗೆ ಕಾರ್ಯನಿಮಿತ್ತ ಹೋದಾಗಲಿಂದ ಈ ಫೋನಿನ ಚಿಂತೆಯೇ ಆಗಿತ್ತು, ಆದರೆ, ಯಾವ ಮರದಲ್ಲಿ ಬಿಟ್ಟಿದ್ದೇ ಅಂತ ನನಗೆ ಜ್ಞಾಪಕವಿರಲಿಲ್ಲ. ಪಕ್ಕದ ತೋಟಕ್ಕೆ ಹೋಗಿ ಅಲ್ಲೆಲ್ಲಾ ಹತ್ತಿ ಇಳಿದು ಮಾಡಿ ನಿರಾಶನಾಗಿದ್ದೆ. ಇಲ್ಲಿಗೆ ಬಂದಾಗ, ಜನರಿಂದ ನನಗೆ ಮಾಹಿತಿ ತಿಳಿದು, ತಕ್ಷಣ ಮರ ಏರಿ ಇದನ್ನು ತಂದೆ.ಆದರೆ, ದೇವರಾಣೆ ನನಗೆ ಗೊತ್ತಿರಲಿಲ್ಲ, ಇದು ಇಷ್ಟೊಂದು ಗಾಬರಿ ಪಡಿಸಿ ನಿಮ್ಮ ನೆಮ್ಮದಿ ಕೆಡಿಸಿ ಪೂಜೆ ಪುನಸ್ಕಾರ ಮಾಡಿಸುತ್ತೆ ಎಂದಾಗ, ರಾಯರ ಜೊತೆಗೆ ಅಲ್ಲಿ ನೆರೆದಿದ್ದವರೆಲ್ಲಾ... ಅಯ್ಯೋಶಿವನೇ, ಹಿಂಗೆಲ್ಲಾ ಸಹ ಆಗುತ್ತಾ ಈ ಮೊಬೈಲ್ ಎನ್ನುವ ಪುಟ್ಟ ರಾಕ್ಷಸನಿಂದ ಅಂತ ಬೆರಗಾದರು.

ಶಾರದಮ್ಮನವರು–ಸದ್ಯ, ನಾನು ಭಯಬಿದ್ದಿದ್ದೆ, ಎಲ್ಲಿ ಇದು ಭೂತ, ಪ್ರೇತ, ಪಿಶಾಚಿಯ ಕಾಟವೋ ಅಂದ್ಕೊಂಡು. ಸದ್ಯ, ಅದೆಲ್ಲಾ ಏನೂ ಇಲ್ಲದೆ ಸುಲಭವಾಗಿ ಪರಿಹಾರವಾಯ್ತಲ್ಲಾ ಎಂದು ದೇವರಿಗೆ ತುಪ್ಪದ ದೀಪ ಹಚ್ಚಲು ಸಂತಸದಿಂದ ದೇವರಕೋಣೆಗೆ ಹೋದರು. ■

ಆದಿ ಮಾನವನ ಅವಸ್ಥೆ!

ಚಿತ್ರಕಥೆ: **ಶಿವು** ಚಿತ್ರರಚನೆ: **ರಾಂಕಿ ಬೆಳ್ಳೂರ್**



ಇಮಿರಿನಿತ್ತನ ಗಣೇಶ ಪ್ರಸಂಗವು

ಅಣಕು ರಾಮನಾಥ್

"ಇಮಿರಿನಿತ್..!" ಕೂಗಿದಳು ಅನಿತಾ.

"ಅಮರನಾಥ್ ಅನ್ನೇ" ನುಡಿದ ಅಮರ್.

"ಇಂಡಿಯಾದಲ್ಲಿ ಅದು, ಆಸ್ಟ್ರೇಲಿಯಾದಲ್ಲಿ ಇದು ಅಂತ ನೀನೇ ತೀರ್ಮಾನಿಸಿದ್ದು ತಾನೇ!" ಛೇಡಿಸಿದಳು ಅನಿತಾ.

ಅದು ಆದುದೂ ಹಾಗೆಯೇ. ಕಾಂಗರೂದೇಶಕ್ಕೆ ಬಂದ ಮರುದಿನ ಯಾವುದೋ ಅಂಗಡಿಯಲ್ಲಿ ಒಂದಷ್ಟು ಸಾಮಾನು ಖರೀದಿಸಿ "ಹೌ ಮಚ್" ಎಂದ ಅಮರ್.

"ಅಯ್ಟೀಅಯ್ಟ್" ಎಂದನವ. ಆಗಿನಿಂದ ಅಮರ್ಗೆ ಎ ಬದಲು ಐ ಬಳಸುವುದು ಪರಿಪಾಠವಾಯಿತು. ಒಮ್ಮೆ ತನ್ನ ಹೆಸರಿನ ಸ್ಪೆಲಿಂಗ್ ಹೇಳುವಾಗ ಎ ಎನ್ನುವಲ್ಲೆಲ್ಲ ಐ ಹೇಳಿದ ಪರಿಣಾಮವಾಗಿ ಬಿಲ್ಲಿನಲ್ಲಿ "ಇಮಿರಿನಿತ್" ಎಂದು ಪ್ರಿಂಟ್ ಆಗಿತ್ತು. ಅಂದಿನಿಂದಲೇ ಅಮರನಾಥ್ ಇಮಿರಿನಿತ್ ಆಗಿದ್ದು.

ಇಮಿರಿನಿತ್ ಪರದೇಶಿಯಾಗಿ ಹಲವು ತಿಂಗಳುಗಳು ಸಂದವು. ಭಾರತದಲ್ಲಿ ಇನ್ನೇನು ಶ್ರಾವಣ ಕಳೆದು ಭಾದ್ರಪದ ಆರಂಭವಾಗುವುದೆಂಬ ಸೂಚನೆ ವಾಟ್ಸಪ್ ಮೂಲಕ ದೊರೆತ ಕೂಡಲೆ ಇಮಿರಿನಿತ್ "ಅನಿ, ಗಣೇಶ ಕೂಡ್ಸೋಣ ಕಣೆ" ಎಂದ.

"ಆದರೆ ಗಣೇಶ?"

"ನಾವೇ ಮಾಡೋಣ."

"ಗಣೇಶನ್ನ ಮಾಡಕ್ಹೋಗಿ ಅವರಪ್ಪನ್ನ ಮಾಡಿದ್ರು ಅಂತ ಗಾದೆ ಇದೆಯಲ್ಲೇ!"

"ಈಗ ಹಾಗೆಲ್ಲ ಆಗಲ್ಲರೀ. ಇಂಡಿಯನ್ಸ್ ಅಂತಾನೇ ಮಾಡಲ್ ಮೇಕಿಂಗ್ ಕ್ಲಾಸ್ ಇದೆ ವೀಕೆಂಡಲ್ಲಿ" ಎಂದು ಅನಿತಾ ಇಮಿರಿನಿತ್ನ ವಾಟ್ಸಪ್ಗೆ ಒಂದು ಲಿಂಕ್ ಕಳುಹಿಸಿದಳು.

ಲಿಂಕಿನಿಂದ ಅಡ್ರೆಸ್ ಪಡೆದು, ಆನ್ಲೈನ್ ಡಾಲರ್ ವರ್ಗಾಯಿಸಿ ಮಾಡಲ್ ಮೇಕಿಂಗ್ ಕ್ಲಾಸಿಗೆ ಇಬ್ಬರೂ ಹೋದರು. ಅದೇ ಕಾಂಪೌಂಡಿನಲ್ಲಿ ಚಕ್ಲಿ ಕೋಡ್ಬಳೆ ಮೇಕಿಂಗ್ ಕ್ಲಾಸಸ್ ಸಹ ಇದ್ದವು. ಸತಿಪತಿಯರಿಗೆ ಡಬಲ್ ಧಮಾಕಾ!

ಮಾಡೆಲ್ ಮೇಕಿಂಗ್ ಕ್ಲಾಸ್ ನಡೆಸುವವಳು "ಐ ಆಮ್ ಬೆಕ್. ಐ ವಿಲ್ ಟೀಚ್ ಯೂ ಹೌ ಟು ಮೇಕ್ ಗಣೇಶಾಸ್" ಎಂದು ಆರಂಭಿಸಿದಳು. ಹಿಂದಿನ ಸಾಲಿನಲ್ಲಿ ಕುಳಿತಿದ್ದ ಹಿರಿಯ ಮಹಿಳೆಯೊಬ್ಬಳು "ಬೆಕ್ಕೂ ಅಲ್ಲ, ನಾಯಿಯೂ ಅಲ್ಲ. ಬೆಳಗಾವಿಯ ಇರುಪಾಕ್ಸಿಯ ಮಗಳು ಕಮಲ. ಬಿಇಕೆ ಅಂತ ಶಾರ್ಟ್ ಆಗಿ ಬರೆದುಕೊಂಡು ಅದನ್ನೇ ಬೆಕ್ಕೂಂತ ಹೇಳ್ಕೊಳ್ತಾಳಷ್ಟೆ. ನೋಡಕ್ಕೆ ಹೆಗ್ಗಣ, ಹೆಸರು ಮಾತ್ರ ಬೆಕ್ಕು" ಎಂದು ನಗಾರಿ ಕಂಠದಲ್ಲಿ ಪಿಸುಗುಟ್ಟಿ ಮೂತಿ ತಿರುವಿದ್ದು ಅಲ್ಲಿನ ಪುರುಷರಿಗಂತೂ ಇಷ್ಟವಾಗಲಿಲ್ಲ, ಬೆಕ್ಕಿನ ಕಣ್ಣಿನ, ಬೆಕ್ಕಿನ ನಡಿಗೆಯ ಅವಳನ್ನು ಬೆಕ್ಕೆಂದು ಕರೆಯಲೂ ಅವಳ "ಬೆಕ್ ಅಂಡ್ ಕಾಲ್"ಗೆ ಪ್ರತಿಸ್ಪಂದಿಸಲೂ ಸಿದ್ಧರಿದ್ದರೆಂದು ಅವರುಗಳ ನೋಟವೇ ಹೇಳುತ್ತಿತ್ತು.

"ನೀವು ಬೆಕ್ ಆದರೂ ಗಣೇಶನ ವಾಹವಾದ ಇಲಿಯನ್ನ ಮಾಡೋದನ್ನೂ ಹೇಳ್ಕೊಡ್ತೀರಾ ಮೇಡಂ?" ನಗಾರಿಕಂಠಿ ಉವಾಚ.

ಬೆಕ್ ಇದಕ್ಕೆ ಉತ್ತರಿಸಹೋಗದೆ ಮಣ್ಣಿನಿಂದ ದೊಡ್ಡ ಮುದ್ದೆಯನ್ನು ಮಾಡಿ "ಹೀಗೆ ನೀವೂ ದೊಡ್ಡ ಬಾಲ್ ಆಫ್ ಮಡ್ ಮಾಡಿ. ಅದನ್ನ ಚೆನ್ನಾಗಿ ನೀಡ್ ಮಾಡಿ" ಎಂದಳು.

"ನೀಡ್ ಮಾಡೋದು ಅಂದ್ರೆ ಏನೆ? ನೀಡ್ ಇದ್ರೆ ತಾನೆ ಮಾಡೋದು?" ಅಡುಗೆಮನೆಗೆ ದೂರವೇ ಇದ್ದ ಅಮರ್ಗೆ ನಾದುವುದು ಅರಿಯದ ಕಲೆ.

ಬೆಕ್ ನಾದತೊಡಗಿದಂತೆ ಹಿನ್ನೆಲೆಯಲ್ಲಿ "ನಾದು ಮಯಾ; ಈ ಮಣ್ಣಿನುಂಡೆ ನಾದುಮಯಾ; ಕೊಳದಿಂದ ಗೋವಿಂದ ಈ ಮಣ್ಣ ತಂದಿರಲು; ನದಿಯ ನೀರು ಕೊಳದ ಮಣ್ಣು ನಾದಿ ನಾದಿ ಬೆರೆಯೆ ಮೂರುತಿ ಮೂಡಿ ಬರುತಿರಲು; ನಾದುಮಯಾ" ಎಂಬ ಹಾಡು ಕೇಳಿಬರುತ್ತಿತ್ತು.

ಅಮರ್ನ ಕೈಯಲ್ಲಿದ್ದ ಮುದ್ದೆ ನಾದಿದಷ್ಟೂ "ನಾದಿರಿದಿರಿ ತೋಂ ತದಿರನಾ" ಎಂದು ಕುಣಿಕುಣಿಯುತ್ತಿತ್ತೇ ವಿನಾ ಹದಕ್ಕೆ ಬರಲಿಲ್ಲ. "ಕೊಂಚ ಎಣ್ಣೆ ಹಾಕಿ ಸಾರ್" ಎಂದ ಪಕ್ಕದವನು.

"ಬೆಳಗ್ಗೆ ಬೆಳಗ್ಗೆ ಹಾಕಿದರೆ ಬಯ್ತಾಳೆ ಸರ್ ವೈಫು" ಪಿಸುಗುಟ್ಟಿದ ಅಮರ್.

"ಅದಲ್ಲ ಸಾರ್, ಆಯಿಲ್ಲೂ. ಕೈಗೆ ಕೊಂಚ ಆಯಿಲ್ ಹಾಕ್ಕೊಂಡ್ರೆ ಸುಲಭ ಆಗತ್ತೆ ಅಂತ ಬೆಕ್ ಹೇಳಿದ್ರಲ್ಲ."

ಇವೆಲ್ಲವನ್ನೂ ಗಮನಿಸುತ್ತಿದ್ದ ಬೆಕ್ ಇವನ ಬಳಿ ಸಾರಿ, ತನ್ನ ಮಣ್ಣನ್ನೇ ನೀಡಿ, "ದಿಸ್ ಈಸ್ ಸ್ಟೊಮಕ್ ಮಡ್. ಪ್ರಿಪೇರ್ ಒನ್ ಮೋರ್ ಫಾರ್ ಹೆಡ್ ಮಡ್" ಎಂದಳು.

ದೊಡ್ಡ ಮಣ್ಣಿನುಂಡೆಯ ಮೇಲೆ ಪುಟ್ಟದನ್ನಿಟ್ಟು, ಸೊಂಡಿಲು, ಕೈಕಾಲುಗಳನ್ನು ರಚಿಸಿ, ಅಂಟಿಸಿ ಗಣೇಶನ ವಿಗ್ರಹವನ್ನು ಬೆಕ್ ತಯಾರಿಸಿದಳು. ಅಮರ್ ಕೂಡ ತಯಾರಿಸಿದ. ಒಂದೇ ವ್ಯತ್ಯಾಸ. ಗಣೇಶನ ತಲೆ ಹೊಟ್ಟೆಗಿಂತ ದಪ್ಪಗಿತ್ತು!

"ಪ್ರಾಕ್ಟೀಸ್ ಎಟ್ ಹೋಂ" ಎನ್ನುತ್ತಾ ಕಿಟ್ ಕೊಟ್ಟು ಬೆಕ್ ಕ್ಯಾಟ್ ವಾಕ್ ಮಾಡುತ್ತಾ ಹೊರನಡೆದಳು.

ಹಬ್ಬಕ್ಕೆ ಇನ್ನು ಎರಡೇ ದಿನಗಳಿವೆ ಎಂದಾಗ ಇಮಿರಿನಿತ್ ಉರುಫ್ ಅಮರ್ ಗಣೇಶನನ್ನು ರೂಪಿಸಲು ಕುಳಿತ. ಹಿಂದಿನ ಅನುಭವದಿಂದ ಫಲವಾಗಿ ಹೊಟ್ಟೆ ದೊಡ್ಡದಾಗಿಯೇ ಸಿದ್ಧವಾಯಿತು. ತಲೆಯೂ ಒಂದು ಮಟ್ಟಕ್ಕೆ ಕುಳಿತಿತು. ಆದರೆ ನೀರು ಹೆಚ್ಚಾದ ಕಾರಣ ಸರ್ಕಾರಿ ಕಚೇರಿಯಲ್ಲಿ ಮಧ್ಯಾಹ್ನ ಮೂರರ ಸಮಯದಲ್ಲಿ ತೂಕಡಿಸುವ ತಲೆ ಹೊತ್ತ ಉದ್ಯೋಗಿಗಳು ತಲೆಯನ್ನು ಎದೆಯ ಮೇಲಕ್ಕೆ ವಾಲಿಸಿಕೊಳ್ಳುವ ರೀತಿಯಲ್ಲೇ ಗಣೇಶನ ತಲೆ ವಾಲುತ್ತಿತ್ತು. "ಸ್ವಲ್ಪ ಮಣ್ಹಾಕಿ" ಎಂದಳು ಮಡದಿ. ತರಾತುರಿಯಲ್ಲಿ ನಾದದೆ ಹಾಕಿದ ಮಣ್ಣಿನಲ್ಲಿದ್ದ ಪುಟ್ಟ ಕಲ್ಲುಗಳು ಗಣೇಶನ ಮುಖದಲ್ಲಿ ಮೊಡವೆಗಳು

ಎದ್ದಂತೆ ಕಾಣುತ್ತಿದ್ದವು.

"ಪರವಾಯಿಲ್ಲ, ನಮ್ಮದು ಹದಿಹರಯ ಗಣಪತಿ ಅಂತ ಹೇಳೋಣ" ಎಂದು ಉಪಾಯ ಸೂಚಿಸಿದಳು ಅನಿತಾ. ಕಿರೀಟ, ಕಾಲು, ಕೈ, ಪೀಠ, ಪೀಠಕ್ಕೊಂದು ಇಲಿ ಎಲ್ಲವೂ ತಯಾರಾದವು. ಕಣ್ಣಿಗೆ ಮುತ್ತು, ಕರಿಮಣಿಗಳನ್ನಿಟ್ಟು ವಿವಾಹವೇ ಇರದ ವಿನಾಯಕನಿಗೆ "ಕರಿಮಣಿ ಭಾಗ್ಯ" ಒದಗಿಸಿದ್ದೂ ಆಯಿತು. ಸಿದ್ಧವಾದ ವಿಗ್ರಹವನ್ನು ಸತಿಪತಿಯರಿಬ್ಬರೂ ನೋಡಿದರು. "ಸೊಂಡಿಲು ಚಿಕ್ಕದಾಯಿತಲ್ಲವೆ?" ಎಂದಳು ಮಡದಿ.

"ಹದಿಹರಯ ಗಣಪತಿ ಅನ್ನೋದರ ಬದಲು ದ್ವಾದಶ ಗಣಪತಿ ಅನ್ನೋಣ. ಇನ್ನೂ ಹನ್ನೆರಡು ವರ್ಷದವನು, ಸೊಂಡಿಲು ಪೂರ್ತಿ ಬೆಳೆಯಕ್ಕೆ ಮುಂಚಿನ ಸ್ಥಿತಿ ಅನ್ನೋಣ" ಎಂದೂ ಅವಳೇ ಸೂಚಿಸಿದಳು.

"ಸೊಂಡಿಲು ಬೆಳೆಯಕ್ಕೆ ಮುಂಚೇನೇ ಹೊಟ್ಟೆ ಬೆಳೀತಾ ಅಂತ ಕೇಳಿದರೆ?" ಸಂದೇಹ ಮುಂದಿಟ್ಟ ಇಮಿರಿನಿತ್

"ಜನರನ್ನ ಕರೆಯಕ್ಕೆ ಮುಂಚೆ ಸಾಕಷ್ಟು ಹೂ ಹಾಕಿ ಸೊಂಡಿಲು ಕಾಣದಂತೆ ಮಾಡಿಬಿಡೋಣ ಬಿಡಿ!"

ಅಲ್ಟಿಮೇಟ್ ಆಲ್ಟರ್ನೇಟಿವ್ಗೆ ಅಸ್ತು ಎಂದ ಅಮರ್.

ಹಬ್ಬದ ದಿನ ಪೂಜೆಗೆ ಅಣಿ ಮಾಡಿಕೊಳ್ಳುವಾಗ ಅನಿತಾ ಮತ್ತೊಮ್ಮೆ ಪ್ರತಿಮೆಯತ್ತ ನೋಡಿದಳು. ನೋಡಿ ಹೌಹಾರಿದಳು. ಹೌಹಾರಿ ಕಿರುಚಿದಳು. "ಹೇ ಮಿಸ್ಟರ್! ವೇರ್ ಆರ್ ಹಿಸ್ ಇಯರ್ಸ್?"

ಗಣೇಶನ ಕಿವಿಗೆಂದು ಸಿದ್ಧಪಡಿಸಿದ್ದ ಎಲೆಯಾಕಾರದ ಎರಡು ಕಿವಿಗಳನ್ನು ಅಂಟಿಸಲು ಇಮಿರಿನಿತ್ ಮರೆತೇಬಿಟ್ಟಿದ್ದ!

"ಪೆರಿಯ ತಪ್ಪುಕು ಪೆರಿಯ ರೋಡೇ ಸೊಲ್ಯೂಷನು" ಎಂದಳು ಅನಿತಾ.

ಕೀಸ್ಟೋರೋ ಬಡಾವಣೆಯ ಪೆರಿ ರೋಡ್ನಲ್ಲಿ ಪ್ರತಿ ವರ್ಷ ನಡೆಯುವ ಗಣೇಶೋತ್ಸವದಲ್ಲಿ ಪಾಲ್ಗೊಳ್ಳಲು ತಮ್ಮ ಕಾರ್ ಕೀ ಕೈಗೆತ್ತಿಕೊಂಡ ಇಮಿರಿನಿತ್.

■

ಬಿಡ್ರಿ....ಸ್ಪೆಷಲ್ ಹಾಕೋಣ...!

ಒಂದು ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಾಗಿ ಗುಂಡನು ಕೌಂಟರಿನಲ್ಲಿ ಹಣ ಕಟ್ಟುವಾಗ ಗೊತ್ತಿಲದೆ, ಹೆಚ್ಚುವರಿಯಾಗಿ ಹತ್ತು ಸಾವಿರ ಜಾಸ್ತಿ ಕಟ್ಟುಬಿಟ್ಟಿದ್ದನು. ಕೌಂಟರಿನವರು ಅದನ್ನು ಇನ್ನು ಏನೂ ಮಾಡಕ್ಕಾಗಲ್ಲ. ನೀವು ಬೇಕಿದ್ರೆ ಡಾಕ್ಟರಿಗೆ ಹೇಳಿ ಎಂದರು. ಅದನ್ನು ಬಂದು ಡಾಕ್ಟರಿಗೆ ತಿಳಿಸಿದಾಗ, ಅವರು – ಮಿ.ಗುಂಡೂರಾವ್, ನೀವೇನೂ ಯೋಚಿಸಬೇಡಿ. ಆಪರೇಷನ್ ಆದಮೇಲೆ, ನಿಮಗೆ ಸಾಧಾರಣ ಹೊಲಿಗೆ ಬದಲು, ಎಂಬ್ರಾಯಡರಿ ಹೊಲಿಗೆ ಹಾಕ್ತೀನಿ, ತಲೆ ಕೆಡಿಸ್ಕೊಬೇಡಿ ಎಂದಾಗ, ಗುಂಡನಿಗೆ ತಲೆ ತಿರುಗಿತು...!

–ವಿ.ವಿಜಯೇಂದ್ರ ರಾವ್

ದಂನಆ

- ✓ ಬಹುಮಾನಗಳನ್ನು ಗಿಟ್ಟಿಸಿಕೊಂಡ ಮಾತ್ರಕ್ಕೆ ಮನುಷ್ಯ ಬಹುಮಾನ್ಯನಾಗಿ ಬಿಡುವುದಿಲ್ಲ.
- ✓ ಕೊನೆಯ ಬೆಂಚಿನ ವಿದ್ಯಾರ್ಥಿ ಮೊದಲ ಬೆಂಚಿನ ಹುಡುಗಿಯನ್ನು ನೋಡುವಾಗ ಮಧ್ಯದ ಬೆಂಚಿನವರು ಅಡ್ಡ ಬರುವುದೇ ಗ್ರಹಣ.
- ✓ ಡು ಯು ನೊ ವೈ ಕ್ಯೂಟ್ ಪೀಪಲ್ ಆರ್ ಆಲ್ವೇಸ್ ಬ್ಯಸಿ? ಐ ವಿಲ್ ಟೆಲ್ ಯು ಲೇಟರ್. ಆ್ಯಮ್ ಬ್ಯುಸಿ.
- ✓ ನಮಗೆ ಕ್ಯೂನಲ್ಲಿ ನಿಲ್ಲಲು ಗೊತ್ತು. ಆದರೆ ಸಾಲಾಗಿ ಅಲ್ಲ.
- ✓ ಲಕ್ಷುರಿ ಈಸ್ ಆಫನ್ ಎ ಮೋರ್ ಎಕ್ಸಪೆನ್ಸಿವ್ ವರ್ಷನ್ ಆಫ್ ಸಂಥಿಂಗ್ ಯು ಆಲ್‌ರೆಡಿ ಹ್ಯಾವ್.
- ✓ ನೀವು ಏನೆಲ್ಲ ತಡವಾಗಿ ಕಲಿತರೊ ಅದೆಲ್ಲವನ್ನೂ ನಿಮ್ಮ ಮಕ್ಕಳಿಗೆ ಬೇಗನೆ ಕಲಿಸಿ.
- ✓ ದಿ ಎರರ್ ಆಫ್ ದಿ ಪಾಸ್ಟ್ ಈಸ್ ದಿ ವಿಸ್ಡಂ ಆಫ್ ದಿ ಫ್ಯೂಚರ್.
- ✓ Mom ಈಸ್ ಜಸ್ಟ್ ಎ ರಿಫ್ಲೆಕ್ಷನ್ ಆಫ್ wow!
- ✓ ಹಣವೇ ಸರ್ವಸ್ವವಲ್ಲ– ಇಂತಹ ನಿರರ್ಥ ಹೇಳಿಕೆ ನೀಡುವ ಮೊದಲು ಸಾಕಷ್ಟು ಸಂಪತ್ತು ದುಡಿದುಕೊಂಡಿರಬೇಕು ಎಂಬುದನ್ನು ಮರೆಯದಿದಿರಿ.
- ✓ ಬಿ ಹ್ಯಾಪಿ ವಿತ್ ನಥಿಂಗ್ ಅಂಡ್ ಯು ವಿಲ್ ಬಿ ಹ್ಯಾಪಿ ವಿತ್ ಎವೆರಿಥಿಂಗ್.
- ✓ ಹೊಟೇಲಿನಲ್ಲಿ ಊಟ ಮುಗಿದ ನಂತರ ಹೆಂಡತಿ ವೈಟರ್‌ಗೆ ಏನಾದರೂ ಟಿಪ್ಸ್ ಕೊಡು ಎಂದು ಗಂಡನಿಗೆ ಸೂಚಿಸಿದಳು; ಗಂಡ ಅವನನ್ನು ಕರೆದು ಹೇಳಿದ: ನೀನು ಮದುವೆ ಮಾಡಿಕೊಳ್ಳಬೇಡ.
- ✓ ದೇರ್ ಈಸ್ ನೊ ಕ್ಲಾಸ್ ಟು ಟೀಚ್ ಹೌ ವಿ ಶುಡ್ ಸ್ಪೀಕ್ ಬಟ್ ದಿ ವೆ ವಿ ಸ್ಪೀಕ್ ಶೋಸ್ ಅವರ್ ಕ್ಲಾಸ್.
- ✓ ನಾನೇ ಯಾವಾಗಲೂ ಸರಿ ಎಂದು ಭಾವಿಸುವವರು ಬದುಕಿನಲ್ಲಿ ಏನನ್ನೂ ಕಲಿಯರು.
- ✓ ಬೆಂಗಳೂರಿನ ಪ್ರತಿ ಆಟೋಗುಂಟು ಅದರದೇ ನಿಶ್ಚಿತ ಗುರಿ. ನೀವು ಹೋಗಬೇಕಾದ ಜಾಗ ಆ ಗುರಿಯೇ ಆಗಿದ್ದರೆ ಅದು ನಿಮ್ಮ ಪುಣ್ಯವೇ ಸರಿ.
- ✓ ನೊಬಡಿ ಈಸ್ ಬಾರ್ನ್ ಇನ್‌ಸೆಕ್ಯೂರ್, ಆ್ಯಂಗ್ರಿ, ಬೋರ್ಡ್ ಅಂಡ್ ಡಿಪ್ರೆಸ್ಡ್.

ಕಮಲಮ್ಮನವರ ನಿಟ್ ಪಿಕ್ಕಿಂಗು

ವಾಣೀ ಸುರೇಶ್

(ಕೆಲವು ವರ್ಷಗಳ ಹಿಂದೆ ಅಪರಂಜಿ ಓದುಗರಿಗೆ ಮೂಲೆ ಮನೆ ಕಮಲಮ್ಮ–ಕೃಷ್ಣಮೂರ್ತಿ ದಂಪತಿಗಳನ್ನು ಪರಿಚಯಿಸಿ, ಅವರು ಹಿಂದಿನ ಸಲ ಕ್ಯಾಲಿಫೋರ್ನಿಯಾಗೆ ಬಂದಾಗ ಅನಿರೀಕ್ಷಿತವಾಗಿ ಕರೆಂಟ್ ಹೋಗಿದ್ದಾಗ ಪಡಿಪಾಟಲುಪಟ್ಟಿದ್ದನ್ನ ನಾನು ಹೇಳಿದ್ದು ತಮಗೆ ನೆನಪಿರಬಹುದು. ಈಗ ಮೂ. ಮ. ಕ – ನವರ ಜೀವನೋತ್ಸಾಹದ ಬಗ್ಗೆ ಮತ್ತೊಂದು ಝಲಕ್ ತಮಗಾಗಿ.)

ನಿಮಗೆ ತಿಳಿದಿರಬಹುದು–ಮೂ. ಮ. ಕ ನವರಿಗೆ ದೇವರು–ದಿಂಡರು, ವೇದಾಂತ, ಪ್ರವಚನ–ಗಿವಚನಗಳ ತಲೆ ಕಂಡರಾಗದು ಎನ್ನುವ ವಿಷಯ. ಏನಿದ್ದರೂ ಖುಷಿಯಾಗಿದ್ದು ಕಾಲನ ಕರೆ ಬರುವವರೆಗೂ ಎಂಜಾಯ್ ಮಾಡಿ ಹೊರಡಬೇಕೆನ್ನುವುದು ಅವರ ಧ್ಯೇಯ.

ಆದ್ದರಿಂದ ಯಾವುದನ್ನೂ ಹೆಚ್ಚಾಗಿ ತಲೆಗೆ ಹಚ್ಚಿಕೊಳ್ಳದೇ ನೋಟ–ನುಡಿಗೆ ನೋಡ್ಕೊಂಡು ಮಕ್ಕಳ ಜೊತೆ ಹಾಯಾಗಿರೋದು ಅಂತ ಸಿಂಪಲ್ಲಾಗಿ ಪ್ಲಾನು ಮಾಡಿದ್ದರು. ಹಾಗಾಗಿ ಮಕ್ಕಳಿರೋ ಅಮೆರಿಕಾ, ಆಸ್ಟ್ರೇಲಿಯಾದ ಪ್ರವಾಸಗಳಿಗೆ ಯಾವ ಬೇಜಾರಿಲ್ಲದೇ ಹೋಗಿಬರೋರು. ಆದರೆ ವಿಧಿವಿಪರ್ಯಾಸದಂತೆ ತೊಂದರೆ ಇದ್ದಿದ್ದೆಲ್ಲಾ ಪಾಪ ಅವರ ತದ್ವಿರುದ್ಧವಾದ ಅಭಿರುಚಿಯ ಅವರ ಗಂಡ ಕೃಷ್ಣಮೂರ್ತಿಗಳದ್ದು. ಬೆಳಗಿನ ಸಂಧ್ಯಾವಂದನೆ, ಸಂಜೆಯ ಗೀತಾಪ್ರವಚನಕ್ಕೆ ಹಾಜರಾಗಲು ಮಾತ್ರಾ ತಪ್ಪದೇ ತಮ್ಮ ಸೋಫಾ ಬಿಟ್ಟೇಳುವ ಅವರ ಕಂಪ್ಲೇಂಟು– 'ಮಕ್ಕಳು ಕರೆದಾಗೆಲ್ಲಾ ಇವಳು ಯಾಕೆ ಹೀಗೆ ಹದಿನಾರುವರ್ಷದ ಹುಡುಗಿ ಹಾಗೆ–ಹೋಗೋಣ ಬನ್ರೀ ಅಂತ ಕುಣೀತಾಳಲ್ಲ!'– ಅಂತನ್ನೋದು.

ಕೊನೆಗೆ ಅಮೆರಿಕೆಯಲ್ಲಿರೋ ದೊಡ್ಡ ಮಗಳೇ ಇಬ್ಬರಿಗೂ ಒಪ್ಪಿಗೆಯಾಗುವ ಒಂದು ಐಡಿಯಾ ಸೂಚಿಸಿದಳು. ಅದರ ಪ್ರಕಾರ, ಮೂ.ಮ.ಕ–ರು ಯಜಮಾನರ ಹೊತ್ತುಗೊತ್ತಿನ ಊಟತಿಂಡಿಗಳಿಗೆ ಕೇಟರಿಂಗ್–ನ ವ್ಯವಸ್ಥೆ ಮಾಡಿ, ದೊಡ್ಡ ಮಗಳು ನಮಿತಾ ಜೊತೆಗೆ ನಾಲ್ಕು ತಿಂಗಳ ವಾಸ್ತವ್ಯಕ್ಕಾಗಿ ಕ್ಯಾಲಿಫೋರ್ನಿಯಾದ ಡಬ್ಲಿನ್ನಿಗೆ ಹೋಗೋದು. ಕೃಷ್ಣಮೂರ್ತಿಗಳು ಪೂಜೆ–ಪುನಸ್ಕಾರ, ಪ್ರವಚನ ಅಂತೆಲ್ಲಾ ಮನೇಲಿ ಹಾಯಾಗಿದ್ದು, ಆಮೇಲೆ ಮಕ್ಕಳ ಮನೆಗಳಿಗೆ ಹೋಗಿ, ಒಂದು ಹದಿನೈದು ದಿನ ಇದ್ದ ಶಾಸ್ತ್ರಮಾಡಿ, ನಂತರ ಇಬ್ಬರೂ ಒಟ್ಟಿಗೆ ವಾಪಸ್ ಬರೋದು – ಅಂತಾಯ್ತು .

ಕಮಲಮ್ಮನೋರು ಮರೆಯದೇ ಮೊಟ್ಟಮೊದಲು ಗಾಡ್ರೆಜ್ ಬೀರೂಲಿ ಭದ್ರವಾಗಿಟ್ಟಿದ್ದ ಅಮೆರಿಕೆಯ ಹತ್ತುವರ್ಷದ ಮಲ್ಟಿಪಲ್ ವೀಸಾನ ತೆಗೆದು ಅವರ ಹ್ಯಾಂಡ್ ಬ್ಯಾಗಲ್ಲಿ ಸಂಭ್ರಮವಾಗಿ ಇಟ್ಟುಕೊಂಡು, ಅವರ ಸ್ಪೆಷಲ್ ಕೋಡುಬಳೆ, ಕೊಬ್ರಿಮಿಠಾಯಿ, ಮೆಂತ್ಯದ ಹಿಟ್ಟು, ಚಟ್ನಿಪುಡಿಗಳನ್ನೆಲ್ಲ ಅಕ್ಕರಾಸ್ತೆಯಿಂದ ಮಾಡಿಕೊಂಡು ಮಗಳ ಜೊತೆ ಹೊರಟೇಬಿಟ್ಟರು.

ಬೆಂಗಳೂರನ್ನೇ ಜ್ಞಾಪಿಸುವ ಕ್ಯಾಲಿಫೋರ್ನಿಯಾದ ಹವೆಯನ್ನು ಒಂದು ವಾರದಲ್ಲಿ ಖುಷಿಯಾಗಿ ಒಗ್ಗಿಸಿಕೊಂಡ ಅವರು ಸಮಯ ಸಿಕ್ಕಿದಾಗೆಲ್ಲಾ ಮೊಮ್ಮಕ್ಕಳಿಗೆ ತಾವು ತಂದಿದ್ದ ಹಳಗುಳಿಮನೆ, ಕವಡೆ, ಚೌಕಾಬಾರಗಳನ್ನೂ ಹೇಳಿಕೊಡ್ತಾ, ನಿತ್ಯವೂ ಹೊತ್ತಿಗೊತ್ತಿಗೆ ರುಚಿರುಚಿಯಾಗಿ ನುಚ್ಚಿನುಂಡೆ, ಮಜ್ಜಿಗೆಹುಳಿ, ಒತ್ತು ಶಾಮಗೆ, ಆಂಬೊಡೆಗಳನ್ನು

ಅಚ್ಚುಗಟ್ಟಾಗಿ ಮಾಡ್ತಾ, ವೀಕೆಂಡುಗಳಲ್ಲಿ ಬೀಚು, ಇಂಡಿಯನ್ ಸ್ಟೋರು, ಸ್ನೇಹಿತರ ಮನೆಗಳಲ್ಲಿ ಲಂಚು, ಡಿನ್ನರ್ರು ಅಂತ ಸುತ್ತಾಡಿಕೊಂಡು ಸುಖವಾಗಿದ್ದರು. ಇತ್ತ ಕಡೆ ಅರಸನ ಅಂಕೆಯಿಲ್ಲದ, ದೆವ್ವದ ಕಾಟವಿಲ್ಲದ (ಮೂ.ಮ.ಕ. ರು ಕ್ಷಮಿಸಲಿ) ಕೃಷ್ಣಮೂರ್ತಿಗಳ ಖುಷಿಯನ್ನಂತೂ ಹೇಳಲೇಬೇಕಿಲ್ಲ ಬಿಡಿ.

ಅಷ್ಟೆಲ್ಲಾ ಆದರೂ ಅಲ್ಲಿಯ ರೆಸ್ಟುರಾಂಟ್ ಗಳಲ್ಲಿ ತಿನ್ನಕ್ಕೆ ಮಾತ್ರಾ ಆಕೆ–'ನಾನೆಲ್ಲಿಗೆ ಬೇಕಾದ್ರೂ ಬರ್ತೀನಿ ಆದರೆ ಅಲ್ಲಿ ಬೆಳ್ಳುಳ್ಳಿ, ಎಗ್ಗು, ಮಾಂಸ–ಮಡ್ಡಿ, ಮೀನು–ಮೊಸಳೆ ಅಂಥದ್ದು ಮಾತ್ರಾ ಇರಬಾರದಪ್ಪಾ'–ಅನ್ನೋದೊಂದು ಕಂಡೀಷನ್ನು ಹಾಕೋರು. ಸಾಲದ್ದಕ್ಕೆ ಅವರಿಗೆ ಕೆಂಪಗೆ ಕಾಣೋ ಎಲ್ಲಾ ತಿನ್ನುವ ವಸ್ತುಗಳ ಮೇಲಂತೂ ಎಲ್ಲಿಲ್ಲದ ಗುಮಾನಿ. ಟೊಮ್ಯಾಟೋ ಸಾಸಿನ ಮೇಲಂತೂ ಬದ್ಧ ದ್ವೇಷ. ಇದು ಆ ಮ್ಲೇಚ್ಛರ ದೇಶಗಳಲ್ಲಿ ಸುಮಾರು ಇಪ್ಪತ್ತು ವರ್ಷಗಳು ಮಣ್ಣು ಹೊತ್ತಿರುವ ಅವರ ಹೆಣ್ಣುಮಕ್ಕಳಿಗೂ ಬಿಡಿಸಕ್ಕಾಗದ ಕಗ್ಗಂಟು.

ಹೀಗಿರುವಾಗ ಮುದ್ದಿನ ಕಿರಿಮಗ ಒಂದು ದಿನ ಬಂದು–'ಅಮ್ಮಾ, ನಮ್ಮ ಬಾಸ್ಟನ್ ಆಫೀಸಲ್ಲಿ ಕೆಲಸ ಇದೆ. ನೀನೂ ರೆಡಿಯಾಗು, ಐದಾರು ದಿನ ಹೋಗಿ ಬರೋಣ' ಅಂದಾಗ, 'ವರ್ಷಾವಧಿ ಹಬ್ಬ ನವರಾತ್ರಿ. ಆಗಲೇ ಮುಹೂರ್ತವೇ ಇವನಿಗೆ?'– ಅಂತ ಒಳಗೊಳಗೇ ಕೊರಗಿದರು. ಹೋಗದೆ ಇರೋಣಾಂದ್ರೆ ಈ ಟೈಮಲ್ಲಷ್ಟೇ ಬಾಸ್ಟನ್ನಿರೋ ಈಸ್ಟ್ ಕೋಸ್ಟ್ ನಲ್ಲಿ, ಚಳಿಗಾಲಕ್ಕೆ ಎಲೆ ಉದುರಿಸುವ ಮೊದಲು ಗಿಡಮರಗಳಲ್ಲಿರೋ ಎಲೆಗಳೆಲ್ಲಾ ಬಣ್ಣಬಣ್ಣ ತಾಳಿ, ಕಣ್ಣಿಗೆ ಹಬ್ಬವಾಗೋ ವಿಶ್ವವಿಖ್ಯಾತ fall colours–ಉ ನೋಡಕ್ಕೆ ಸಿಗೋದು! ಇಂಥ ಚಾನ್ಸ್ ಹೇಗೆ ತಪ್ಪಿಸ್ಕೊಳ್ಳಕ್ಕಾಗುತ್ತೇ ಅಂತ ಚಿಂತಿಸಿ, ಕೊನೆಗೆ ದುಃಖಕ್ಕೆ ಮೂಲವಾದ ಆಸೆಯೇ ಗೆದ್ದಿದ್ದರಿಂದ ಪಶ್ಚಿಮದಿಂದ ಪೂರ್ವಕ್ಕೆ ಆರೆಂಟು ಘಂಟೆಗಳ ಪ್ರಯಾಣವನ್ನೂ ಲೆಕ್ಕಿಸದೆ, ಕೈಗಾವಲಿಗಿರಲಿ ಅಂತ ಒಂದಿಷ್ಟು ಗೊಜ್ಜವಲಕ್ಕಿ ಪುಡೀನೂ ಮಾಡ್ಕೊಂಡು ಕಮಲಮ್ಮ ಹೊರಟೇಬಿಟ್ಟರು.

ಅವತ್ತು ಬೆಳಗ್ಗೆ ಹತ್ತಕ್ಕೆ ತಿಂಡಿತಿಂದು ದೂರದ ಏರ್ ಪೋರ್ಟಿಗೆ ಹೋಗಲು ಮನೆ ಬಿಟ್ಟವರಿಗೆ, ಮೂರು ಗಂಟೆ ತಡವಾಗಿ ಹೊರಟ ಅವರ ಫ್ಲೈಟು ಬಾಸ್ಟನ್ ತಲುಪಿದಾಗ ದುರದೃಷ್ಟವಶಾತ್ ರಾತ್ರಿ ಹತ್ತೂವರೆ ಮೇಲಾಗಿರಬೇಕೇ! ಅಲ್ಲಿಯವರೆಗೂ ಮಗ ಕೊಡಿಸಿದ್ದ ವೆಜಿಟಬಲ್ ಬರ್ಗರ್ರು, ಆಲೂಗೆಡ್ಡೆಯ ಫ್ರೆಂಚ್ ಫ್ರೈಸು, ಅದರೊಂದಿಗೆ ಅವರ ಪರಮಪ್ರಿಯ ಕ್ರೀಮ್ ಟಾಪಿನ ಹಾಟ್ ಚಾಕ್ಲೇಟು ಅಲ್ಲದೇ ಪ್ಲೇನಲ್ಲಿ ತೊಗೊಂಡಿದ್ದ ಹಣ್ಣುಹಂಪಲು, ಡ್ರೈ ಫ್ರೂಟ್ಸ್ ಉ, ಆರೆಂಜ್ ಜ್ಯೂಸ್‌ಗಳೇ ಆಧಾರ. ವರ್ಷಗಟ್ಟಲೆಯ

ಅಭ್ಯಾಸವಾದ ಮಾಮೂಲು ಅನ್ನ–ಹುಳಿ, ಬಾಳಕ, ಸಂಡಿಗೆಯ ಗಡದ್ದಾದ ಊಟ ಬೀಳದಿದ್ದರೆ ಮನಸ್ಸಿಗೆ ಹೇಗೆಹೇಗೋ ಆಗುವ ಜೀವ ಅವರದ್ದು ಪಾಪ.

'ಈ ಅವೇಳೇಲಿ ಯಾವ ರೆಸ್ಟುರಾಂಟ್ ಬಾಗಿಲು ತೆಗೆದಿರತ್ತೋ ಅನಿ? ಹೇಗಿದ್ರೂ ಗೊಜ್ಜವಲಕ್ಕಿ ಪುಡಿ ಇದೆ, ಸೀದಾ ಹೋಟೆಲ್ ರೂಮಿಗೆ ಹೋಗೋಣ ಸಾಕು ನಡಿ'– ಅಂತ ಆತಂಕದಿಂದ ಮಗನಿಗೆ ಹೇಳಿದರು ಆಕೆ. 'ಇಷ್ಟೊತ್ತಲ್ಲಿ ತಣ್ಣಗಿರೋ ಗೊಜ್ಜವಲಕ್ಕಿ ಯಾರು ತಿಂತಾರಮ್ಮಾ? ಯೋಚಿಸಬೇಡ ಬಾ, ಇಲ್ಲಿಯ ನೈಟ್ ಲೈಫ್ ಹೇಗಿರತ್ತೆ ಅಂತ ತೋರಿಸ್ತೀನಿ. ಬಾಸ್ಟನ್ನು, ಲಿಟಲಿಟಲಿ ಅನ್ನೋ ಚೈನ್ ರೆಸ್ಟುರಾಂಟುಗಳಿಗೆ ಮಹಾ ಫೇಮಸ್ಸು, ಅವು ರಾತ್ರಿಂದರಾತ್ರಿ ತೆಗೆದಿರತ್ವೆ' ಅಂತ ಹೇಳಿದ್ದನ್ನ ಕೇಳಿ ಸುಸ್ತು, ನಿದ್ದೆಗಣ್ಣಿನ ಕಮಲಮ್ಮನವರಿಗೆ ಸ್ವಲ್ಪ ಸಮಾಧಾನವಾಯಿತು.

ಅವತ್ತೋ ಅಮೇರಿಕನ್ನರು ವಾರ ಪೂರ್ತಿ ಕಾಯುವ ಶನಿವಾರದ ರಾತ್ರಿ ಬೇರೆ. ದೀಪಗಳಿಂದ ಕಣ್ಣುಕೋರೈಸುವಂತಿದ್ದ ನಾರ್ತ್ ಎಂಡ್ ಡಿಸ್ಟ್ರಿಕ್ಟಿನ ಆ ಹ್ಯಾನೋವರ್ ರೋಡಲ್ಲಂತೂ ಎಲ್ಲೆಲ್ಲಿ ನೋಡಿದರೂ ಹದಿವಯಸ್ಸಿನ ಹುಡುಗ ಹುಡುಗಿಯರೇ ಜಿಗಿಜಿಗೀ ಅಂತ ತುಂಬಿದ್ದರು. ನ್ಯೂ ಇಯರ್ಸ್ ಈವ್ ನ ರಾತ್ರಿಯಲ್ಲಿ ಅಲಂಕರಿಸಿಕೊಳ್ಳುವ ಬೆಂಗಳೂರಿನ ಎಂ ಜಿ ರೋಡು, ಬ್ರಿಗೇಡ್ ರೋಡುಗಳನ್ನ ಮೀರಿಸಿಬಿಟ್ಟಿತ್ತು ಆ ಕಣ್ಣು ಕೋರೈಸುತ್ತಿದ್ದ ದೀಪಾಲಂಕಾರ! ಆಗಷ್ಟೇ ಮಸಾಚುಸೆಟ್ಸ್ನಲ್ಲಿ M S ಮುಗಿಸಿ ಕ್ಯಾಲಿಫೋರ್ನಿಯಾದಲ್ಲಿ ಒಳ್ಳೇ ಕೆಲಸಕ್ಕೆ ಸೇರಿರುವ ಅವರ ಕಿರಿಯಮಗ ಅನಿರುದ್ಧನಿಗೆ ತನ್ನ ಕಾಲೇಜ್ ದಿನಗಳಲ್ಲಿ ಓಡಾಡಿದ್ದ ಎಲ್ಲ ಜಾಗಗಳನ್ನೂ ತಾಯೀಗೆ ತೋರಿಸೋ ಸಂಭ್ರಮವಾದರೆ ಈಕಡೆ ಕಮಲಮ್ಮನವರಿಗೆ ಹೊಟ್ಟೆಯಲ್ಲಿ ಖಂಡಚಾಪುತಾಳದ ತನಿ ಆವರ್ತನ ನಡೀತಿತ್ತು. ಆದರೂ ಒಳ್ಳೇ ಇಡ್ಲಿ ಸಾಂಬಾರ್ ಸಿಗೋ ಹೊಟೇಲನ್ನು ಮಗ ತನಗಾಗಿ ಹುಡುಕ್ತಿದ್ದಾನೆ ಅಂತ ಕಮಲಮ್ಮನೋರು ಹಿಗ್ಗಿದರು. ಕೊನೆಗೆ ಆ ರಶ್ ಅವರ್‌ನಲ್ಲೂ ಟೇಬಲ್ ರಿಸರ್ವೇಶನ್ ಇಲ್ಲದ ಇವರುಗಳಿಗೆ ಅದೃಷ್ಟವಶಾತ್ ಒಂದು ಚೆಂದದ ಹೋಟೆಲಿನಲ್ಲೇನೋ ಒಂದು ಟೇಬಲ್ ಸಿಕ್ಕಿತು.

ಆದರೆ, 'ಅಲ್ಲಾ, ಹೊಟೇಲಲ್ಲಿ ತಿನ್ನೋ ಹೊತ್ತೇ ಇದು, ಇವನದ್ದು ನೋಡಿದರೆ ಒಂದೇ ಗಲಾಟೆ ಗೊಜ್ಜವಲಕ್ಕಿ ಬೇಡಾಂತ. ಆದ್ರೂ ಇಂಥಾ ಪಾಶ್ ಜಾಗದಲ್ಲಿ ಇಷ್ಟು ರಾತ್ರಿ ಅನ್ನದೇ ನಮ್ಮ ಊಟ ತಿಂಡಿ ಸಿಗತ್ತೆ ಅಂದ್ರೆ ನಮ್ಮ ದೇಶ, ನಮ್ಮ ಫುಡ್ಡು ಇನ್ನೆಷ್ಟು ಪಾಪ್ಯುಲರ್ ಆಗಿರಬೇಡ! ಪುಣ್ಯಾತ್ಮ ನಮ್ಮ ಮೋದಿ ಬಂದೇ ಬಂದಿದ್ದು, ತಿಂಡಿ ತೀರ್ಥದಿಂದ ಹಿಡಿದು ನಮ್ಮ ದೇಶದ ಪ್ರತಿಯೊಂದಕ್ಕೂ ಅಂತರಾಷ್ಟ್ರೀಯವಾಗಿ ಇಷ್ಟು ಡಿಮ್ಯಾನ್ಡ್ ಬರೋಹಾಗೆ ಮಾಡಿಬಿಟ್ಟರು! ಆದ್ರೂ ಈಗ ಇಲ್ಲಿ ತೊಗಲಕ್ ತರದೋನ ರಾಜ್ಯಭಾರದಿಂದ ನಮ್ಮಿಬ್ಬರ ದೇಶಗಳ ಮಧ್ಯೆ ಬೇರೆ ಹಳಸಿಕೊಂಡಿದೆಯಲ್ಲ. ಇನ್ನೆಷ್ಟು ದಿನ ಹೀಗೆ ಅಪರಾತ್ರೀಲಿ ಇಂಥಾ ಹೋಟೆಲಲ್ಲಿ ನಮ್ಮ ಇಂಡಿಯನ್ ಫುಡ್ ಸಿಕ್ಕೀತು!' – ಅಂತೆಲ್ಲಾ ವಿದೇಶಾಂಗ ಸಚಿವರಿಗಿಂಥಾ ಹೆಚ್ಚಾಗಿ ವಿಶ್ಲೇಷಿಸುತ್ತಾ ಸುತ್ತಲಿನ ಅಲಂಕಾರ ನೋಡ್ತಾ, ಬರಲಿರುವ ತಿಂಡಿಗೋಸ್ಕರ ಕಾಯ್ತಾ ಕೂತರು ಕಮಲಮ್ಮ.

ಅರ್ಧ ಗಂಟೆ ಕಾದ ಮೇಲೆ, ವೈಯ್ಯಾರವಾಗಿ ಟೇಬಲ್ ಮೇಲೆ ಒಂದು ಉದ್ದನೆಯ ಟ್ರೇ ತಂದಿಟ್ಟಳು ಬೇರರಿಣಿ. ಎಣಿಸಿದ ಹಾಗೆ ನಾಲ್ಕೇ ನಾಲ್ಕು ದುಂಡನೆಯ ಟೊಮೇಟೋ ಬಿಲ್ಲೆಗಳ ಮೇಲಿಟ್ಟಿದ್ದ ಒಂದು ತುಂಡು ಚೀಸು, ಅದರ ಮೇಲೊಂದು ಚಿಕ್ಕ ಚೆರ್ಿಯಂತಿದ್ದ ಕೆಂಪನೆಯ ಹಣ್ಣು, ಆದರ ಸುತ್ತಲೂ ಟ್ರೇಯೊಳಗೆ ಅಲಂಕಾರಿಕತಿಂಡಿಗೋಸ್ಕರವಾಗಿ ಜೋಡಿಸಿದ್ದ ಒಂದೊಂದು ಚಿಕ್ಕ ಸ್ಪಿನೆಚ್ ಎಲೆಗಳ ಮಧ್ಯದಲ್ಲೂ ಒಂದೊಂದರ ಹಾಗೆ

ಇಟ್ಟಿದ್ದ ಆರು ಸಣ್ಣ ಹಸಿರು ಆಲಿವ್ ಗಳು. ಕಮಲಮ್ಮನೋರು – 'ಇದೇನೋ ಇದು? ಆನೆಗೆ ಅನಾಸಿನ್ ಕೊಟ್ಟಹಾಗೆ! ಇದ್ಯಾವ ಮೂಲೇಗೇ' ಅಂತ ಅಲವತ್ತುಕೊಂಡರು. 'ಅಮ್ಮಾ ಈ ಸ್ಯಾಲೆಡ್ ಬರೀ ಸ್ಟಾರ್ಟರ್ ಅಷ್ಟೇ, ಇದನ್ನ ಮುಗಿಸೋ ಹೊತ್ತಿಗೆ ನಮ್ಮ ಆರ್ಡರ್ ಬರತ್ತೆ ಅಂದ ಅನಿರುದ್ಧ. 'ಇಷ್ಟು ಕೊಡಕ್ಕೆ ಇಷ್ಟು ಹೊತ್ತು ಮಾಡ್ಬೇಕೇ? ಚೆನ್ನಾಯ್ತು' ಅಂದ್ಕೊಂಡರು ಕಮಲಮ್ಮ.

ಇನ್ನರ್ಧ ಗಂಟೆ ಕಳೆಯೋ ಹೊತ್ತಿಗೆ ಮತ್ತದೇ ವೈಯ್ಯಾರಿ, ಧಾರಾಳವಾಗಿ ಸುರಿದಿದ್ದ ಟೊಮೇಟೋ ಸಾಸಲ್ಲಿ ಒಂದು ಗುಡ್ಡೆ ನೂಡಲ್ಸು, ಅದರ ತಲೆ ಮೇಲೆ ಒಂದು ಹೊರೆ ತುರಿದ ಚೀಸ್, ಅದರ ಪಕ್ಕದಲ್ಲಿ ಅದರ ಹಾಗೇ ಟೊಮ್ಯಾಟೋ ಸಾಸಲ್ಲಿ ಮುಳುಗಿ ತನ್ನ ನೆತ್ತಿಯ ಮೇಲೂ ಮತ್ತಷ್ಟು ಚೀಸ್ ತುರಿ ಪೇರಿಸಿಕೊಂಡಿದ್ದ ಕರ್ಗಗೆ ಸುಟ್ಟ ದೊಡ್ಡ ಗಾತ್ರದ ಬಜ್ಜಿಬದನೆಕಾಯಿಯ ಇನ್ನೊಂದು ಚಿಕ್ಕ ಗುಡ್ಡೆ ಇದ್ದ ಎರಡು ದೊಡ್ಡ ಆಳವಾದ ಪಿಂಗಾಣಿ ತಟ್ಟೆಗಳನ್ನು ಮುಂದೆ ತಂದಿಟ್ಟಳು. ಜೊತೆಗೆ ಒಂದು ಅಲಂಕಾರಿಕ ಬಿದಿರಿನ ಚಿಕ್ಕ ಬುಟ್ಟಿಯಲ್ಲಿ ಗಾರ್ಲಿಕ್ ಬ್ರೆಡ್ಡಿನ ತುಂಡುಗಳು ಮತ್ತು ಸಾಲ್ಟೆಡ್ ಬಟರಿನ ಚಿಕ್ಕ ಪ್ಯಾಕೆಟ್ಟುಗಳು, ಮುದ್ದಾಗಿರೋ ಬಟ್ಟಲುಗಳಲ್ಲಿ ಇನ್ನಷ್ಟು ಚೀಸ್ ತುರಿ, ಚೀಸ್ ಪುಡಿ, ಇನ್ನೊಂದು ವಿಧದ ಟೊಮ್ಯಾಟೋ ಕೆಚಪ್ ಅವುಗಳನ್ನು ತಂದು ಅದರೆದುರು ಜೋಡಿಸಿದಳು. ಅಷ್ಟೇ ಅಲ್ಲದೇ ಕಿಚ್ಚುಖಾರದ ಅಚ್ಚಕೆಂಪಿನ ಮೆಣಸಿನಕಾಯಿಯ ನೀರುನೀರಾಗಿರೋ ರಸದ ಟಬ್ಯಾಸ್ಕೋ ಸಾಸಿನ ಒಂದು ಸೀಸೆ ಬೇರೆ ಅವುಗಳ ಮಧ್ಯದಲ್ಲಿ ರಾರಾಜಿಸುತ್ತಿತ್ತು. ಅವೆಲ್ಲವನ್ನು ನೋಡೇ ಕಮಲಮ್ಮನಿಗೆ ನಖಶಿಖಾಂತ ಉರಿದುಹೋಯ್ತು.

ತಾಯಿಯ ಹುಬ್ಬುಗಂಟು ನೋಡಿ ಅನಿರುದ್ಧ ಗಾಬರಿಯಿಂದ– 'ಯಾಕಮ್ಮಾ, ಏನಾಯ್ತು? ಇಷ್ಟೊತ್ತಲ್ಲಿ ಮೊದಲೇ ಬುಕ್ ಮಾಡದಿದ್ರೂ ಇಂಥಾ ಒಳ್ಳೇ ಕಡೆ ಟೇಬಲ್ ಸಿಕ್ಕಿದ್ದೇ ಹೆಚ್ಚು. ನೂಡಲ್ಸ್ ಬೇಡ ಅಂದ್ರೆ ಹೋಗಲಿ ಆಲೂಗೆಡ್ಡೆಯ ಗ್ನೋಕಿ (Gnocchi)ನಾದ್ರೂ ತಿಂತೀಯಾ? ಅದೂ ಇಲ್ಲಿಯ ಸ್ಪೆಷಾಲಿಟಿನೇ. ಇಲ್ಲಿಯ ಹಾಗೆ ಹದವಾಗಿ ಬರೀ ಪುಟಾಣಿ ಆಲೂಗೆಡ್ಡೆಗಳನ್ನ ಬೇಯಿಸಿ, ಅವು ಒಡೆಯದ ಹಾಗೆ ಟೊಮ್ಯಾಟೋ ಸಾಸಿನ ಗ್ರೇವಿಯಲ್ಲಿ ಹಾಕಿ ಕೊಡಕ್ಕೆ ಎಲ್ಲಾ ಊರಿನವರಿಗೂ ಬರಲ್ಲ. ಬೇಕಾದ್ರೆ ಬೆಳ್ಳಳ್ಳಿ ಹಾಕಬೇಡಿ ಅಂತ ಹೇಳಿದರಾಯ್ತು' – ಅಂತಂದ.

'ಆನಿ, ನಿಂಗೆ ಅಷ್ಟು ಗೊತ್ತಿಲ್ವಾ ನನಗೆ ಈ ಪಾಸ್ತಾಗೀಸ್ತಾಗಳೆಲ್ಲಾ ಕಂಡರಾಗಲ್ಲಾಂತ? ಇಡ್ಲಿ–ಸಾಂಬಾರ್ ಬಿಟ್ಟು ನನಗಿನ್ನೇನೂ ಬೇಡ. ಅದನ್ನ ಕೊಡಸ್ತೀನಿ ಅಂತ ಅಂದುಬಿಟ್ಟು ಈಗ ನೋಡಿದರೆ ಧಂಡಿಯಾಗಿ ಬೆಳ್ಳುಳ್ಳಿ ನಾತದ ಜೊತೆಗೆ ಇನ್ನೂ ಏನೇನೋ ಅಡ್ಡ ವಾಸನೆ ಬಡೀತಿರೋ ಈ ಅಧ್ವಾನಾನ ತರಿಸಿದ್ದೀಯಾ'– ಅಂತ ಚಿಕ್ಕದಾಗಿ ಗುಡುಗಿದರು ಕಮಲಮ್ಮ. ಕಕ್ಕಾಬಿಕ್ಕಿಯಾದ ಮಗ–'ಅಮ್ಮಾ ಕಮಾನ್. ಸ್ವಲ್ಪ ಮೆತ್ತಗೆ ಮಾತಾಡು. ಇಷ್ಟೊತ್ತಲ್ಲಿ ಅದೂ ಇಂಥಾ ಕಡೆ ನಿಂಗೆ ಇಡ್ಲಿ ಕೊಡಸ್ತೀನಿ ಅಂತ ಎಲ್ಲಿ ಹೇಳಿದೆ! ನಾಳೆಯಿಂದ ಇಲ್ಲಿರೋವರೆಗೂ ದಿನಾ ನಿನ್ನನ್ನ ಇಂಡಿಯನ್ ರೆಸ್ಟುರಾಂಟುಗಳಿಗೆ ಕರೆದುಕೊಂಡುಹೋಗ್ತೀನಿ ಬಿಡು' – ಅಂತ ಒಂದೂ ಅರ್ಥವಾಗದೇ ತಲೆ ಕೆರಕೊಂಡ.

'ತಣ್ಣಗಿರೋ ಗೊಜ್ಜವಲಕ್ಕಿ ಬೇಡ ಅಂದ ನೀನು ಇನ್ನೇನು ಹೇಳಿದೆ ಜ್ಞಾಪಿಸಿಕೋ. ಈಸ್ಟ್ ಕೋಸ್ಟಲ್ಲಿ ರಾತ್ರಿಂದರಾತ್ರಿ ಇಡ್ಲಿ ಸಿಗೋ ಚೈನ್ ರೆಸ್ಟುರಾಂಟುಗಳಿರತ್ತವೇಂತ ಅಂದಿದ್ದನ್ನ ಇಷ್ಟು ಬೇಗ ಮರೆತರೆ ಹೇಗೆ?' – ಅಂತ ಹಸಿದಿದ್ದ ಕಮಲಮ್ಮ ರೇಗಿದರು. ಅನಿರುದ್ಧನಿಗೆ ಇದ್ದಕ್ಕಿದ್ದಂತೆ ಸಂದರ್ಭದ ಅರಿವಾಗಿ ಅಳಬೇಕೋ ನಗಬೇಕೋ ತಿಳಿಯಲಿಲ್ಲ. ಅಂತೂ ಎದುರಿಗಿದ್ದ ಆರ್ಡರನ್ನು ತರಿಸಿದ್ದ ತಪ್ಪಿಗೆ ಅನಿಯೇ ಬೇಗ ಬೇಗ ತನ್ನ ಶಕ್ತ್ಯಾನುಸಾರ

ಗದುಕಿಕೊಳ್ಳಬೇಕಾಯ್ತು. ಕಮಲಮ್ಮನವರು ಅನಿ ಎಲ್ಲವನ್ನೂ ತಿಂಡಿ ಮುಗಿಸುವಷ್ಟು ಹೊತ್ತೂ ಕಣ್ಣು ತೆರೆಯದೇ ನಿದ್ದೆಬಂದಂತೆ ನಟಿಸಿದರು.

ಮೂವತ್ತು ನಿಮಿಷದಷ್ಟು ದೂರವಿದ್ದ ಅವರು ತಂಗಬೇಕಿದ್ದ ಹೋಟೇಲಿಗೆ ಹೋಗುವವರೆಗೂ ಅನಿರುದ್ಧನಿಗೆ ಆ ಹೊತ್ತಲ್ಲಿ ಸಹಸ್ರನಾಮಾರ್ಚನೆ ಅವತ್ತು. ಅಲ್ಲಿಗೆ ತಲುಪುವ ಮೊದಲು, ಇಪ್ಪತ್ತನಾಲ್ಕು ಘಂಟೆಯೂ ತೆಗೆದಿರುವ ವಾಲ್ ಮಾರ್ಟ್‌ಗೆ ಹೋಗಿ, ಮುಂಚೆ ಒಂದಿಷ್ಟು ಬಾಳೆಹಣ್ಣು, ಸೇಬು, ದ್ರಾಕ್ಷಿಗಳನ್ನ ಕೊಂಡುಕೊಂಡು, ಹಾಗೇ ಸ್ಟಾರ್ ಬಕ್ಸ್‌ನಲ್ಲಿ ಅವರಿಗೆ ಬಿಸಿಯಾದ ಹಾಟ್ ಚಾಕಲೇಟ್ ವಿತ್ ಕ್ರೀಮ್ ಟಾಪಿಂಗ್ ಕೊಡಿಸಿದ ಮೇಲಷ್ಟೇ ಇಬ್ಬರಿಗೂ ನೆಮ್ಮದಿ.

ವಾಪಸ್ ಹೋದಮೇಲೆ ಅನಿರುದ್ಧ, ದೊಡ್ಡಕ್ಕ ನಮಿತಾ ಜೊತೆಯಲ್ಲಿ ಮುಂದಿನ ಆಫೀಸ್ ರೂಮಲ್ಲಿ ಕೂತ್ಕೊಂಡು ಆಸ್ಟ್ರೇಲಿಯಾದಲ್ಲಿದ್ದ ಕಿರಿಯಕ್ಕ ವಿನುತಾಳನ್ನೂ ವಾಟ್ಸಾಪ್ group chatಗೆ ಕರೆದ. ಅವರಮ್ಮನಿಗೆ ಕೇಳಿಸದಂತೆ ಅದ್ಹೇಗೆ ಇಟಲಿ ಅನ್ನೋದು ತೀರಾ ಇಡ್ಲಿ ಅನ್ನೋತರ ಕೇಳಿಸಿರಕ್ಕೆ ಸಾಧ್ಯ ಅಂತ ಅಕ್ಕಂದಿರ ಜೊತೆ ಸಮಾಲೋಚಿಸಿದ. ಎಲ್ಲವನ್ನೂ ಕೇಳಿಸಿಕೊಂಡ ವಿನುತಾ ಕೊನೆಗೆ ಅಂದಳು – 'ಹೋಗೋಲೋ ನೀನೊಳ್ಳೇ! ಎಲ್ಲೋ ನೀನು ಅಮೆರಿಕನ್ accentನಲ್ಲಿ ಮಾತಾಡಿರಬೇಕು. ಅದು, ಮೊದಲೇ ಸುಸ್ತಾದ ಅಮ್ಮನಿಗೆ ಇಟಲಿ ಹೋಗಿ ಇಡ್ಲಿ ಅಂತ ಕೇಳಿಸಿರಬೇಕು ಅಷ್ಟೇ. ನಿದ್ದೆಗಣ್ಣಾಗಿತ್ತು ಅಂತ ಬೇರೆ ಹೇಳ್ತೀಯ. ನನಗೂ ಅಲ್ಲಿ ಬಂದಾಗ ಅಲ್ಲಿ ಅವರುಗಳು ಓಕೇ ಅನ್ನೋದು ಒಗೇ, ಹೊಗೇ ಅಂತಂದ ಹಾಗೆಲ್ಲಾ ಕೇಳಿಸೋದು. ಹಾಗೇ ಇದೂ ಆಗಿರಬೇಕು ಕಣೋ ಅಮ್ಮಂಗೆ'–ಅಂತಂದ್ಳು. ನಮಿತಾ 'ಹೌದು ಕಣೋ. ನನಗೂ ಇಲ್ಲಿಗೆ ಬಂದ ಹೊಸದರಲ್ಲಿ ನನ್ನ ಗೈಡು ಜೊನಾಥನ್ ಅವನ ಅಮೆರಿಕನ್ accentನಲ್ಲಿ ವಾಟರ್ ಅಂದ್ರೆ ವಾಡರ್ ಅಂತ, ಬ್ಯೂಟಿಫುಲ್ ಅಂದ್ರೆ ಬ್ಯೂಡಿಫುಲ್ ಅಂತ, Saturday ಅಂದ್ರೆ Sadurday ಅಂತ ಅಂದಹಾಗೆ ಕೇಳಿಸೋದು! ಸೋ ಅಮ್ಮಂಗಾಗಿರೋದೂ ಅದೇ. ನೀನೂ ಅರ್ಥ ಮಾಡ್ಕೋಬೇಕಿತ್ತಪ್ಪಾ. ಅದೂ ಅಲ್ಲದೇ, ಅಲ್ವೋ ಹೋಗೀಹೋಗೀ ಅವಳಿಗೆ ಪಾಸ್ತಾನೇ ಕೊಡಿಸೋದೂ?' – ಅಂತಂದ್ಳು. 'ಏ ಹೋಗ್ರೇ. ನಂಗೇನು ಗೊತ್ತು ಪಾಸ್ತಾ ಕಂಡರೆ ತೀರಾ ಹಾಗಾಡ್ತಾಳೇ ಅಂತ? ಮಾನ ತೆಗೆದ್ಬಿಟ್ಳು' – ಅಂತ ನಕ್ಕ ಅನಿರುದ್ಧ.

ಅಷ್ಟು ಹೊತ್ತಿಗೆ ಸಾಕ್ಷಾತ್ ಕಮಲಮ್ಮನವರೇ ಊರಿಂದ ತಂದಿದ್ದರಲ್ಲಿ ಉಳಿದಿದ್ದ ನಾಲ್ಕು ಕೋಡ್ಬಳೆ, ಕಾಫಿ ಕಪ್ಪುಗಳಿದ್ದ ಟ್ರೇ ಹಿಡ್ಕೊಂಡು ಬಂದು ಎಲ್ಲರ ಮುಂದೂ ಹಿಡಿದು – 'ಲೋ ಅನೀ, ಸುಮ್ಮನೆ ಏನೇನೋ ಹರಟೆ ಹೊಡೆದಿದ್ದು ಸಾಕು. ಅವತ್ತು ಇಡ್ಲಿ ಕೊಡಸ್ತೀನೀ ಬಾ ಅಂತ ಬೊಗಳೆ ಬಿಟ್ಟು ಎಂಥದ್ದೋ ಗಬ್ಬು ಕೊಡಿಸಿ, ಎಂಥಾ ರಾದ್ಧಾಂತ ಮಾಡಿದೇಂತನ್ನೋದನ್ನೂ ನಿನ್ನ ಅಕ್ಕಂದಿರಿಗೆ ಸ್ವಲ್ಪ ಹೇಳು, ಇಲ್ಲಿ ಕೇಳ್ರೇ'– ಅಂತ ಮಗನಿಗೆ ಆರ್ಡರ್ ಮಾಡಿದರು. ಮಕ್ಕಳು ಮೂವರೂ ಮುಖ ಮುಖ ನೋಡ್ಕೊಂಡರು. ■

ಚಾರಣ ಪ್ರಸಂಗ

ಇಬ್ಬರು ಗೆಳೆಯರು ಬೆಟ್ಟ ಹತ್ತುತ್ತಿದ್ದಾಗ ಒಬ್ಬ ಒಂದು ಆಳವಾದ ಕಂದರದಲ್ಲಿ ಜಾರಿ ಬಿದ್ದ. ಮೇಲಿದ್ದವ, ಕಂದರದ ಬಾಯಲ್ಲಿ ನಿಂತು, "ಏಟು ಬಿದ್ದಿದೆಯೇ?" ಅಂತ ಕಾತರದಿಂದ ಕೇಳಿದ. "ಇಲ್ಲ" ಅಂತ ಉತ್ತರ ಬಂತು. "ಅದು ಹೇಗೆ ಸಾಧ್ಯ, ಇಷ್ಟು ಎತ್ತರದಿಂದ ಬಿದ್ದಿದೀಯಾ?" ಅಂತ ಗೆಳೆಯ ಕೇಳಿದ. "ಇನ್ನೂ ಬೀಳ್ತಾ.....ನೇ ಇದ್ದೀನಿ" ಅಂದ್ಬಿಡೋದೇ !!!

ಸಂಧ್ಯ ಸಾಂಗ್ಲೀಕರ್ (ಒಂದು ತಮಾಷೆ ಪ್ರಸಂಗ)

ಪಾಲಹಳ್ಳಿ ವಿಶ್ವನಾಥ್

ಅಪರಂಜಿಯಲ್ಲಿ ನೀವು ಇದನ್ನು ಓದುತ್ತಿರುವುದರಿಂದ ತಮಾಷೆ ಎಂದರೆ ಹಾಸ್ಯ ಎಂದು ಭಾವಿಸುವುದು ಸ್ವಾಭಾವಿಕವೇ. ಆದರೆ ಈ ತಮಾಷೆಯೇ ಬೇರೆ. ಇದು ನಮ್ಮ ನೆರೆ ರಾಜ್ಯ ಮಹಾರಾಷ್ಟ್ರದ ಖ್ಯಾತ ಜನಪ್ರಿಯ ನೃತ್ಯ ಪರಂಪರೆ, ಜಾನಪದ ಶೈಲಿಯ ಸಂಗೀತ ನೃತ್ಯ ನಾಟಕಗಳು. ಇನ್ನೂ ಆಧುನಿಕತೆಗೆ ಮಾರುಹೋಗದ ಸಣ್ಣ ಪಟ್ಟ ಊರುಗಳಲ್ಲಿ ಹೆಚ್ಚು ಜನಪ್ರಿಯ. ಇದೆಲ್ಲಾ ನನಗೆ ಹೇಗೆ ಗೊತ್ತು ಎಂದು ನೀವು ಕೇಳಬಹುದು. ಓದುಗರಾಗಿ ನಿಮಗೆ ಆ ಅಧಿಕಾರವಿದೆ. ಇದೆಲ್ಲಾ ನನಗೆ ಜೀವ್ಸ್ ಹೇಳಿದ್ದು. ಜೀವ್ಸ್ ಎಂದ ಮೇಲೆ ನಾನು ಬರ್ಟಿ /ಭರತ್ ಎಂದು ಹೇಳಬೇಕಿಲ್ಲ, ಅಲ್ಲವೇ!.

ಒಂದು ದಿನ ಬೆಳಿಗ್ಗೆ ಯಾರೋ ಮನೆಯ ಬಾಗಿಲನ್ನು ಜೋರಾಗಿ ಬಡಿಯುತಿದ್ದರು. ಬೆಲ್ ಇರುವಾಗ ಈ ಹಳೆಯ ಅಭ್ಯಾಸ ಏತಕ್ಕೆ ಎಂದು ಬಯ್ದುಕೊಂಡೆ. ಏನಾಗಿದೆ ಜೀವ್ಸ್ ಎಂದು ಕೂಗಿದೆ. ಹೋಗ್ತಾ ಇದ್ದೀನೀ ಸಾರ್ ಎಂದು ಹೋಗಿ ಬಾಗಿಲ ತೆಗೆದು "ಓ ! ಬನ್ನೀ ಮೇಡಂ ! .. ಸಾರ್ ! ದುರ್ಗಾ ದೇವಿಯವರು". ಅವನು ಮುಗಿಸುವ ಮೊದಲೇ ದೂರದಿಂದಲೇ "ಹನ್ನೊಂದಾಯಿತು ! ಇನ್ನೂ ಮಲಗಿದ್ದೀಯ ಬರ್ಟಿ ! ಎದ್ದು ಮುಖ ತೊಳೆದುಕೊಂಡು ಬಾ" ಎಂದರು ನಮ್ಮ ಚಿಕ್ಕಮ್ಮ ಆಗಾಥ. ಹೌದು, ಅವರೇ ದುರ್ಗಾದೇವಿ. ಚಿಕ್ಕಂದಿನಲ್ಲಿ ಅಗಾಥ ಕ್ರಿಸ್ಟಿ ಪತ್ತೇದಾರಿ ಕಥೆಗಳನ್ನು ಓದಿ ಓದಿ ಎಲ್ಲರೂ ಅವರನ್ನು ಅಗಾಥ ಎಂದೇ ಕರೆಯುತ್ತಿದ್ದರು. ಮಹಾಲಕ್ಷ್ಮಿ ಪಾಟೀಲ್ ಹಿಂದೆ ಹೋಗಿದ್ದ ಲವಕುಶರ ತಾಯಿ ! ದುರ್ಗ ಎಂದರೆ ಕಠಿಣ ಅಂತಾನೂ ಅರ್ಥ ಇದೆಯಂತೆ! ಆಕೆ ನಿಜವಾಗಿಯೂ ಖಠಿಣ!

"ಬರ್ಟಿ, ನಿನ್ನೆ ಸಂಜೆ, ರಾತ್ರಿ ಎಲ್ಲ ಎಷ್ಟು ಫೋನ್ ಮಾಡಿದೆ. ಎಲ್ಲಿ ಹಾಳಾಗಿ ಹೋಗಿದ್ದೆ? ಗೊತ್ತು ಬಿಡು ಯಾವುದೋ ಕ್ಲಬ್ಬು"

"ಇಷ್ಟು ಗಡಿಬಿಡಿ ಏಕೆ ? ಏನೂಂತ ಕೇಳಬಹುದೇ?"

"ನಮ್ಮ ಅಗಸ್ತ್ಯ ಮುಂಬಯಿನಲ್ಲಿದ್ದಾನಲ್ಲವೇ ?"

"ಹೌದು ಮೇಡಂ ! ಇನ್ನೂ ವಿಂಧ್ಯ ದಾಟಿಲ್ಲ"

"ಜೀವ್ಸ್ ! ಹಾಸ್ಯ ಬಿಡು !"

"ಗಸ್ಸಿ ಲಾಯರ್ ಓದತೀನಿ ಅಂತ ಹೋದನಲ್ಲ"

"ಏನು ಲಾಯರೋ ಏನೋ ! ನಿಮ್ಮ ಅತ್ತೆ ಜಯಶ್ರೀ ಕಣ್ಣೀರು ಇಡತಾ ಇದಾಳೆ. ಗಜ್ಜೂ ಮಂಬಯಿಯಲ್ಲಿ ಯಾವುದೋ ಕುಣಿಯೋ ಹುಡುಗಿ ಸುತ್ತ ತಿರುಗುತ್ತಿದ್ದಾನಂತೆ!

"ಕುಣಿಯೋ ಹುಡುಗಿ?"

"ಬರ್ಟಿ, ಸುಮ್ಮನೆ ನಾನು ಹೇಳಿದ್ದೇ ವಾಪಸ್ಸು ಹೇಳಬೇಡ... ಡ್ಯಾನ್ಸಿಂಗ್ ಗರ್ಲ್! ನಮ್ಮ ರಾವ್ ಬಹದ್ದೂರ್ ಜಗನ್ನಾಥ ಶರ್ಮರ ಮನೆತನದ ಮರ್ಯಾದೆ ಹೋಗ್ತಾ ಇದೆ."

(ನಮ್ಮ ಮನೇಲಿ ಮೊದಲಿಂದಲೂ ಈ ಮರ್ಯಾದೆ ಎನ್ನುವ ವಸ್ತು ಬಹಳ ಮುಖ್ಯ. ಈ ಕೆಲಸ ಮಾಡಬೇಡ, ಆ ಕೆಲಸ ಮಾಡಬೇಡ. ನಮ್ಮ ಮರ್ಯಾದೆ

ಹೋಗತ್ತೆ. ಆದರೆ ಅದು ಏನು ಅಂತ ನನಗೆ ಇನ್ನೂ ಗೊತ್ತಾಗಿಲ್ಲ)

"ನಿಮ್ಮ ಭುಜಂಗ ಮಾಮ ಹಿಂದೆ ಏನು ಮಾಡಿದ್ದನೋ ಅದನ್ನೇ ಮಗ ಗಸ್ಸಿ ಈಗ ಮಾಡ್ತಾ ಇದಾನೆ.. ಸರಿ, ಕೇಳಿಸಿಕೊ. ಈವತ್ತೆಲ್ಲಾ ನಾಳೆ ನಿನಗೆ ಗೊತ್ತೇ ಆಗುತ್ತೆ.

ಇದು ನಮ್ಮ ಕುಟುಂಬದ ಒಂದು ಗುಟ್ಟು ! ಹಿರಿಯರಿಗೆಲ್ಲಾ ಗೊತ್ತಿರುವ ಗುಟ್ಟು. ಒಂದು ಕಾಲದಲ್ಲಿ, ಅಂದರೆ ಸುಮಾರು 30 ವರ್ಷಗಳ ಹಿಂದೆ, ಕೊಲ್ಹಾಪುರದಲ್ಲಿ (ಅಲ್ಲೇ ನಿಂತಿದ್ದ ಜೀವ್ಸ್‌ ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ಸಾರ್" ಎಂದು ಕಿವಿಯಲ್ಲಿ ಪಿಸುಗುಟ್ಟಿದ) ಸಂಧ್ಯಾ ಸಾಂಗ್ಲೀಕರ್ ಎಂಬ ಖ್ಯಾತ ತಮಾಷೆ ಕಲಾವಿದೆ ಇದ್ದಳು. ಅವಳ ಹಾಡನ್ನು ಕೇಳಲು ಮತ್ತು ನರ್ತಿಸುವುದನ್ನು ನೋಡೋಕೆ ಮಹಾರಾಷ್ಟ್ರದ ಎಲ್ಲ ಕಡೆಯಿಂದಲೂ ಜನ ಕೊಲ್ಹಾಪುರಕೆ ಹೋಗುತ್ತಿದ್ದರಂತೆ, ಅದೇ ಸಮಯದಲ್ಲಿ ನಮ್ಮ ಕುಟುಂಬದ ಯುವಕನೊಬ್ಬ ಕೆಲಸದ ಮೇಲೆ ಊರೂರು ಸುತ್ತುತ್ತಿದ್ದ. ಹಾಗೇ ಒಂದು ಬಾರಿ ಕೊಲ್ಹಾಪುರಕ್ಕೂ ಹೋದನಂತೆ . ಅಲ್ಲಿ ಒಂದು ಸಂಜೆ ತಮಾಷೆ ಕಾರ್ಯಕ್ರಮ ನೋಡಲು ಹೋದಾಗ ಆ ಸಂಧ್ಯ ಸಾಂಗ್ಲೀಕರ್ ಕಾಣಿಸಿ ಮೊದಲನೇ ನೋಟದಲ್ಲೇ ಪ್ರೇಮ ಹುಟ್ಟಿತಂತೆ. ಹಾಗಾಗಿ ಅವನು ಕೊಲ್ಹಾಪುರಕ್ಕೆ ಬಹಳ ಹೋಗಿ ಬರುತ್ತಿದ್ದು ಕಡೆಗೆ ಇಬ್ಬರೂ ಗುಟ್ಟಾಗಿ ಮದುವೆಯಾದರಂತೆ. ನಮ್ಮ ಮನೆತನದ ಮರ್ಯಾದೆ ಉಳಿಸಿಕೊಳ್ಳಲು ನಮ್ಮ ಕುಟುಂಬದವರು ಅವಳಿಗೆ ಮತ್ತು ನಿಮ್ಮ ಮಾವ ಭುಜಂಗರಾವ್ ರಿಗೆ ಶಾಸ್ತ್ರೋಕ್ತವಾಗಿ ಮದುವೆ ಮಾಡಿ ಅವಳಿಗೆ ಜಯಶ್ರೀ ಎಂದು ಹೊಸ ಹೆಸರಿಟ್ಟರು . ಇದು ನಿಮ್ಮ ಜಯಶ್ರೀ ಅತ್ತೆಯ ಪೂರ್ವಾಶ್ರಮದ ಚರಿತ್ರೆ."

"ಜಯಶ್ರೀ ಅತ್ತೆ ಆಶ್ರಮದಲ್ಲಿ ಇದ್ದರಾ ಚಿಕ್ಕಮ್ಮ?" "ಅಯ್ಯೋ ಜೀವ್ಸ್, ನೀನು ಇವನಿಗೆ ಬಿಡಿಸಿ ಹೇಳಪ್ಪ ! ಆಗಿನಿಂದ ನಾನು ದಿನ ಅವಳ ಜೊತೆ ಕುಳಿತುಕೊಂಡು ಈ ಕುಟುಂಬದ ಭವ್ಯ ಚರಿತ್ರೆ, ಹಿರಿಮೆ, ರೀತಿ ರಿವಾಜುಗಳ ಬಗ್ಗೆ ಭಾಷಣ ಕೊಡುತ್ತಿದ್ದು ಅವಳನ್ನು ಬಹಳ ತಿದ್ದಿದೆ. ಎರಡು ತಿಂಗಳಲ್ಲೇ ಅವಳು ಪೂರ್ತಿ ಬದಲಾದಳು ಈಗ ಅವಳಲ್ಲಿ ಹಿಂದಿನ ಸಂಧ್ಯ ಸಾಂಗ್ಲೀಕರ್ ಸ್ವಲ್ಪವೂ ಉಳಿದಿಲ್ಲ. ನಿಮ್ಮ ಸೋದರಮಾವ ಭುಜಂಗ ಇದ್ದಿದ್ದರೆ ಗಸ್ಸಿಗೆ ಬುದ್ಧಿ ಹೇಳ್ತಾ ಇದ್ದನೋ ಏನೋ ! ಅವನೂ ಹೊರಟುಹೋದ. ಈಗ ನಾನೊಬ್ಬಳೇ ! ಜೀವ್ಸ್ ! ನೀನೇ ಹೇಳು ಏನು ಮಾಡಬೇಕು ಅಂತ"

"ನಿಮ್ಮ ಮನೆತನದಿಂದ ಯಾರಾದರೂ ಈಗಲೇ ಮುಂಬಯಿಗೆ ಹೋಗಿ ಅಗಸ್ತ್ಯ ಅವರನ್ನು ವಾಪಸ್ಸುಕರೆದುಕೊಂಡು ಬರಬೇಕು"

"ನನಗೆ ಆಗೋಲ್ಲ ಜೀವ್ಸ್. ಗಸ್ಸಿ ತಾಯಿ ಜಯಶ್ರೀಗೂ ಇದೆಲ್ಲಾ ಆಗೋಲ್ಲ."

"ಇಲ್ಲ ಮೇಡಂ. ಅವರು ಬೇಡ. ಭರತ್ ಅವರು ಹೋಗಬಹುದಲ್ಲವೆ ? ನಾನೂ

ಜೀವ್ಸ್ ಅನ್ನು ದುರುಗುಟ್ಟಿಕೊಂಡು ನೋಡಿದೆ ನನಗೆ ಟೈಮ್ ಇಲ್ಲ.."

"ನಿನ್ನ ಹತ್ತಿರದ ಕಸಿನ್ ಗೆ ಅಷ್ಟೂ ಮಾಡೋಕೆ ಆಗೋಲ್ವ, ಅದಲ್ಲದೆ ನಿನಗ್ಯಾಕೆ ಟೈಮ್ ಇಲ್ಲ ? ಕೆಲಸ ಇಲ್ಲ. ಕಾರ್ಯ ಇಲ್ಲ. ಈಗಲೇ ಹೋಗು. ಜೀವ್ಸ್ ನೀನೂ ಬರ್ಟಿ ಜೊತೆ ಹೋಗಬೇಕು ನಿಮಗಿಬ್ಬರಿಗೂ ಟಿಕೆಟ್ ತೆಗೆದುಕೊಂಡು ಬಾ"

"ಆಗಲಿ ಮೇಡಂ 'ಎಂದ ಜೀವ್ಸ್.' ಮೇಡಮ್ ! ಆ ಹುಡುಗಿಯ ಹೆಸರು ಗೊತ್ತೇ"

"ಹೌದು ! ಶಾಲಿನಿ ! ಶಾಲಿನಿ ಪಾಟಂಕರ್ !.. ಜೀವ್ಸ್ ! ಬೇಗ ಮುಂಬಯಿಗೆ ಹೋಗಿ ಇಬ್ಬರೂ !

ಮುಂಬಯಿಗೆ ಹೋಗಿ ಒಂದು ಹೊಟೇಲಿನಲ್ಲಿ ಇಳಿದುಕೊಂಡು ಅಗಸ್ತ್ಯ ಕಾಲೇಜಿಗೆ ಹೋಗಿ ವಿಚಾರಿಸಿದೆವು. ಬಹಳ ದಿನಗಳಿಂದ ಬಂದಿಲ್ಲ ಅಂದರು. ವಿಳಾಸ ಕೇಳಿಕೊಂಡು ಅವನ ಅಪಾರ್ಟ್ಮೆಂಟಿಗೆ ಹೋದೆವು. ಇಲ್ಲಿ ಅಗಸ್ತ್ಯ ಅಂತ ಯಾರೂ ಇಲ್ಲ, ಇರೋದು ಮಿಲಿಂದ ಎನ್ನುವ ಯುವಕ ಅಂದರು. ಏನು ಮಾಡೋದು ಅಂತ ಯೋಚಿಸುತ್ತಿದ್ದಾಗ ಅವನೇ ಬಂದ. "ಏನಾಯಿತೋ ಗಸ್ಸಿ ! ನಿನ್ನ ಹುಡುಕಿ ಹುಡುಕಿ ಸುಸ್ತಾಯಿತು. ಹೆಸರು ಬದಲಾಯಿಸಿ ಕೊಂಡಿದ್ದೀಯಾ ?"

"ಮಿಲಿಂದ ಪಹಾರೆ ! ಹೆಸರು ಚೆನ್ನಾಗಿದೆ ಅಲ್ವ."

"ಅದಿರಲಿ, ನಿನ್ನ ಕತೆ ಏನು?"

"ಹೇಳ್ತೀನಿ ಕೇಳು. ಹೇಗಾಯಿತು ಅಂತ, ನನಗೆ ಸಂಗೀತ, ನಾಟಕ ಅಂದರೆ ಇಷ್ಟ ಅಂತ ನಿನಗೆ ಗೊತ್ತಲ್ಲವಾ! ಆರು ತಿಂಗಳ ಹಿಂದೆ ಒಂದು ದಿನ ದಾದರ್ ಕಡೆ ಹೋಗಿದ್ದೆ. ಅಲ್ಲಿಂದ ಪರೇಲಿಗೆ ಹೋಗುವಾಗ ಒಂದು ಓಣೀಲಿ ಒಂದು ಹಳೆಯ ಮರಾಠಿ ನಾಟ್ಯ ಮಂದಿರ ಇದೆ. ಒಳಗಿಂದ ಹಾಡುಗಳು ಕೇಳುತ್ತಿದ್ದವು . ಇಷ್ಟವಾಯಿತು, ಒಳಗೆ ಹೋದೆ. ಒಂದು ತಮಾಷೆ ಕಾರ್ಯಕ್ರಮ (ತಮಾಷೆ ಎಂದರೆ ಏನು ಅಂತ ಜೀವ್ಸ್ ಅನ್ನು ಕೇಳು, ಹೇಳ್ತಾನೆ) ನಡೀತಾ ಇತ್ತು. ಒಬ್ಬ ಸುಂದರ ಯುವತಿ ಹಾಡುತ್ತಿದ್ದಳು. ಅಷ್ಟೇ ಸಾಕಾಯಿತು ಬರ್ಟಿ. ಏನು ಹೇಳಲಿ ? ಐ ಯಾಮ ಇನ್ ಲವ್ ಕಣೋ !"

"ಗಸ್ಸಿ ! ನೀನು ನನಗಿಂತ ಚಿಕ್ಕವನು ಕಣೋ !"

"ಆದರೆ ಏನಂತೆ ! ನೀನು ಸೋಮಾರಿ ! ಪ್ರೀತಿಗೂ ಟೈಮ್ ಕೊಡಬೇಕು. ನೀನೋ ಆ ಕ್ಲಬ್ಬು, ಈಕ್ಲಬ್ಬು ಅಂತ ಓಡಾಡ್ತಾ ಇರತೀಯ"

"ನನಗೇ ಹೇಳೋಕೆ ಬಂದುಬಿಟ್ಯಾ? ಅಲ್ಲಿ ಮೈಸೂರಲ್ಲಿ ಒದ್ದಾಡತಾ ಇದ್ದಾರೆ. ನಿಮ್ಮ ಅಮ್ಮ, ಅಗಾಥಾ ಚಿಕ್ಕಮ್ಮ, ಎಲ್ಲಾ ನಮ್ಮ ಗಸ್ಸಿಗೆ ಏನಾಗಿದೆ ಅಂತ ಅಳತಾ ಇದ್ದಾರೆ. ಇಲ್ಲಿ ನೋಡಿದರೆ ನೀನು ಲವ್ ಲವ್ ಅಂತೆ"

"ಐ ಲವ್ ಶಾಲಿನಿ ! ಹೌದು, ಶಾಲಿನಿ ಅವಳ ಹೆಸರು! ಶಾಲಿನಿ ಪಾಟಂಕರ್ ಎಷ್ಟು ಚೆನ್ನಾಗಿದಾಳೆ ಗೊತ್ತ! ಎಷ್ಟು ಚೆನ್ನಾಗಿ ಹಾಡತಾಳೆ ! ಎಲ್ಲದ್ದಕ್ಕಿಂತ ಅವಳ ಹೃದಯ ! ನೀನೆ ನೋಡ್ತೀಯ ! ಈಗ ನಾನೂ ಅವರ ಸಂಗೀತ ನೃತ್ಯ ಎಲ್ಲಾ ಕಲೀತಾ ಇದೀನಿ. ಶಾಲಿನಿಗೆ ಗೊತ್ತಿರುವ ಒಂದು ತರಬೇತಿ ಶಾಲೆಗೆ ಸೇರಿದ್ದೀನಿ. ಅಗಸ್ತ್ಯ ಶರ್ಮ ಹೆಸರು ಇದಕ್ಕೆಲ್ಲಾ ಸರಿ ಹೋಗೋಲ್ಲ ಅಂತ ಅವಳೇ ಹೊಸ ಹೆಸರೂ ಆಯ್ಕೆ ಮಾಡಿದಳು. ಮಿಲಿಂದ ಪಹಾರೆ ಆಗಿ ಮೂರು ತಿಂಗಳೂ ಆಯಿತು."

"ನಿನ್ನ ಲಾಯರು ಓದು?"

"ಮುಂದೆ ನೋಡಿಕೊಳ್ಳೋಣ. ನಾಳೆ ನಿನಗೆ ಶಾಲಿನಿನ ಗುರುತು ಮಾಡಿಸತೀನಿ. ಜೀವ್ಸ್,ನೀನೂ ಬರಬೇಕು"

ಮಾರನೆಯ ದಿನ ಅವಳನ್ನು ನಮ್ಮ ಹೋಟೆಲಿಗೆ ಕರೆದುಕೊಂಡುಬಂದು. ಗುರುತು ಮಾಡಿಸಿಕೊಟ್ಟ. ಹೌದು, ಅಗಸ್ತ್ಯ ಹೇಳಿದ ಹಾಗೆಯೇ ಇದ್ದಳು. ಸ್ನೇಹಮಯಿ ಕೂಡ. ಅವರಿಬ್ಬರ ಜೋಡಿ ಏನೋ ಚೆನ್ನಾಗಿತ್ತು. ಜೀವ್ಸ್ ಕೂಡ ತನ್ನ ಮೆಚ್ಚುಗೆ ಸೂಸಿದ 'ಅಗಸ್ತ್ಯ ರಾಯರು ಬಹಳ ಒಳ್ಳೆ ಆಯ್ಕೆ ಮಾಡಿದ್ದಾರೆ ಸಾರ್'. ಇವರನ್ನು ಬಿಡಿಸಬೇಕಾ ಅಂತ ಬೇಜಾರಾಯಿತು... ಈಗ ಏನು ಮಾಡೋಣ ಜೀವ್ಸ್ ಎಂದು ಕೇಳಿದೆ. ಇನ್ನೂ ಹುಡುಗಿಯ ತಂದೆ ಒಪ್ಪಿಲ್ಲ ಸಾರ್. ಏನೇ ಆಗಲಿ 'ಜಯಶ್ರೀ ಮೇಡಂ ಬರಬೇಕಾಗುತ್ತೆ ಸಾರ್' ಎಂದ. ನಾನು ಜಯಶ್ರೀ ಅತ್ತೆ ಗೆ ಫೋನ್ ಮಾಡಿ ಮುಂಬಯಿಗೆ ಬರಲು ಹೇಳಿ ಅವರು ಬಂದಾಗ ಅವರ ಮುಂದೆ ಅಗಸ್ತ್ಯ ತನ್ನ ಕತೆಯೆಲ್ಲಾ ಹೇಳಿಕೊಂಡ. ಶಾಲಿನಿಯ ನೃತ್ಯವನ್ನೂ ಅಮ್ಮನಿಗೆ ತೋರಿಸಿದ. ಮೊದಲ ಮೊದಲು ಬಹಳ ಬೇಸರದಿಂದ ಇದ್ದ ಜಯಶ್ರೀ ಅತ್ತೆ ನಿಧಾನವಾಗಿ ಕರಗಲಾರಂಭಿಸಿದರು. ಈ ಸಂಬಂಧವನ್ನು ಇಷ್ಟ ಪಟ್ಟರು ಕೂಡ. ಆದರೆ ಶಾಲಿನಿ ತಂದೆ ಇನ್ನೂ ಒಪ್ಪಿಲ್ಲ ಎಂದು ಜೀವ್ಸ್ ಹೆಚ್ಚರಿಸಿದ.

ಕೇಶವರಾವ್ ಪಾಟಂಕರ ದಾದರಿನ ಹಿಂದು ಕಾಲೋನಿಯ ಹಳೆಯ ಆದರೆ ಭವ್ಯತೆಯನ್ನು ಉಳಿಸಿಕೊಂಡಿದ್ದ ಕಟ್ಟಡವೊಂದರಲ್ಲಿ ವಾಸವಾಗಿದ್ದರು. ಮನೆಯ ಮುಂದೆ ಮರಾಠಿಯಲ್ಲಿ 'ತರುಷಾ ಶಿಕ್ಷಣ ಶಾಲೆ' ಎಂದು ಬರೆದಿತ್ತು. ಆ ಪರಂಪರೆಯ ಒಬ್ಬ ಮೂಲವ್ಯಕ್ತಿ ಎಂದು ಅವರಿಗೆ ಬಹಳ ಗೌರವ ಸಿಗುತ್ತಿತ್ತು. ಶಿಷ್ಯರೂ ಬಹಳ ಬರುತ್ತಿದ್ದರು. ಕಟ್ಟಡದ ಕೆಳಗಿನ ಎರಡು ಅಂತಸ್ತುಗಳಲ್ಲಿ ನಾಟಕಗಳ ತಾಲೀಮು ಮತ್ತು ಸಂಗೀತ ನೃತ್ಯಗಳ ರಿಯಾಜಿಗೆ, ಹಲವಾರು ಕೋಣೆಗಳು ಇದ್ದವು. ವಿವಿಧ ವಾದ್ಯಗಳ ಶಬ್ದಗಳು ಕೇಳಿಬರುತ್ತಿದ್ದವು. ಮೂರನೆಯ ಅಂತಸ್ತು ಯುವಕ ಯುವತಿಯರ ವಸತಿಗೆ ಕೋಣೆಗಳು. ನಾಲ್ಕನೆಯ ಅಂತಸ್ತು ಕೇಶವ ಪಾಟಂಕರರ ವಾಸ. ನಾಲ್ಕು ಮಹಡಿಗಳಿದ್ದರೂ ಲಿಫ್ಟ್ ಇರಲಿಲ್ಲ; ಜಯಶ್ರೀ ಅತ್ತೆಯನ್ನು ಕರೆದುಕೊಂಡು ಜೀವ್ಸ್ ಮತ್ತು ನಾನು ನಾಲ್ಕು ಮಹಡಿ ಹತ್ತಿದೆವು. ಯುವಕನೊಬ್ಬ ಒಳಗೆ ಕರೆದುಕೊಂಡು ಹೋಗಿ ಕೂರಲು ಹೇಳಿ ಹೋದ, ಕೆಲವೇ ನಿಮಿಷಗಳಲ್ಲಿ ಕೇಶವರಾವ್ ಪಾಟಂಕರ ಬಂದರು. ವಯಸ್ಸು ಆಗಿದ್ದರೂ ಅದನ್ನು ತೋರಿಸದ ಉತ್ಸಾಹದ ಮುಖ. ದೊಡ್ಡ ಬಿಳಿಯ ಗಡ್ಡ ! ಜಯಶ್ರೀಯನ್ನು ನೋಡುತ್ತಿದ್ದಂತೆಯೇ

'ಸಂಧ್ಯ ! ಸಂಧ್ಯ ಸಾಂಗ್ಲೀಕರ್ !'

"ಕೇಶವ! ಕೇಶವ ರಾವ್ ಕೊಲ್ಹಾಪುರೆ !"

ಇಬ್ಬರೂ ಕೈ ಕುಲುಕುತ್ತ ಹೋದರು, ನಂತರ ಅಪ್ಪಿಕೊಂಡರು.

'ಎಷ್ಟು ವರ್ಷಗಳು ಆಗಿ ಹೋದವು ಸಂಧ್ಯಾ ! ಆದರೂ ಹಾಗೇ ಇದ್ದೀಯಾ !'

"ಕೇಶವ! ನೀನು ಹಿಂದಿನ ಹಾಗೆಯೇ ಹೊಗಳತಾನೇ ಇರತೀಯ ! ಈಗ ನನಗೆ 60 ವರ್ಷ ! ನೋಡು ಎಷ್ಟು ಬಿಳಿಕೂದಲು !

ಅದಿರಲಿ ಈ ಕೇಶವರಾವ್ ಪಾಟಂಕರ್ ಯಾರು?

"ಸಂಧ್ಯ ! ಅದು ನಾನೇ ! ನೀನು ಬಿಟ್ಟ ನಂತರ ನಿನ್ನ ತರಹ ಹಾಡುವ ಹೆಣ್ಣು ಸಿಗಲೇ ನಮಗೆ. ಮೊದಲಿದ್ದ ಉತ್ಸಾಹ ಇರಲಿಲ್ಲ ನೀನು ಬಿಟ್ಟಮೇಲೆ ಕೊಲ್ಹಾಪುರದಿಂದ ಪುಣೆಗೆ ಹೋದೆವು. ನಂತರ ಮುಂಬಯಿಗೆ ಬಂದೆವು. ಅದೃಷ್ಟ ಬದಲಾಗಲಿ ಅಂತ ನಾನೂ ಹೆಸರು ಬದಲಾಯಿಸಿಕೊಂಡೆ. ಆಗಿನ ಕೇಶವರಾವ್ ಕೊಲ್ಹಾಪುರೆ ಈಗ ಕೇಶವರಾವ್ ಪಾಟಂಕರ್... ಅಂತೂ ಪರಂಪರೆ ಉಳಿಸಲು ಒಂದು ಶಿಕ್ಷಣಾ ಶಾಲೆ ನಡೆಸುತ್ತಿದ್ದೇನೆ. ಆಗ ಈಗ ಒಳ್ಳೆಯವರು ಸಿಗ್ತಾರೆ. ಈಗೀಗ ನನ್ನ ಮಗಳು ಶಾಲಿನಿ ಚೆನ್ನಾಗಿ ಹಾಡುತ್ತಿದ್ದಾಳೆ. ಅಭಿನಯವೂ ಪರವಾಯಿಲ್ಲ."

"ಕೇಶವ, ನಮ್ಮ ಕಂಪನಿ ಬಿಟ್ಟು ಹೋದ ಮೇಲೆ ನನ್ನ ಜೀವನವೇ ಬೇರಯಾಯಿತು. ಗಂಡ, ಮಗ, ಅವರ ಮನೆಯವರು. ಅಲ್ಲಿಯ ಸಂದರ್ಭಕ್ಕೆ ನಾನೂ ಬದಲಾಗಬೇಕಾಯಿತು. ಕಷ್ಟವಾಯಿತು. ಶ್ರೀಮಂತ ಜನ. ಹೇಗೋ ಆಯಿತು ಅನ್ನು. ಹತ್ತು ವರ್ಷಗಳ ಹಿಂದೆ ಇವರೂ ಹೋದರು. ಈಗ ನನ್ನ ಮಗ ಮಾತ್ರ. ಇಲ್ಲೇ ಮುಂಬಯಿಯಲ್ಲಿ ಲಾಯರ್ ಓದುತ್ತಿದ್ದ . ನಿನ್ನ ಶಾಲೆ ಯಲ್ಲಿ ಮಿಲಿಂದ ಪಹಾರೆ ಎನ್ನುವ ಹುಡುಗ ಇದ್ದಾನಲ್ಲವೇ ?"

"ಮಿಲಿಂದ ಪಹಾರೆ? ಮಿಲಿಂದ ಪಹಾರೆ ! ಹೌದು, ಗಮನಿಸಿದ್ದೇನೆ ಉತ್ಸಾಹ ಇದೆ ಆದರೆ ಇನ್ನೂ ಅವನು ಶ್ರಮ ಪಡಬೇಕು ಸಂಧ್ಯ, ನಿನಗೆ ಹೇಗೆ ಗೊತ್ತು ಅವನು?"

ಅವನು ನನ್ನ ಮಗ ಅಗಸ್ತ್ಯ! ತಮಾಷೆಯ ಹುಚ್ಚು ಹಿಡೀತು. ಜೊತೆಗೆ ನಿನ್ನ ಮಗಳ ಹುಚ್ಚು. ಅವಳಿಗೂ ಅವನು ಇಷ್ಟವಾಗಿದ್ದಾನೆ.

"ನನಗೂ ಏನೇನೋ ಅನುಮಾನ ಬರುತ್ತಿತ್ತು. ಆದರೆ ಹುಡುಗ ಇನ್ನೂ.."

"ನೆನೆಪು ಮಾಡಿಕೊ ಕೇಶವರಾವ್. ನಾವೂ ಹಾಗೆಯೇ ಇದ್ದೆವಲ್ಲ."

"ಲಾಯರು ಓದು ಮುಗಿಸಲಿ. ಆಯಿತು, ಈ ಸಂಬಂಧಕ್ಕೆ ನನಗೇನು ಆಕ್ಷೇಪಣೆ ಇಲ್ಲ."

ಅಂತೂ ಈ ಮದುವೆಗೆ, ಚಿಕ್ಕಮ್ಮ ಅಗಾಥ ಬಿಟ್ಟು, ಎಲ್ಲರೂ ಒಪ್ಪಿಗೆ ಕೊಟ್ಟರು. ಸಾಂಗಲಿಯಲ್ಲಿ ಮದುವೆಯೂ ನಡೆಯಿತು...ಮಕ್ಕಳ ಮದುವೆ ಮಾಡಿ ನಂತರ ಸಂಧ್ಯ ಸಾಂಗ್ಲೀಕರ್ ಮತ್ತು ಕೇಶವರಾವ್ ಕೊಲ್ಹಾಪುರೆ (ಹೌದು, ಅವರು ಮತ್ತೆ ಹಳೆಯ ಹೆಸರಿಗೇ ಹೋದರು) ಇಬ್ಬರೂ ತಮಾಷಾ ಪರಂಪರೆ ಉಳಿಸಲು ಊರೂರು ತಿರುಗುತ್ತಿರುತ್ತಾರೆ. ಭಾಷಣಗಳನ್ನು ಕೊಡುತ್ತಿರುತ್ತಾರೆ. ಮೊನೆ ಮೊನ್ನೆ ಅವರಿಬ್ಬರಿಗೂ ಯಾವುದೋ ರಾಷ್ಟ್ರ ಪ್ರಶಸ್ತಿಯೂ ಸಿಕ್ಕಿತು ಕೆಲವು ಬಾರಿ ಅವರ ಜೊತೆ ಶಾಲಿನಿ ಮತ್ತು ಅಗಸ್ತ್ಯ ಸೇರಿಕೊಂಡು ನಾಟಕಗಳನ್ನೂ ಆಡುತ್ತಾರೆ. ಎಲ್ಲರೂ ಸಂತೋಷವಾಗಿದ್ದಾರೆ. ಜೀವ್ಸ್ ಹೇಳೋ ತರಹ ಇನ್ನೇನು ಬೇಕು ಸಾರ್? ಸ್ಫೂರ್ತಿ – 'ಎಕ್ಸ್ಕೆಟಿಂಗ್ ಗಸ್ಸಿ' ಎಂಬ ವುಡ್ ಹೌಸ್ ಕಥೆ–ಮೂಲದ ನ್ಯೂ ಯಾರ್ಕಿನ 'ವಾಡವಿಲ್' ಇಲ್ಲಿ ಮುಂಬಯಿಯ 'ತಮಾಷೆ' ಯಾಗಿದೆ). ■

"ಅಮ್ಮ, ನೋಡು.ಬ್ಯೂಟಿ. ಪಾರ್ಲರ್‌ಗೆ ಹೋಗಿ ಬಂದೆ. ಹೇರ್ ಕಟ್ ಮಾಡಿಸಿದೀನಿ.. ಓ..ಹೌದಾ, ತಾಳು..ನಿನ್ನ ಪರ್ಸ್ ಎಲ್ಲೀ?? ಅಂದ್ರೂ ಅಮ್ಮ..

ಏ..ಅದ್ಯಾಕಮ್ಮ, ನನ್ನ ಹೊಸ ಹೇರ್ ಸ್ಟೈಲ್ ನೋಡು ಮೊದ್ಲು..ಅಂದ್ಲು ಮಗಳು.. ಅಲ್ಲಾ ಕಣೇ, ನಿನ್ನ ಹೇರ್ ಕಟ್ ಜೊತೆ..ನಿನ್ನ ಕೂದಲು ಗಿಡ್ಡ ಆಗೋದ್ರ ಜೊತೆಗೆ..ಪರ್ಸ್ ಎಷ್ಟು ಚಿಕ್ಕ ದಾಯ್ತು ನೋಡ್ಬೇಕು ಅಂದಾಗ ಅಲ್ಲೇ ಇವರ ಮಾತುಕತೆ ಕೇಳಿದ ಅಪ್ಪ, ಅಳಿಯ ಬಿದ್ದೂ ಬಿದ್ದೂ ನಕ್ಕರು. **–ಸುಮನಾ**

ಪ್ರಾಬ್ಲೆಂ ಫಿಕ್ಸ್ ಡಾಟ್ ಕಾಂ

ನಿಮ್ಮ ಜಗಳ ನಮ್ಮ ಜವಾಬ್ದಾರಿ!

ಜಯಶ್ರೀ ದೇಶಪಾಂಡೆ

ಸ್ಕೂಟರಿನಲ್ಲಿರಸ್ತೆ ದಾಟುತ್ತಿದ್ದ ಪರಮೇಶ್ವರ ಸರಕ್ಕನೆ ವಾಹನ ನಿಲ್ಲಿಸಿದ.

"ಯಾಕ್ರೀ ಇಷ್ಟು ಸಡನ್ ಬ್ರೆಕ್ ಹಾಕಿದ್ರೀ? ಬಿದ್ದೋಗ್ತಿದ್ದೆ ನಾನು..." ಪಾರ್ವತಿಯ ಗೊಣಗನ್ನೂ ಲೆಕ್ಕಿಸದೆ ಇಳಿದು ಸ್ಕೂಟರ್ ಸ್ಟ್ಯಾಂಡು ಹಾಕಿ ನಿಂತು 'ನೋಡಲ್ಲಿ' ಎಂದು ಕತ್ತೆತ್ತಿದ ಪತಿ ಪರಮೇಶ್ವರ.

ಕಣ್ಮುಂದೇ ಆ ಬೋರ್ಡ್ ಇತ್ತು,

"ಪ್ರಾಬ್ಲೆಂ ಫಿಕ್ಸ್? ಹೌದು, ನಾವು ಅದಕ್ಕಾಗೇ ಇದ್ದೇವೆ. ನಿಮ್ಮ ಸಮಯ ಅಮೂಲ್ಯ..ಆದರೆ ಜೀವನದಲ್ಲಿ ಜಗಳಗಳೂ ಇದ್ದೇ ಇವೆ ಅದನ್ನು ಫಿಕ್ಸ್ ಮಾಡಬೇಕಾ? ಬನ್ನಿ ಒಳಗೆ" ಎಂದು ಬರೆದಿತ್ತು ಅದರ ಹೊರಬಾಗಿಲಿಗೆ ಅಂಟಿಸಿದ್ದ ಒಂದು ಮೂರಡಿ ಉದ್ದದ ಬೋರ್ಡ್ ನ ಮೇಲೆ.

"ಅಲ್ವೇ ನೀನೇ ಹೇಳಿದ್ದಲ್ವಾ ಇದು"

ಅಂದು ಪರಮೇಶ್ವರ ಒಳಗೆ ಹೊಕ್ಕ,

ಕುತೂಹಲ ಕೆರಳಿತ್ತು.

ಭಾರತೀಪುರದಂಥ ದೊಡ್ಡದೂ ಅಲ್ಲದ ಚಿಕ್ಕದೂ ಅಲ್ಲದ ಊರಲ್ಲಿ ತಾನಿದ್ದ ಬಾಡಿಗೆ ಮನೆಯೇ ಭೂತವಾಗಿ ಅಲ್ಲಲ್ಲ ಮನೆಮಾಲಿಕ ಭೂತನಂತೆ ಕೊಡುತ್ತಿದ್ದ ವಿಪರೀತದ ಕಾಟಕ್ಕೆ ಪರಮೇಶ್ವರ ಸುಸ್ತಾಗಿ ಹೋಗಿದ್ದ.

ಅಲ್ಲ, ನೀರು ಲೈಟು ಬಾಡಿಗೆ ಈ ಮೂರೂ ಮೂಲಭೂತ ಅಸ್ತ್ರಗಳನ್ನು ಯರ್ರಾಬಿರ್ರಿ ಇವನ ವಿರುದ್ಧ ಬಳಸುತ್ತ ಮಾಲೀಕ ಮಾರ್ತಾಂಡ ಇವನಿಗೆ ಕೊಡುವ ಉಪಟಳ ವಿಪರೀತ ಆಗಿತ್ತು.

ರಾತ್ರಿ ಹತ್ತಕ್ಕೆ ಕರೆಂಟಿನ ಮೇನ್ ಸ್ವಿಚ್ ಅರಿಸಿ, ನೀರಿನ ವಾಲ್ವ್ ತಿರುಗಿಸಿ ಒಂದೇ ಗಂಟೆ ಬರ್ತಿದ್ದ ನೀರು ಸಹ ಸರಿಯಾಗಿ ದಕ್ಕದಂತೆ ಮಾಡ್ತಿದ್ದನಲ್ಲದೆ ಆರಾರು ತಿಂಗಳಿಗೊಮ್ಮೆ ಬಂದು "ಈ ತಿಂಗ್ಳಿಂದ ಎರಡು ಪರ್ಸೆಂಟ್ ಬಾಡಿಗೆ ಜಾಸ್ತಿ ಕೊಡು ಇಲ್ಲಂದ್ರೆ ಖಾಲಿ ಮಾಡು ಜಾಗ" ಎಂದು ಬೆದರಿಸುತ್ತಿದ್ದ ಅವನಿಗೆ ಎದುರಾಗಿ ಎದೆ ಸೆಟೆಸಿ ಕಿತ್ತಾಡಬೇಕಾಗಿ ಬಂದಿತ್ತು. ಅದೂ ಅತ್ಯಂತ ತುರ್ತಾಗಿ!

ಆದರೆ ಪರಮೇಶ್ವರನಿಗೆ ಜಗಳ ಆಡಲು ಟೈಮೇ ಇಲ್ಲ.ಇತ್ತೀಚೆಗಂತೂ ಪ್ರಪಂಚ ಇಡೀ ಎಲ್ಲರ ಕತೆ ಅದೇ. ಯಾವುದಕ್ಕೂ ಟೈಮಿಲ್ಲ.ಅದೂ ಅಲ್ಲದೆ ಪರಮೇಶ್ವರ ತುಂಬ ಮೆದುಗಸ್ತ, ಪಾಪದವನು. ಮಾರ್ತಾಂಡನಂಥವನ ಬಾಯಿಗೆ ಬಾಯಿ ಮಿಲಾಯಿಸಲು ಬಲುದೊಡ್ಡ ಗಂಟಲೇ ಬೇಕು.ಅದಿಲ್ಲವಲ್ಲ ಇವನಲ್ಲಿ!

ಇದೇ ಗೋಳು ತಲೆ ಕಿತ್ತು ತಿನ್ನುತ್ತಿದ್ದ ಒಂದು ದಿನ ದಾರಿಯಲ್ಲಿ ಕಣ್ಣಿಗೆ ಬಿದ್ದದ್ದೇ ಆ 'ಪ್ರಾಬ್ಲೆಂ ಫಿಕ್ಸ್ ಡಾಟ್ ಕಾಂ!'

"ಏನ್ಮಾಡೋಣ ಇವರು ಸಹಾಯ ಮಾಡಿಯಾರೇ?" ಅಂತ ತಲೆ ಕೆದರಿಕೊಳ್ಳುತ್ತ

ನಿಂತಾಗ "ಅಯ್ಯೋ ಇವರೇ ಅಂತೆ ಕಳೆದ ತಿಂಗಳು ರಾಜಕ್ಕನ ಪರವಾಗಿ ಪಕ್ಕದ ಮನೆಯವರೊಟ್ಟಿಗೆ 'ಕಾಂಪೌಂಡ್ ಕಸದ' ಕೇಸು ಫೈಟ್ ಮಾಡಿ ಗೆದ್ದುಕೊಟ್ಟವರು!' ಪಾರ್ವತಿ ಅಚ್ಚರಿಯ ಸುದ್ದಿ ಹೇಳಿದಳು.

ಈಗ ಪ್ರಪಂಚ ಹ್ಯಾಗೆ ಬಿಜಿ ಆಗಿದೆ ಅಂದ್ರೆ ನಿಮಗೇ ಗೊತ್ತು, ಎದುರಲ್ಲೇ ಸಿಕ್ಕ ಬಾಲ್ಯದ ಗೆಳೆಯನನ್ನೂ ಒಂದ್ನಿಮಿಷ ಮಾತಾಡಿಸಲು ಟೈಮೇ ಇಲ್ಲ, ಚಿಕ್ಕ ಮಕ್ಕಳಿಂದ ಹಿಡಿದು ತಲೆ ಅಲ್ಲಾಡೋ ಮುದುಕರವರೆಗೂ ಕೈಯಲ್ಲಿನ ಮೊಬೈಲ್ ಗೆ ಟೈಮಿದೆ ಆದರೆ ತಮ್ಮದೇ ತೊಂದರೆಗಳನ್ನ ನಿಭಾಯ್ಸೋ ಟೈಮಿಲ್ಲ...

ಏನ್ಮಾಡೋದು ಕಲಿಕಾಲ ಅಲ್ವೆ?

ಇಂಥಲ್ಲಿ ಹುಟ್ಟಿಕೊಂಡ ಆಪತ್ ಬಾಂಧವರಲ್ಲಿ ಪ್ರಾಬ್ಲೆಂ ಫಿಕ್ಸ್ ಕೊಂಡಪ್ಪ 'ನಾನಿದ್ದೀನಿ ನಿಮಗಾಗೀ' ಅಂತಾನೆ. ಅವನ ಮತ್ತು ಅವನ ಟೀಂ ಗೆ ಇರುವ ಕಂಠಾಸ್ತ್ರ ಎಂತೆಂಥ ಜಗಳಗಳನ್ನೂ ಸಫಾ ಮಾಡಿದ್ದು ಭಾರತೀಪುರದ ಅನೇಕ ಜನಕ್ಕೆ ಗೊತ್ತು. "ರೀ ಈ ಆರಡಿ ಪ್ಲಸ್ ಮೂರಿಂಚು ಎತ್ತರದ ಕೊಂಡಪ್ಪ ಕೆಂಗಣ್ಣು, ಬಾಯಿ ಬಿಟ್ಟರೆ ನೂರು ಸೈರನ್ ಕೂಗಿದಂತಾಗತ್ತಂತೆ, ತೋಳೇರಿಸಿದರೆ ಖಾಲಿ ಪೀಲಿ ತಗಾದೆಗಾರರು ಮಾತಿಲ್ದೆ ಮಾಯವಾಗುತ್ತಾರಂತೆ."

ಹೀಗೆಂದು ಹೇಳಿದ್ದೇ ಪಾರ್ವತಿ. ಅವಳ ಮಹಿಳಾ ಕೂಟದಲ್ಲಿ ಈ ಮಾಹಿತಿ ನಿತ್ಯ ಸುತ್ತು ಹೊಡೆಯುತ್ತದೆ.

ಪರಮೇಶ್ವರ ಪ್ರಾ.ಫಿ.ಕಾಮ್ ಬಾಗಿಲೊಳಗೆ ಹೊಕ್ಕಾಗ ಹತ್ತು ಜನ ಆಗಲೇ ಕೂತಿದ್ದರು.

ಇವನ ಪಾಳಿ ಬರುವ ಹೊತ್ತಿಗೆ ಕೂತಲ್ಲೇ ಒಂದು ನಿದ್ದೆ ತೆಗೆದಿದ್ದ.

ತಳ್ಳುಬಾಗಿಲು ದೂಡಿ ಒಳಗೆ ಹೋದರೆ...ಅಸಿಸ್ಟೆಂಟು 'ಬನ್ನಿ' ಅಂದ.

"ಕೂತ್ಕೊಳ್ಳಿ ಏನಾಗ್ಬೇಕು ನಿಮಗೆ? ಯಾವ ಏರಿಯಾ"... ಕುರ್ಚಿಯಲ್ಲಿ ಕುಳಿತವನು ನೇರ ವ್ಯವಹಾರಕ್ಕಿಳಿದ.

"ಹೀಗ್ಹೀಗೆ ದೊಡ್ಕತೆ ಉಂಟು, ನಮ್ ಓನರ್ ಮಾರ್ತಾಂಡನ ಹಿಂಸೆ ನಿಲ್ಲಬೇಕು, ನಮಗೆ ನೀರು ನಿಡಿ ಸರಿಯಾಗಿ ಬರ್ಬೇಕು, ನಾವ್ ನೆಮ್ಮದಿಯಾಗಿರಬೇಕು"

"ಅಷ್ಟೇ ತಾನೇ?ಎಂತೆಂಥಾ ಘಟಾನುಘಟಿಗಳಿಗೇ ಬಾಯಿಗೆ ಪ್ಲಾಸ್ಟರ್ ಹಚ್ಚಿದೋನು ನಾನು! ನಿಮ್ದೇನು ಮಹಾ? ಘಡಪೋಶಿ ಮನೆಮಾಲೀಕನ ಕಾಟ ಅಷ್ಟೆ ತಾನೆ?

ಆಗುತ್ತೆ...ಇಗೊಳ್ಳಿ ನಮ್ಮ ಸರ್ವೀಸಸ್ ಲಿಸ್ಟ್, ಪ್ರಾ. ಫಿಕ್ಸ್ .ಕಾಂ ನಲ್ಲೂ ಇದೆ ಬೇಕಿದ್ರೆ." ಈ ಕೊಂಡಪ್ಪನೆಂಬ ಗಂಡಭೇರುಂಡನ ಕಂಠವನ್ನು ಒನಕೆಯಿಂದಲೇ ಎತ್ತಿರಬಹುದೇನೋ ಅನಿಸಿತ್ತು ಪರಮೇಶ್ವರನಿಗೆ.

"ನೀವು ತಿಳಿದಿರೋವಷ್ಟು ಕಮ್ಮಿಅಲ್ರೀ ಅವನು, ಮಹಾಘಟಿಂಗ, ಅವನ ಬಾಯೋ..."

ಮಧ್ಯಕ್ಕೇ ಕತ್ತರಿ ಹಾಕಿದ ಡಾಟ್ಕಾಮ್ ಕೊಂಡಪ್ಪ.

"ನಮ್ಮ ತಾಕತ್ತು, ಬಾಯ್ಪಲ ನಿಮಗ್ಗೊತ್ತಿಲ್ಲ ಅದಕ್ಕೇ ಹೀಗೆ ಮಾತಾಡ್ತೀರಿ. ಈಗೇನು ನಿಮ್ಮನೆ ಮಾಲೀಕ ನಿಮ್ಮ ತಂಟೆಗೆ ಬರ್ದೆ ಹಿಂದೂ ಮುಂದೂ ಮುಚ್ಕೊಂಡಿರಬೇಕು ತಾನೆ?"

'ಸಾಕ್ಸಾಕು' ಪರಮೇಶ್ವರ ಹಿಗ್ಗಿದ.

"ಓಕೆ ನಾಲ್ಕು ಸಾವಿರ ಕಟ್ಟಿ ಈಗ. ನಿಮ್ಕೆಲ್ಸ ಆದ ಮೇಲೆ ಮತ್ತೆ ನಾಲ್ಕು ಸಾವಿರ"

ನಾಲ್ಕು ಸಾವಿರ!? ತನ್ನಿಡೀ ತಿಂಗಳ ಪ್ರಾವಿಶನ್ ಅದು. ಎದೆ ಜಗ್ ಅಂದಿತ್ತು. ಆದರೂ ವಿಧಿಯಿಲ್ಲ.

"ಸೈನು ಮಾಡಿ ಇಲ್ಲಿ, ಈ ಪೇಪರಲ್ಲಿ, ಅವನ ವಂಶಾವಳಿ, ಹೆಂಡತಿ, ಮಕ್ಕಳು, ಅಕ್ಕ,ಅಣ್ಣ ಎಲ್ಲ ಡೀಟೇಲ್ಸ್ ಬರೀರಿ"

"ಅದ್ಯಾಕೆ?" ಪರಮೇಶ್ವರ ಅಚ್ಚರಿಪಟ್ಟ.

"ಮತ್ತೆ ಜಗಳ ಅಂದ್ರೆ ಅವನ ಕುಲಗೋತ್ರ ಉದ್ಧಾರ ಮಾಡೋದು ಬೇಡ್ವೇ? ಸರಿ. ಹಾಗೇ ನಿಮ್ಮದೂ ಎಲ್ಲ ವಿವರ ಹೇಳಿ"

ನಮ್ಮನ್ನೂ ಉದ್ಧಾರ ಮಾಡ್ತಾನೇನೋ? ಅನಿಸಿದರೂ ತೆಪ್ಪಗೆ ಕೇಳಿದ ಎಲ್ಲವನ್ನೂ ಬರೆದುಕೊಟ್ಟ.

"ಜೂನ್ ಮೂವತ್ತೊಂದು ಡೇಟ್ ನಿಮ್ದು, ಅಲ್ಲೀ ತನ್ಕ ಜಾಸ್ತಿ ಮಾತಾಡದೇ ಸುಮ್ಮನಿದ್ದುಬಿಡಿ ನೀವು"

'ಹಾಂ!' ಅಂದ ಪರಮೇಶ್ವರ ಪ್ರಾ. ಫಿಕ್ಸಿಂಗ್ ಆರು ತಿಂಗಳು ದೂರವೇ?

"ಏನ್ ಮಾಡೋದು ಸಾರ್.. ನೋಡ್ತೀರಲ್ಲ ನಾವೆಷ್ಟು ಬಿಜಿ ಅಂತ. ಯಾರ್ಗೂ ಕಾಲ್ ಶೀಟೇ ಕೊಡಕ್ಕಾಗ್ತಿಲ್ಲ. ಪಾಪ ನೀವೇನೋ ಕೇಳಿಕೊಂಡ್ರಿ ಅಂತ..." ನಕ್ಕ ಅವನು.

ಇನ್ನೂ ಗಾಬರಿಯಾಯ್ತು.ಇದೇನು ಸಿನಿಮಾ ಶೂಟಿಂಗ್ ಅಂದುಕೊಂಡಿದ್ದಾನಾ ಕೊಂಡಪ್ಪ? ಅಷ್ಟರಲ್ಲಿ ಅವನು,

"ಸಾರ್ ಯೋಚ್ನೆ ಮಾಡ್ಬೇಡಿ. ನಾವು ಕೈ ಹಾಕಿದ್ರೆ ಕೆಲ್ಸ ಆಯ್ತೂಂತಲೇ ಲೆಕ್ಕ. ಬಾಯಿ ಬಿಟ್ರೆ ನಾಲ್ಕಾರು ಬೀದಿಗೂ ಧನಾದನ್ ಕೇಳಿಸಿಬಿಡ್ಬೇಕು. ನಿಮ್ಮ ಓನರ್ ಯಾರವನು ಮಾತಾರ್ಂಡನಾ? ತೆಪ್ಪಗೆ ಮುಚ್ಕೊಂಡು ಎಂಟಾನೆಂಟು ದಿನ ತಲೆ ಮರೆಸಿಕೋಬೇಕು, ಕಿತಾಪತಿ ಎಲ್ಲ ಬಂದ್ ಮಾಡ್ಬೇಕು. ಹಾಗ್ ಜಗಳ ಮಾಡ್ತೀವಿ. ನೀವೇ ನೋಡೀರಂತೆ ಇನ್ನೊಂದ್ಸಲ ಕಾಟ ಕೊಟ್ರೆ ಕೊಂಡಪ್ಪನ್ನ ಕರೀತೀನಿ ಅಂದುಬಿಡಿ ಸಾಕು. ನಿಮಗೇ ಅದರ ಎಫೆಕ್ಟ್ ಗೊತ್ತಾಗುತ್ತೆ"

ಇದ್ದರೂ ಇದ್ದೀತು..ಅದಕ್ಕೇ ಇಷ್ಟು ಜನ 'ಟೈಮಿಲ್ಲ'ದವರು ಬಂದು ಮುಕುರಿದ್ದಾರೆ

ಇಲ್ಲಿ ಅಂದುಕೊಂಡು ಹೊರಗೆ ಬಂದ.

'ನಾ ಹೇಳಿದ್ದು ಕರೆಕ್ಟು ಅಲ್ವಾ' ನಕ್ಕಳು ಪಾರ್ವತಿ.

ಜೂನ್ ಮೂವತ್ತೊಂದು ಬಂದೇ ಬಂತು.ಡೇಟು ಅರ್ಥಾತ್ ಮಾತು ಕೊಟ್ಟಂತೆ ಕೊಂಡಪ್ಪ ನಾಲ್ಕು ಗಡವಾ ಭಂಟರ ಜತೆ ಬಂದಿಳಿದ.

ಆಹಾ! ಸಾಕ್ಷಾತ್ ಭಗವಂತನೇ ನಮ್ಮ ಕಷ್ಟ ಪರಿಹಾರಕ್ಕಾಗಿ ಬಂದನಾ? ಹಿಗ್ಗಿದರಿವರು.

ಮನೆಯ ಕಿಟಕಿಯೊಳಗೆ ಈ ದಿಕ್ಕಿಗೇ ಮೂತಿ ಇಟ್ಟ ಮಾರ್ತಾಂಡನಿಗೆ ಏನೋ ವಾಸನೆ ಬಡಿದಿತ್ತು.ಮನಸ್ಸಿನಲ್ಲೇ ಮೀಸೆ ತಿರುವಿ ನಕ್ಕೂ ಆಯ್ತು ಅವನು.

'ಬನ್ನಿ ಬನ್ನಿ...' ಪರಮೇಶ್ವರ ಕರೆದ."ಅಂದಹಾಗೆ ಈಗ ಇನ್ನೂ ಎರಡ್ಸಾವಿರ ಕೊಡಿ ಮತ್ತೆ, ಟೋಟಲ್ ಹತ್ತು" ಅಂದ.

"ಅದ್ಯಾಕೆ? ಎಂಟಕ್ಕಲ್ಲವಾ ಮಾತಾಡಿದ್ದು?"

"ಇರ್ಬೋದಿರ್ಬೋದು, ಈಗ ಬಜೆಟ್ ಬಂದು ಯಾಪಾಟಿ ಕಾಸ್ಟ್ಲೀ ಆಗೋಗಿದೆ. ಅದಕ್ಕೇ ನಮ್ಮ ರೇಟು ಹಾಗಿಟ್ವಿ. ಸುಮ್ಮನೆ ದುಡ್ಡಿಡಿ ಇಲ್ಲಿ" ಅಂದ ಕೊಂಡಪ್ಪ.

ಪರಮೇಶ್ವರನ ಟೆಂಪರೇಚರ್ ಏರಿತು, "ಏನನ್ಯಾಯರೀ..ಬಜೆಟ್‌ಗಿಂತ ಮೊದ್ಲೇ ನಮ್ಮ ಕೇಸು ಒಪ್ಕೊಂಡ್ರಲ್ಲ ನೀವು ಈಗ ಅದೇ ರೇಟಲ್ಲೇ ಮಾಡಿಕೊಡಿ"

ಪ್ರತಿಭಟಿಸಿದ.

"ರೀ ನಾವಿರೋದೇ ಹೀಗೆ, ನಮ್ಕೆಲ್ಸ ಮಾಡೋದೇ ಹಾಗೆ. ಈಗೇನು ನಿಮ್ಮ ಪರವಾಗಿ ಜಗಳ ಆಡಬೇಕೋ ಬ್ಯಾಡವೋ? ಕ್ಯಾನ್ಸಲ್ ಮಾಡ್ಕೊಂಡ್ರೆ ಅಡ್ವಾನ್ಸ್‌ನ ಅರ್ಧಭಾಗ ಮಾತ್ರ ವಾಪಸ್ ನಿಮಗೆ" ಟಗರಿನಂತೆ ಸೆಟೆದು ನಿಂತ.

ತಲೆ ದಿಮ್ ಅಂತು. ಒಳ್ಳೇ ಮುಳ್ಳುಹಂದೀ ಸಹವಾಸ ಆಯ್ತಲ್ಲ ಹೇಳೀ ಕೇಳೀ ಜಗಳಕ್ಕೇ ಬಂದಿರೋ ಪ್ರಾಣಿ. ಈಗ ಬಿಟ್ರೆ ಕೊಟ್ಟಿರೋ ದುಡ್ಡಿಗೂ ಓನಾಮ ಹಾಕಿಯಾನು...ಛೇ ಛೆ ಒಳ್ಳೆ ಪೀಡೆತಂದು ಮನೆ ಹೊಗಿಸಿಕೊಂಡ್ನಲ್ಲ..ಹೊಟ್ಟೆ ಉರಿಯಿತು.

ಆದರೂ ಕೈ ಕೈ ಉಜ್ಜುತ್ತ "ಅಲ್ಲರೀ...ಸರ್ ನೀವೇ ಒಮ್ಮೆ ಯೋಚನೆ ಮಾಡಿ. ಮೊದಲು ಮಾತು ಕೊ..."

ಅದೇ ಕ್ಷಣ ಸಿಡಾರಂತ ಎದ್ದು ನಿಂತ ಕೊಂಡಪ್ಪ ಗುಡುಗಿನಂತೆ ಆರ್ಭಟಿಸಿ "ರೀ ಅದಕ್ಕೇ ನಿಮ್ಮಂತಾ ಫಡಪೋಶಿ ಪಾರ್ಟಿಗಳ ಕೇಸಿಗೆ ಕೈ ಇಡಲ್ಲ ನಾವು. ಕೆಲ್ಸ ಆಗಬೇಕು ದುಡ್ಡು ಮಾತ್ರ ಕೊಡಲ್ಲ..ಯೇಯ್ ಹೋಗೋಗ್ರೀ" ಅಬ್ಬರಿಸಿ ಬಾಗಿಲು ಧಡ್ ಅಂತ ತೆರೆದು ಹೋಗೇಬಿಟ್ಟ!

ಮಾರ್ತಾಂಡನ ಮುಖ, ಕಿವಿ ಇನ್ನೂ ಕಿಟಕಿಯಲ್ಲೇ! ಐದಾರು ತಿಂಗ್ಳಿಂದ ಏನೋ ಮಸಲತ್ತಿನ ಗುಮಾನಿ ಇತ್ತು. ಆದರೆ ಸ್ಪಷ್ಟ ಆಗಿರಲಿಲ್ಲ.

ಕಳೆದ ವಾರ ಬಂದಿದ್ದ ಅನುಮಾನ ಹೆಚ್ಚಾಗಿ ಕೊಂಡಪ್ಪನಿಗೆ ಒಂದು ಫೋನು ಹೊಡೆದಿದ್ದ ಅವನು.

ಪರಮೇಶ್ವರನ ಮಗ ಓಡೋಡಿ ಬಂತು. "ಅಪ್ಪ.. ಈಗ ಬಂದಿದ್ನಲ್ಲ ಅವನು ಅಲ್ಲಿಗೆ ಹೋಗಿದ್ದಾನೆ ನೋಡು"

"ಅಯ್ಯೋ ಪಿಶಾಚಿ, ಕೊಂಡಪ್ಪನ್ನೇ ಬುಟ್ಟಿಗೆ ಹಾಕ್ಕೊಂಡನಾ ಇವನು." ಪಾರ್ವತಿ ತಲೆ ಮೇಲೆ ಕೈ ಹೊತ್ತಿದ್ದಾಯ್ತು.

"ಹೋಗು ಪುಟ್ಟ ಅವರ ಮನೆ ಕಿಟಕೀ ಹತ್ರ ನಿಂತ್ಕೋ"

ಹತ್ತು ನಿಮಿಷದಲ್ಲಿ ಹುಡುಗ ವಾಪಸ್ ಬಂತು. "ಅಪ್ಪ ಅಪ್ಪ ಮಾರ್ತಾಂಡ ಅದೆಷ್ಟೋ ದುಡ್ಡು ಆ ಮನ್ಯನ ಕೈಗೆ ಕವರಿಗೆ ಹಾಕಿ ಕೊಟ್ರಪ್ಪ"

ಪರಮೇಶ್ವರನ ಎದೆ ಝಲ್ ಅಂದಿತ್ತು!

ಐದೇ ನಿಮಿಷದಲ್ಲಿ ಕೊಂಡಪ್ಪ ತನ್ನ ಟೀಂ ಜೊತೆ ಕಂಠಾಸ್ತ್ರ ಸನ್ನದ್ಧನಾಗಿ ಇಲ್ಲಿಗೆ ಬಂದ.

ಮುಂದಿನ ನಾಟಕ ಅವನು ಹೇಳಿದ್ದಕ್ಕಿಂತಲೂ ಜೋರಾಗಿ ನಡೀತು!

ಯಾಕಾದರೂ ಈ ದುರುಳನ ಕೈಗೆ ತನ್ನ ವಂಶಾವಳಿ ಕೊಟ್ಟೆ ಎಂದು ಹಳೆ ಎಕ್ಕಡ ತೊಗೊಂಡು ಹಣೆ ಚಚ್ಚಿಕೊಂಡ ಪರಮೇಶ್ವರ.

ಉಪಸಂಹಾರ!!

ಪ್ರಾಬ್ಲಂ ಫಿಕ್ಸ್.ಕಾಮ್ ನಿಂದ ಪ್ರಾಬ್ಲೆಂ ಸಾಲ್ವ್ ಆಯ್ತು ಅಂತಲೇ ಲೆಕ್ಕ.. ಅದೇ– ಪರಮೇಶ್ವರ ಪಾರ್ವತಿ ಈಗ ಭಾರತೀಪುರದಾಚೆಗೆ ಮೂವತ್ತು ಮೈಲಿ ದೂರದ ಬಡಾವಣೆಯೊಂದರಲ್ಲಿ ಒಂದೇ ಕೋಣೆಯ ಒಂದು ಮನೆಯಲ್ಲಿದ್ದಾರೆ.

ಅವನಿದ್ದ ಮಾರ್ತಾಂಡನ ಎರಡು ಕೋಣೆಯ ಮನೆಗೆ ಬೋರೇಗೌಡ ಬಂದು ಕೂತಿದ್ದಾನೆ!! ■